ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 21 ಮಂಗಳವಾರ 2024

45

ಸಂಪುಟ: 45 | ಸಂಚಿಕೆ: 35 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಆ.20ರಂದು ಅರಸು ಪ್ರತಿಮೆ ಅನಾವರಣ

ಭರದಿಂದ ಸಾಗಿದೆ ಪ್ರತಿಮೆ ರೂಪಿಸುವ ಕಾರ್ಯ





ಮೈಸೂರು, ಮೇ 20(ಜಿಎ)–ಮೈಸೂರಿನ ಸಿದ್ಧಾರ್ಥನಗರದಲ್ಲಿನ ಜಿಲ್ಲಾಧಿಕಾರಿ ಕಚೇರಿ ಒಳಗೊಂಡಂತೆ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಲಾಗಿರುವ ಮಾಜಿ ಮುಖ್ಯಮಂತ್ರಿ, ಹಿಂದುಳಿದ ವರ್ಗಗಳ ಅಭಿವೃದ್ಧಿಯ ಹರಿಕಾರ ಡಿ.ದೇವರಾಜ ಅರಸು ಅವರ ಪ್ರತಿಮೆ ರೂಪಿಸುವ ಕಾರ್ಯ ಆರಂಭಗೊಂಡಿದ್ದು, ಅವರ ಮುಂದಿನ ಜಯಂತಿಯಂದು ಪ್ರತಿಮೆ ಲೋಕಾರ್ಪಣೆಗೊಳ್ಳುವ ಸಾಧ್ಯತೆ ಇದೆ.

ಮೈಸೂರು ಜಿಲ್ಲೆಯವರೇ ಆದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಪ್ರತಿಮೆ ಸ್ಥಾಪಿಸಬೇಕೆಂಬ ಅಭಿಮಾನಿಗಳು ಮತ್ತು ಅನುಯಾಯಿಗಳ ಹಲವು ವರ್ಷಗಳ ಹೋರಾಟಕ್ಕೆ ಕೊನೆಗೂ ಸ್ಪಂದನೆ ದೊರೆತ ಹಿನ್ನೆಲೆಯಲ್ಲಿ ಫೆ.19ರಂದು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗಿದೆ. 92 ಲಕ್ಷ ರೂ. ವೆಚ್ಚದಲ್ಲಿ 12 ಅಡಿ ಎತ್ತರದ ಕಲ್ಲಿನ ಪ್ರತಿಮೆ ಪ್ರತಿಷ್ಠಾಪಿಸಲಾಗುತ್ತಿದ್ದು, ಖ್ಯಾತ ಶಿಲ್ಪಿ ಸಹೋದರರಾದ ಅರುಣ್ ಯೋಗಿರಾಜ್ ಹಾಗೂ ಸೂರ್ಯ ಪ್ರಕಾಶ್ ಪ್ರತಿಮೆ ಸಿದ್ಧಪಡಿಸುವ ಹೊಣೆ ಹೊತ್ತಿದ್ದಾರೆ. ಈಗಾಗಲೇ ದೇವರಾಜ ಅರಸು ಅವರ ಅನೇಕ ಪುತ್ಥಳಿ, ಫೋಟೋಗಳನ್ನು ಆಧರಿಸಿ, ಥರ್ಮಕೋಲ್‌ನಲ್ಲಿ ಪ್ರತಿಮೆ ಪ್ರತಿರೂಪವನ್ನು ಸಿದ್ಧಪಡಿಸಿಕೊಂಡಿದ್ದಾರೆ.

“ ಥರ್ಮಕೋಲ್‌ನಲ್ಲಿ ಪ್ರತಿಮೆಯ ಪ್ರತಿರೂಪವನ್ನು ಸಿದ್ಧಪಡಿಸಿಕೊಳ್ಳಲಾಗಿದ್ದು, ಚಾಮರಾಜನಗರದ ಮುಳ್ಳೂರಿನ ಕ್ವಾರೆಯೊಂದರಲ್ಲಿ ಕಲ್ಲನ್ನು ಗುರುತಿಸಲಾಗಿದೆ. ಸದ್ಯದಲ್ಲಿಯೇ ಕೆತ್ತನೆ ಕಾರ್ಯ ಆರಂಭಿಸಲಾಗುವುದು. ಶಂಕುಸ್ಥಾಪನೆಯಾಗಿ ಮೂರು ತಿಂಗಳಾಗುತ್ತಿದೆ. ಆದರೆ, ಸರ್ಕಾರದಿಂದ ಇನ್ನು ಹಣ ಬಿಡುಗಡೆಯಾಗಿಲ್ಲ. ಆದರೂ ನಾವೇ ಹಣ ಹಾಕಿ ಕೆಲಸ ಆರಂಭಿಸಿದ್ದೇವೆ.
– ಶಿಲ್ಪಿ ಸೂರ್ಯ ಪ್ರಕಾಶ್

“ ಅನುದಾನ ಬಿಡುಗಡೆಯಲ್ಲಿ ಯಾವುದೇ ಸಮಸ್ಯೆಯಾಗಿಲ್ಲ. ನಮ್ಮ ಇಲಾಖೆಯಿಂದ ಒಂದೇ ಹಂತದಲ್ಲಿ ನಿರ್ಮಿತಿ ಕೇಂದ್ರಕ್ಕೆ 92 ಲಕ್ಷ ಹಣ ವರ್ಗಾಯಿಸಲಾಗಿದೆ. ಈಗ ಸಂಪೂರ್ಣ ಜವಾಬ್ದಾರಿ ನಿರ್ಮಿತಿ ಕೇಂದ್ರದ್ದಾಗಿದೆ. –ಎಂ.ಡಿ.ಸುದರ್ಶನ್, ಸಹಾಯಕ ನಿರ್ದೇಶಕ, ಕನ್ನಡ–ಸಂಸ್ಕೃತಿ ಇಲಾಖೆ.

“ ಪ್ರತಿಮೆ ನಿರ್ಮಾಣದ ಸಂಪೂರ್ಣ ಅನುದಾನ ಜಿಲ್ಲಾ ಖಜಾನೆಯಲ್ಲಿದೆ. ನಿಯಮಾನುಸಾರ ಈವರೆಗೂ ಶಿಲ್ಪಿಗಳು ಸೇರಿದಂತೆ ಯಾವುದೇ ಕಾರ್ಯಕ್ಕೆ ಅನುದಾನ ಬಿಡುಗಡೆ ಮಾಡಿಲ್ಲ. ಶಿಲ್ಪಿಗಳು ಈಗ ಥರ್ಮಕೋಲ್‌ನಲ್ಲಿ ಪ್ರತಿಮೆ ಪ್ರತಿರೂಪ ಸಿದ್ಧಪಡಿಸಿಕೊಂಡು ಕಲ್ಲನ್ನು ಆಯ್ಕೆ ಮಾಡಿದ್ದಾರೆ. ಕೆತ್ತನೆ ಕಾರ್ಯ ಆರಂಭವಾಗಿ ಶೇ.10ರಷ್ಟು ಪ್ರತಿಮೆ ರೂಪ ಕಂಡಾಗ ಅನುದಾನ ಬಿಡುಗಡೆ ಮಾಡಲಾಗುತ್ತದೆ. –ಮಹೇಶ್‌ಕುಮಾರ್, ಯೋಜನಾಧಿಕಾರಿ, ನಿರ್ಮಿತಿ ಕೇಂದ್ರ.

“ ಪ್ರತಿಮೆ ಪೀಠ ಕಾರ್ಯವು ಬೆಂಗಳೂರಿನಲ್ಲಿ ಪೂರ್ಣಗೊಂಡಿದ್ದು, ಅದರಲ್ಲಿ ಯಾರ ಹೆಸರುಗಳನ್ನು ನಮೂದಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದ ನಂತರ ಆ.20ರೊಳಗೆ ಅಳವಡಿಸಲಾಗುತ್ತದೆ. ಪ್ರತಿಮೆ ನಿರ್ಮಾಣದ ಪ್ರತಿ ಹಂತದ ಬಗ್ಗೆಯೂ ಮಾಹಿತಿ ಕಲೆ ಹಾಕುತ್ತಿದ್ದು, ಶಿಲ್ಪಿಗಳು ಈಗ ಥರ್ಮಕೋಲ್‌ನಲ್ಲಿ ಪ್ರತಿಮೆಯ ಪ್ರತಿರೂಪವನ್ನು ಸಿದ್ಧಪಡಿಸಿಕೊಂಡು ಕಲ್ಲನ್ನು ಆಯ್ಕೆ ಮಾಡಿದ್ದಾರೆ. ತಮ್ಮ ಸ್ವಂತ ಖರ್ಚಿನಲ್ಲಿ ಪ್ರತಿಮೆ ಕಾರ್ಯವನ್ನು ಆರಂಭಿಸಿದ್ದಾರೆ. ಆದರೆ, ನಿರ್ಮಿತಿ ಕೇಂದ್ರದಿಂದ ಅವರಿಗೆ ಈವರೆಗೂ ಅನುದಾನ ಬಿಡುಗಡೆಯಾಗಿಲ್ಲ. ಸದ್ಯದಲ್ಲಿ ಬಿಡುಗಡೆಯಾಗಲಿದೆ. ಆ.20ರಂದು ದೇವರಾಜ ಅರಸು ಅವರ ಜಯಂತಿಯಂದು ಪ್ರತಿಮೆ ಅನಾವರಣಗೊಳ್ಳಲಿದೆ.
–ಜಾಕೀರ್‌ಹುಸೇನ್, ರಾಜ್ಯಾಧ್ಯಕ್ಷ, ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ.

ಮಹಾರಾಣಿ ದೇವಾಜಮ್ಮಣ್ಣಿ ಅಂಚೆ ಕಾರ್ಡ್ ಲೋಕಾರ್ಪಣೆ

ಸಿಡುಬು ಲಸಿಕೆ ಪರಿಚಯಿಸಿ, ಪ್ರಚಾರಪಡಿಸಿದ ದೇವಾಜಮ್ಮಣ್ಣಿ ಪಾತ್ರ ಹಿರಿದು

ಮೈಸೂರು, ಮೇ 20(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಸೋಮವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್ ಮಹಾರಾಣಿ ದೇವಾಜಮ್ಮಣ್ಣಿ ಅವರ ಅಂಚೆ ಕಾರ್ಡ್ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ದೇವಾಜಮ್ಮಣ್ಣಿ ಅವರು ಸಿಡುಬು ಲಸಿಕೆಯನ್ನು ಭಾರತಕ್ಕೆ ಮೊದಲ ಬಾರಿ ಪರಿಚಯಿಸುವಲ್ಲಿ ಮತ್ತು ಪ್ರಚಾರ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ ಕಾರ್ಯ ಸಾಧನೆಗಳನ್ನು ಪ್ರಶಂಸಿಸುವ ಸಲುವಾಗಿ ಅವರ ಹೆಸರಿನಲ್ಲಿ ಈ ಅಂಚೆ ಕಾರ್ಡ್ ಅನ್ನು ಹೊರತರಲಾಗಿದೆ ಎಂದರು.

ಸಿಡುಬಿನ ಕಾಯಿಲೆಯು ಅಂದಿನ ಕಾಲದಲ್ಲಿ ತೀರ ಸಾಮಾನ್ಯವಾಗಿತ್ತು. ಈ ಸಮಸ್ಯೆಯನ್ನು ಪರಿಹರಿಸಲು ದೇವಾಜಮ್ಮಣ್ಣಿ ಅವರು ಪ್ರಯತ್ನ ನಡೆಸಿದ್ದರು. ಸಾಮಾಜಿಕ ಹಿತ ಚಿಂತನೆಯ ದೃಷ್ಟಿಯಿಂದ ಮತ್ತು ಸಮಾಜದ ಏಳಿಗೆಗಾಗಿ ಅವರು ಸಮಾಜಕ್ಕೆ ನೀಡಿದ ಕೊಡುಗೆ ಮಹತ್ವಪೂರ್ಣವಾದದ್ದು. ಆದ್ದರಿಂದ ಅವರ ನೆನಪಿಗಾಗಿ ಅವರ ಹೆಸರಿನಲ್ಲಿ ಪೋಸ್ಟ್ ಕಾರ್ಡ್ ಅನ್ನು ಬಿಡುಗಡೆಗೊಳಿಸಲಾಗಿದೆ. ಮಹಾರಾಣಿ ಕಾಲೇಜಿನ ಇತಿಹಾಸ ಪ್ರಾಧ್ಯಾಪಕಿ ಡಾ.ಸುಧಾಮಣಿ ಅವರು 600 ಪುಟಗಳನ್ನೊಳಗೊಂಡ ರಾಜಮನೆತನದ ವಿಶೇಷತೆಯ ಸಾಧನೆಗಳನ್ನು ಕುರಿತಾದ ಗ್ರಂಥವನ್ನು ರಚಿಸಿದ್ದಾರೆ. ಆ ಗ್ರಂಥವು ದೇವಾಜಮ್ಮಣ್ಣಿ ಅವರ ಕುರಿತು ತಿಳಿಸುತ್ತದೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್, ಮಹಾರಾಣಿ ದೇವಾಜಮ್ಮಣ್ಣಿ ಅವರ ಅಂಚೆ ಕಾರ್ಡ್ ಲೋಕಾರ್ಪಣೆಗೊಳಿಸಿದರು.

ಮೈಸೂರು ರಾಜಮನೆತನದವರು ಈ ನಾಡನ್ನು ಸಂರಕ್ಷಿಸಿದವರು. ಜನಸಾಮಾನ್ಯರು ದೇವಾಜಮ್ಮಣ್ಣಿ ಅವರ ಕಾರ್ಯಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಗೌರವಿಸಲು ಇಂದು ನೆರವಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು ಕಾಪಾಡಲು ಪ್ರಯತ್ನಿಸಿದಂತೆ ಆ ಕಾಲದಲ್ಲಿ ರಾಜಮನೆತನವು ಕೂಡ ಶ್ರಮಿಸಿದೆ ಎಂದರು.

ಈ ವೇಳೆ ಮೈಸೂರು ಅಂಚೆ ವಿಭಾಗದ ಹಿರಿಯ ಅಧೀಕ್ಷಕಿ ಡಾ.ಏಂಜಲ್‌ರಾಜ್ ಮಾತನಾಡಿ, ಇದು ನಮ್ಮ ಕನಸಿನ ಕಾರ್ಯವಾಗಿದ್ದು, ದೇವಾಜಮ್ಮಣ್ಣಿ ಕುರಿತು ಹಲವರೊಂದಿಗೆ ಚರ್ಚಿಸಿ, ಸಂಶೋಧನೆ ನಡೆಸಿ ಕಾರ್ಡನ್ನು ಹೊರತರಲಾಗಿದೆ ದೇವಾಜಮ್ಮಣ್ಣಿ ಅವರು ರಾಜಮನೆತನದ ಮಗಳಾಗಿ, ರಾಣಿಯಾಗಿ ಸಮಾಜಕ್ಕೆ ನೀಡಿದ ಕೊಡುಗೆ ಅತ್ಯಂತ ಪ್ರಶಂಸನೀಯ ಎಂದರು.

ಕಾರ್ಯಕ್ರಮದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್‌ನ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಡಾ.ಎಂಜಿಆರ್ ಅರಸ್, ಅನ್ವೇಷಣಾ ಸೇವಾ ಟ್ರಸ್ಟ್‌ನ ಉಪಾಧ್ಯಕ್ಷ ನಿಂಗರಾಜಯ್ಯ, ಸಂಸ್ಥಾಪಕ ಅಧ್ಯಕ್ಷ ಅಮರ್‌ನಾಥರಾಜೇ ಅರಸ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಮುಂದುವರೆದ ಮಳೆ ಅಬ್ಬರ

ಮೈಸೂರು, ಮೇ 20(ಎಂಕೆ)– ಮೈಸೂರಿನಲ್ಲಿ ಮಳೆ ಅಬ್ಬರ ಮುಂದುವರೆದಿದ್ದು, ಸೋಮವಾರ ಮಧ್ಯಾಹ್ನದಿಂದ ತಡರಾತ್ರಿವರೆಗೂ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಸುರಿಯಿತು.

ಮಧ್ಯಾಹ್ನ 2.30ರ ವೇಳೆಗೆ ಸಿದ್ಧಾರ್ಥನಗರ, ಕೆ.ಸಿ.ಬಡಾವಣೆ, ಆಲನಹಳ್ಳಿ, ಯರಗನಹಳ್ಳಿ, ಮೆಲ್ಲಹಳ್ಳಿ, ಹಾರೋಹಳ್ಳಿ, ಬನ್ನೂರು ಭಾಗದ ಕಡೆಯಿಂದ ಆರಂಭವಾದ ಮಳೆ, 3 ಗಂಟೆಯ ನಂತರ ನಗರದೆಲ್ಲೆಡೆ ಆವರಿಸಿತು. ಕೆಲ ಸಮಯ ಬಾರೀ ಜೋರು ಮತ್ತೆ ಕೆಲ ವೇಳೆ ತುಂತುರು ಹನಿ ಹಾಕಿದ ಮಳೆಯಿಂದಾಗಿ ಮಾರುಕಟ್ಟೆಗಳು, ರಸ್ತೆ ಬದಿ ವ್ಯಾಪಾರ ವಿರಳವಾಗಿತ್ತು.

ಕುವೆಂಪುನಗರ, ರಾಮಕೃಷ್ಣನಗರ, ಶಾರದಾದೇವಿನಗರ, ದಟ್ಟಗಳ್ಳಿ, ಜೆಪಿ ನಗರ ಭಾಗದಲ್ಲಿ ಮಳೆ ಆರ್ಭಟ ಜೋರಾಗಿದ್ದು ಜನಜೀವನ ಅಸ್ತವ್ಯಸ್ತಗೊಂಡಿತ್ತು. ಗಂಟೆಗೂ ಹೆಚ್ಚು ಕಾಲ ಧಾರಾಕಾರವಾಗಿ ಸುರಿದ ಮಳೆಗೆ ವಾಹನ ಸವಾರರು ಪರದಾಡುವಂತಾಯಿತು. ರಸ್ತೆಗಳು ಸಂಪೂರ್ಣ ಜಲಾವೃತ್ತಗೊಂಡಿದ್ದರಿಂದ ಕಾರುಗಳು ಮುಂದೆ ಸಾಗದೆ ಅಲ್ಲಲ್ಲಿಯೇ ನಿಲ್ಲಿಸಿದ ದೃಶ್ಯಗಳು ಕಂಡು ಬಂದವು. ಮಳೆಯ ರಭಸಕ್ಕೆ ದ್ವಿಚಕ್ರ ವಾಹನ ಸವಾರರ ಪರಿಸ್ಥಿತಿಯಂತು ಶೋಚನೀಯವಾಗಿತ್ತು.



ಬನ್ನಿಮಂಟಪ, ಕೆ.ಟಿ.ಸ್ಟ್ರೀಟ್, ಮಂಡಿ ಮೊಹಲ್ಲಾ, ಉದಯಗಿರಿ, ಯರಗನಹಳ್ಳಿ, ಎನ್.ಆರ್.ಮೊಹಲ್ಲಾ, ಕ್ಯಾತಮಾರನಹಳ್ಳಿ ಭಾಗದಲ್ಲಿ ಕೆಲವೊತ್ತು ಆರ್ಭಟಿಸಿದ ಮಳೆ, ನಂತರ ಕಡಿಮೆಯಾಯಿತು. ಸಂಜೆಯವರೆಗೆ ಆಗಾಗ ಬಿಡುವು ನೀಡಿ ಹನಿ ಹಾಕುತ್ತಿದ್ದ ಮಳೆಯಿಂದಾಗಿ ಪಾದಚಾರಿಗಳು, ದ್ವಿಚಕ್ರ ವಾಹನ ಸವಾರರು, ವ್ಯಾಪಾರಸ್ಥರು ಹೈರಾಣಾದರು.

ನಗರದ ಪ್ರಮುಖ ರಸ್ತೆಗಳು, ಚರಂಡಿಗಳು ಉಕ್ಕಿ ಹರಿದವು. ತಗ್ಗುಪ್ರದೇಶದಲ್ಲಿ ಮನೆಗಳಿಗೆ ನೀರು ನುಗ್ಗಿ ಪರದಾಡುವಂತಾಗಿತ್ತು. ಜನಜಂಗುಳಿಯಿಂದ ತುಂಬಿರುತ್ತಿದ್ದ ದೇವರಾಜ ಮಾರುಕಟ್ಟೆ, ಅಗ್ರಹಾರ ಚಿಕ್ಕ ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆಯಲ್ಲಿ ಜನ ಸಂದಣಿ ವಿರಳವಾಗಿತ್ತು. ದ್ವಿಚಕ್ರ ಹಾಗೂ ಸೈಕಲ್ ಸವಾರರು ಮಳೆಯ ನಡುವೆಯೇ ಸಂಚರಿಸುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಗಾಳಿಯ ವೇಗ ಕಡಿಮೆ ಇದ್ದಿದ್ದರಿಂದ ನಗರದಲ್ಲಿ ಮರಗಳು, ಮರದ ರಂಬೆ–ಕೊಂಬೆಗಳು, ವಿದ್ಯುತ್ ಕಂಬಗಳು ಮುರಿದು ಬಿದ್ದಿಲ್ಲ. ಸರಗೂರು ತಾಲೂಕಿನಲ್ಲಿ ಒಂದೆರೆಡು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆಯೇ ಹೊರತು ದೊಡ್ಡ ಮಟ್ಟದ ಯಾವುದೇ ಹಾನಿಯಾಗಿಲ್ಲ ಎಂದು ಚೆಸ್ಕಾಂ ಅಧಿಕಾರಿಯೊಬ್ಬರು ‘ಮೈಸೂರು ಮಿತ್ರ’ನಿಗೆ ತಿಳಿಸಿದರು. ಹಾಗೆಯೇ ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಟಿ.ನರಸೀಪುರ, ನಂಜನಗೂಡು, ಸರಗೂರು ತಾಲೂಕು ಸೇರಿದಂತೆ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ.

ಸೋಲಾರ್ ಡೆಕಥ್ಲಾನ್ ಇಂಡಿಯಾ ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ ವಿತರಣೆ



ಮೈಸೂರು, ಮೇ 20–ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ ನಡೆದ ‘ಸೋಲಾರ್ ಡೆಕಥ್ಲಾನ್ ಇಂಡಿಯಾ–2023, 24’ ಸ್ಪರ್ಧೆಯಲ್ಲಿ ವಿಜೇತರಿಗೆ ಎನರ್ಜಿ ಎಫಿಷಿಯೆನ್ಸಿ ಸಂಸ್ಥೆ ಅಧ್ಯಕ್ಷ ಸತೀಶ್‌ಕುಮಾರ್ ಪ್ರಶಸ್ತಿ ವಿತರಿಸಿದರು.

ಮಲ್ಟಿ ಫ್ಯಾಮಿಲಿ ಹೌಸಿಂಗ್ ವಿಭಾಗದಲ್ಲಿ ಎನ್‌ಎಂಐಎಂಎಸ್ ಆರ್ಕಿಟೆಕ್ಚರ್ ಮತ್ತು ಎಂಜಿನಿಯರಿಂಗ್ ಕಾಲೇಜು ಪ್ರಥಮ, ಡಿವೈ ಪಾಟೀಲ್ ವಿಶ್ವವಿದ್ಯಾಲಯದ ತಂಡ –ದ್ವಿತೀಯ, ಶೈಕ್ಷಣಿಕ ಕಟ್ಟಡ ವಿಭಾಗದಲ್ಲಿ ಜಾಮಿಯಾ ಮಿಲಿಯಾ ಇಸ್ಲಾಮಿಯಾ ಕಾಲೇಜು ಪ್ರಥಮ, ಆರ್‌ವಿ ಕಾಲೇಜು ದ್ವಿತೀಯ, ಕಚೇರಿ ಕಟ್ಟಡ ವಿಭಾಗದಲ್ಲಿ ಬಿಎಂಎಸ್ ಕಾಲೇಜು ಪ್ರಥಮ, ಐಇಎಸ್ ಕಾಲೇಜು ದ್ವಿತೀಯ ಸ್ಥಾನ ಪಡೆಯಿತು.

ಸಮುದಾಯದ ಸ್ಥಿತಿ ಸುಧಾರಣೆಯ ಯೋಜನೆ ವಿಭಾಗದಲ್ಲಿ ಎಸ್‌ಎಂಇಎಫ್ ಕಾಲೇಜು ಪ್ರಥಮ, ಎಂಬಿಎಸ್ ಕಾಲೇಜು, ಸಿಇಪಿಟಿ ಕಾಲೇಜು, ದೆಹಲಿ ವಿಶ್ವವಿದ್ಯಾಲಯ ದ್ವಿತೀಯ, ಕಟ್ಟಡ ಕಾರ್ಮಿಕರ ವಸತಿ ವಿಭಾಗದಲ್ಲಿ ಎಸ್‌ಎಂಇಎಫ್ ಕಾಲೇಜು, ವಿಶ್ವಕರ್ಮ ಕಾಲೇಜು ದ್ವಿತೀಯ, ರೆಸಿಡೆನ್ಶಿಯಲ್ ಕೂಲಿಂಗ್ ರೆಟ್ರೋಫಿಟ್ ವಿಭಾಗದಲ್ಲಿ ಐಇಎಸ್ ಕಾಲೇಜು, ದ್ವಾರಕಾದಾಸ್ ಜೆ.ಸಾಂಘ್ವಿ ಕಾಲೇಜು, ಯುನೈಟೆಡ್ ವರ್ಲ್ಡ್ ಕಾಲೇಜು ಪ್ರಥಮ, ನಾಗಪುರದ ವಿಶ್ವೇಶ್ವರಯ್ಯ ಕಾಲೇಜು ತಂಡ ದ್ವಿತೀಯ ಸ್ಥಾನ ಪಡೆಯಿತು. ಐಐಹೆಚ್‌ಎಸ್ ನಿರ್ದೇಶಕ ಅರೋಮರ್ ರೇವಿ, ಐಯುಎಸ್ ಎಸ್‌ಟಿಎಫ್ ನಿರ್ದೇಶಕಿ ಡಾ.ನಿಶಾ, ಸೋಲಾರ್ ಡೆಕಥ್ಲಾನ್ ಇಂಡಿಯಾದ ನಿರ್ದೇಶಕ ಪ್ರಸಾದ್ ವೈದ್ಯ, ಇನ್ಫೋಸಿಸ್ ಗ್ಲೋಬಲ್ ಮುಖ್ಯಸ್ಥ ಅರುಣಾ ನ್ಯೂಟನ್, ಗುರುಪ್ರಕಾಶ್ ಶಾಸ್ತ್ರಿ, ಡಾ.ಚೈತಾಲಿ ಭಟ್ಟಾಚಾರ್ಯ ಉಪಸ್ಥಿತರಿದ್ದರು.

ಬಂಡೀಪುರ ಅರಣ್ಯದಲ್ಲಿ ಹೆಣ್ಣಾನೆ ಸಾವು



ಮೈಸೂರು, ಮೇ 20(ಎಸ್‌ಬಿಡಿ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಹೆಡಿಯಾಲ ಉಪ–ವಿಭಾಗ, ಮೊಳೆಯೂರು ವಲಯದ ಅರಣ್ಯ ಪ್ರದೇಶದಲ್ಲಿ ಸುಮಾರು 25 ವರ್ಷದ ಹೆಣ್ಣಾನೆ ಅನಾರೋಗ್ಯದಿಂದ ಸೋಮವಾರ ಸಾವನ್ನಪ್ಪಿದೆ.

ಅರಣ್ಯ ಸಿಬ್ಬಂದಿ ಭಾನುವಾರ ಗಸ್ತಿನಲ್ಲಿದ್ದಾಗ ಹಿಡುಗಲಪಂಚೀ ಕೆರೆ ಸಮೀಪ ಆನೆಯೊಂದು ನಿತ್ರಾಣವಾಗಿ ಬಿದ್ದಿತ್ತು. ಈ ಬಗ್ಗೆ ಸಿಬ್ಬಂದಿ ಮಾಹಿತಿ ತಿಳಿಸಿದ ನಂತರ ಮೇಲಧಿಕಾರಿಗಳು ಹಾಗೂ ಪಶುವೈದ್ಯಾಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಆನೆ ಅನಾರೋಗ್ಯದಿಂದ ಬಳಲುತ್ತಿರುವುದು ಗೊತ್ತಾಯಿತು. ಕೂಡಲೇ ವೈದ್ಯರು ಚಿಕಿತ್ಸೆ ಆರಂಭಿಸಿದರು. ಆದರೆ ಚಿಕಿತ್ಸೆಫಲಕಾರಿಯಾಗದೆ ಸೋಮವಾರ ಮುಂಜಾನೆ ಸುಮಾರು 4 ಗಂಟೆ ವೇಳೆಗೆ ಆನೆ ಅಸುನೀಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ಎಸ್.ಪ್ರಭಾಕರನ್, ಹೆಡಿಯಾಲ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ರವೀಂದ್ರ, ಮೊಳೆಯೂರು ವಲಯ ಅರಣ್ಯಾಧಿಕಾರಿ ಅಮೃತಾ ಮಾಯಪ್ಪನವರ್, ಐನೂರು ಮಾರಿಗುಡಿ ವಲಯ ಅರಣ್ಯಾಧಿಕಾರಿ ಡಿ.ಪುನೀತ್‌ಕುಮಾರ್, ಎನ್‌ಟಿಸಿಎ ಪ್ರತಿನಿಧಿ ರಘುರಾಂ, ಪಶು ವೈದ್ಯಾಧಿಕಾರಿ ಡಾ.ವಾಸೀಂ ಮಿರ್ಜಾ ಹಾಗೂ ವಲಯ ಸಿಬ್ಬಂದಿ ಸಮ್ಮುಖದಲ್ಲಿ ಆನೆ ಕಳೇಬರದ ವೈದ್ಯಕೀಯ ಪರೀಕ್ಷೆ ನಡೆಸಿ, ಅದರ ಮಾದರಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ನಂತರ ಜೆಸಿಬಿ ಸಹಾಯದಿಂದ ಗುಂಡಿ ತೆಗೆದು, ಆನೆ ಕಳೇಬರವನ್ನು ಹೂಳಲಾಯಿತು ಎಂದು ಅರಣ್ಯ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಚನಾ ಬಿ.ರಾಜ್‌ಗೆ ಶೇ.90 ಅಂಕ

ಮೈಸೂರು, ಮೇ 20– ಮೈಸೂರು ನಗರದಲ್ಲಿರುವ ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ಕೇಂದ್ರ ಪಠ್ಯಕ್ರಮದ 10ನೇ ತರಗತಿಯಲ್ಲಿ ಶೇ.90ರಷ್ಟು ಅಂಕಗಳಿಸುವ ಮೂಲಕ ರಚನಾ ಬಿ.ರಾಜ್ ಉತ್ತಮ ಸಾಧನೆ ಮಾಡಿದ್ದಾರೆ. ಈಕೆ ವೀರನಗೆರೆಯ ನಿವಾಸಿಯಾದ ಉದ್ಯಮಿ, ರಚನಾ ಎಂಟರ್‌ಪ್ರೈಸಸ್ ಮಾಲೀಕರಾದ ಮಮತಾ ಬಸವರಾಜ್ ದಂಪತಿ ಪುತ್ರಿ.



ಕನ್ನಡಪರ ಸಂಘಟನೆ ನಾಗರಿಕ ಹಿತರಕ್ಷಣಾ ವೇದಿಕೆ ಪದಾಧಿಕಾರಿಗಳು

ಮೈಸೂರು, ಮೇ 20–ಮೈಸೂರು ನಗರ (ಜಿಲ್ಲಾ) ಕನ್ನಡ ಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆಗೆ ಪದಾಧಿ ಕಾರಿಗಳನ್ನು ನೇಮಕ ಮಾಡಲಾಗಿದೆ.

ಡಾ.ಶ್ರೀಕಾಂತ್ ಸುಂದರೇಶ್–ಗೌರವ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು)–ಅಧ್ಯಕ್ಷ, ಎಂ.ರಾಕೇಶ್‌ಗೌಡ–ಕಾರ್ಯಾಧ್ಯಕ್ಷ ಮೋಹನ್‌ಕುಮಾರ್–ಪ್ರಧಾನ ಕಾರ್ಯದರ್ಶಿ, ವಕೀಲ ಶಶಿಕಿರಣ್–ಕಾನೂನು ಸಲಹೆಗಾರ, ಹನುಮಂತೇಗೌಡ, ಮೆಸ್ ಬಾಬು, ಕಿತಾಪತಿ ನಾಗರಾಜ್ (ಉಪಾಧ್ಯಕ್ಷರು), ವಿ.ಗಿರಿಧರ್, ಮೋಹನ್‌ಕುಮಾರ್, ಯೋಗೇಶ್, ಬಾಲಕೃಷ್ಣೇ ಗೌಡ (ಪ್ರಧಾನ ಕಾರ್ಯದರ್ಶಿಗಳು), ಸರ್ದಾರ್ ಮಹೇಶ್, ಎಂ.ನಾಗೇಂದ್ರ (ಕಾರ್ತಿಕ್‌ಗೌಡ), ಎಂ.ಕೀರ್ತಿಗೌಡ (ಕಾರ್ಯ ದರ್ಶಿ), ಕಿರಣ್ ಸಿಂಗ್, ಅಶ್ವಿನ್ ಕುಮಾರ್, ರಮೇಶ್ ಕುಮಾರ್ (ಸಂಘಟನಾ ಕಾರ್ಯದರ್ಶಿ), ಎಂ.ರಾಮೇಗೌಡ, ಡಾ.ರಾಜೇಂದ್ರ, ಮೋಹನ್ ಕುಮಾರ್‌ಗೌಡ, ರಂಗಪ್ಪಗೌಡ, ಮೊಹಮ್ಮದ್ ಪುತ್ತೂರು (ಮಾರ್ಗದರ್ಶಕರು).


ನಿಧನ

ಗಣೇಶ್ ಬಾಬು



ಮೈಸೂರು: ಮೈಸೂರಿನ ಕುವೆಂಪುನಗರ ನಿವಾಸಿ, ಗಾಯತ್ರಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿವೃತ್ತ ಸಿಇಓ ಗಣೇಶ್ ಬಾಬು (62) ಭಾನುವಾರ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ನಾಲ್ವರು ಸಹೋದರರು, ಓರ್ವ ಸಹೋದರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.05.2024 ಮಂಗಳವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಲೇಖನ : ಡಾ. ವಿನೋದಾ, ಪ್ರಸ್ತುತಿ: ಡಾ. ಮೈಸೂರು ಉಮೇಶ್, 6.40 ಪದ ಸಂಸ್ಕೃತಿ, ಪ್ರಸ್ತುತಿ: ಡಾ. ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಅ. ನ. ಕೃ ಅವರ “ಉದಯರಾಗ” ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್. ಎಸ್, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ – ಎಂ. ಎಸ್. ಶೀಲಾ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ : ಹೀಗಿದೆ ನೋಡಿ ನಮ್ ಜೋಡಿ, 12.30 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.20 ಭಾವಗೀತೆಗಳು–ರಶ್ಮಿ ವಿ. ರಾವ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ –ಎಂ. ಪ್ರಭಾಕರ್, 4.00 ಕಥಾ ಕಾಲಕ್ಷೇಪ–ಮಾರುತಿ ವಿಜಯ, ಪ್ರಸ್ತುತಿ: ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.55 ಕೃಷಿರಂಗ–ಕಿಸಾನ್‌ವಾಣಿ – ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ವಿವಿಧ ಅಂತರದಲ್ಲಿ ಹಿಪ್ಪುನೇರಳೆ ಬೇಸಾಯ ಹಾಗೂ ಹಸಿರೆಲೆ ಗೊಬ್ಬರದ ಬಳಕೆ ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಂ. ಆರ್. ಭವ್ಯ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್. ಕೇಶವಮೂರ್ತಿ, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ: ಹೆಚ್. ಆರ್. ಕೇಶವಮೂರ್ತಿ, ವ್ಯಾಖ್ಯಾನ: ಮಾರ್ಕಂಡೇಯ ಅವಧಾನಿ, ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು :** ಬೆಳಗ್ಗೆ 10ಕ್ಕೆ ಶ್ರೀಮತಿ ಎಂ. ಜಯಲಕ್ಷ್ಮಮ್ಮಣ್ಣಿ ಸ್ಮಾರಕ ರಾಜ್ಯ ಮಟ್ಟದ ಅಂತರ ಕಾಲೇಜು ಸಂಗೀತ ಸ್ಪರ್ಧೆ, ದಿವಂಗತ ಬಿ. ಸಣ್ಣೇಗೌಡ ಸ್ಮಾರಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ, ಉದ್ಘಾಟನೆ : ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವ್ಯವಸ್ಥಾಪಕ ಅರ್ಷಿಂದರ್ ಜೀತ್ ಕೌರ್, ಮುಖ್ಯ ಅತಿಥಿಗಳು : ಶ್ರೀಮತಿ ರಾಜ್‌ಮತಿ ಕೆ. ಅರಸ್, ಅಧ್ಯಕ್ಷತೆ : ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲ ಡಾ. ಬಿ.ವಿ. ವಸಂತಕುಮಾರ್; ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಬಹುಮಾನ ವಿತರಣೆ : ಇಂಡಿಯನ್ ಆಯಿಲ್ ಕಾರ್ಪೋರೇಷನ್ ವಿಶ್ರಾಂತ ಹಿರಿಯ ವಿಭಾಗೀಯ ವ್ಯವಸ್ಥಾಪಕ ಮಹೇಶ್ ಎನ್. ಅರಸ್, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ –ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಸಂವಹನ ಮತ್ತು ಪತ್ರಿಕೋದ್ಯಮ ಶಿಕ್ಷಕರ ಸಂಘ :** ಪ್ರದರ್ಶನ ಕಲೆ ಮತ್ತು ಮಾಧ್ಯಮ: ಸಾಂಸ್ಕೃತಿಕ ದೃಷ್ಟಿಕೋನಗಳು ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಸ್ಥಳ: ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಬೆಳಗ್ಗೆ 10ರಿಂದ.

■ **ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನ :** ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ.ಕಾವೇರಿಯಮ್ಮ, ಪ್ರಶಸ್ತಿ ಪ್ರದಾನ: ನೃತ್ಯ ಕಲಾವಿದೆ ಶ್ರೀಮತಿ ಡಾ. ತುಳಸಿ ರಾಮಚಂದ್ರ, ಮುಖ್ಯ ಅತಿಥಿಗಳು : ಸಾಹಿತಿ ಬನ್ನೂರು ಕೆ. ರಾಜು, ಅಭಿನಂದನಾ ಭಾಷಣ : ಕಲಾವಿದೆ ಶ್ರೀಮತಿ ಜಮುನಾರಾಣಿ ಮಿರ್ಲೆ, ಪ್ರಶಸ್ತಿ ಪುರಸ್ಕೃತರು : ಎ. ಕಿರಣ್ ಸುಬ್ಬಯ್ಯ, ಸ್ಥಳ: ಅಕ್ಕನ ಬಳಗ ಶಾಲೆ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಯುವರಾಜ ಕಾಲೇಜು :** ಜ್ಞಾನವಾಹಿನಿಯ ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ, ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ : ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಕೆ. ಮಹೇಶ್, ಚಾಲನೆ : ಅಂತರರಾಷ್ಟ್ರೀಯ ಖೋ ಖೋ ಆಟಗಾರ್ತಿ ಕು. ಎಂ.ವೀಣಾ, ಮುಖ್ಯ ಅತಿಥಿಗಳು : ಕಿರುತೆರೆ ನಟ ರಿತ್ವಿಕ್ ಕೃಪಾಕರ್, ಕೊಳಲು ವಾದಕ ಪಿ. ನೀತು ನಿನಾದ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಬೆಳಗ್ಗೆ 11ರಿಂದ, ಮಧ್ಯಾಹ್ನ 2.30ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣ.

■ **ಟಿಟಿಎಲ್ ಟ್ರಸ್ಟ್, ಯುವ ರೆಡ್‌ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಐಕ್ಯೂಎಸಿ:** ಹೂಡಿಕೆದಾರರ ಜಾಗೃತಿ ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ: ಟಿಟಿಎಲ್ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ.ಪ್ರಶಾಂತ್, ಸಂಪನ್ಮೂಲ ವ್ಯಕ್ತಿ ಹೆಚ್.ಸಿ.ಶ್ರೀಕಾಂತ್, ವಾಸುದೇವ್, ವಿಕ್ರಂ ಅಯ್ಯಂಗಾರ್, ಬಿ.ಅಭಿಶಾ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 21 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 35 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಯಾವ ಸಮುದಾಯಕ್ಕೂ ಸಮಸ್ಯೆಯಾಗದಂತೆ

ಜಾತಿಗಣತಿ ಜಾರಿ

ಸರ್ಕಾರ ವರ್ಷ ಪೂರ್ಣಗೊಂಡ ಸಂತಸದಲ್ಲಿ ಸಿಎಂ ಸಿದ್ದರಾಮಯ್ಯ ಘೋಷಣೆ

ಬೆಂಗಳೂರು, ಮೇ 20(ಕೆಎಂಶಿ)– ಯಾವ ಸಮುದಾಯಕ್ಕೂ ಸಮಸ್ಯೆ ಆಗದ ರೀತಿಯಲ್ಲಿ ಜಾತಿ ಗಣತಿ ವರದಿ ಜಾರಿಗೆ ತರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದರು.

ತಮ್ಮ ಆಡಳಿತಕ್ಕೆ ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿ ಬೆಂಗಳೂರು ಪ್ರೆಸ್‌ಕ್ಲಬ್ ಏರ್ಪಡಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ಜಾತಿ ಗಣತಿ ವರದಿಯನ್ನು ಸಂಪುಟದ ಮುಂದಿಟ್ಟು ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಸ್ಪಷ್ಟಪಡಿಸಿದರು.

ಜಾತಿಗಣತಿ ವರದಿ ಜಾರಿಗೊಳಿಸುವುದರಿಂದ ಯಾವ ಜಾತಿ, ಸಮುದಾಯಕ್ಕೂ ಅನ್ಯಾಯವಾಗುವುದಿಲ್ಲ, ಒಂದು ವೇಳೆ ಆದರೆ, ಅದನ್ನು ಸರಿಪಡಿಸುವುದಾಗಿಯೂ ತಿಳಿಸಿದ ಅವರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರನ್ನು ಇಂತಹ ವರದಿಗಳಿಂದಲೇ ಗುರುತಿಸಿ ಆ ಸಮುದಾಯಗಳಿಗೆ ನ್ಯಾಯ ಒದಗಿಸುವುದು ಸರ್ಕಾರದ ಕರ್ತವ್ಯ. ವರದಿಯೇ ಬೇಡ ಎಂದರೆ ಹಿಂದುಳಿದ ವರ್ಗಗಳಿಗೆ ನ್ಯಾಯ ದೊರಕಿಸಿಕೊಡುವುದಾದರೂ ಹೇಗೆ? ಎಂದು ಪ್ರಶ್ನಿಸಿದರು.



● ಬಿಜೆಪಿ ಅಪಪ್ರಚಾರದ ನಡುವೆ ಮನೆ ಮನೆ ತಲುಪಿದ ಗ್ಯಾರಂಟಿ ● ಗ್ಯಾರಂಟಿ ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ

ನಾನು ಹಿಂದೆ ಅಧಿಕಾರದಲ್ಲಿದ್ದಾಗ, ಹಿಂದುಳಿದ ವರ್ಗಗಳ ಆಯೋಗ ರಚಿಸಿದೆ, ಅವರು ವರದಿ ಕೊಡುವ ಸಂದರ್ಭದಲ್ಲಿ ಅಧಿಕಾರ ಕಳೆದುಕೊಂಡೆ, ನಂತರ ಬಂದ ಸರ್ಕಾರಗಳು ವರದಿಯನ್ನು ಜಾರಿಗೊಳಿಸಲಿಲ್ಲ. ಈಗ ಮತ್ತೆ ನಾನೇ ಅಧಿಕಾರದಲ್ಲಿದ್ದೇನೆ, ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದವರಿಗೆ ನ್ಯಾಯ ದೊರಕಿಸುವುದಾಗಿ ತಿಳಿಸಿದರು. ಬಿಜೆಪಿಯ ನಿರಂತರ ಅಪಪ್ರಚಾರದ ನಡುವೆಯೂ ಗ್ಯಾರಂಟಿಗಳು ಜನರ ಮನೆ ಮನೆ ತಲುಪಿವೆ, ಗ್ಯಾರಂಟಿಗಳ ಹೊರತಾಗಿ ಅಭಿವೃದ್ಧಿಗೂ ಹಣ ಮೀಸಲಿಟ್ಟು ಖರ್ಚು ಮಾಡಿದ್ದೇವೆ ಎಂದು ಮುಖ್ಯಮಂತ್ರಿಗಳು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ವಿಜಯೇಂದ್ರ, ಆರ್.ಅಶೋಕ್‌ಗೆ ಆರ್ಥಿಕತೆ ಅರ್ಥ ಆಗಲ್ಲ, ಹೀಗಾಗಿ ಖಜಾನೆ ಖಾಲಿ ಆಗಿದೆ ಎಂದು ಪರಮ ಸುಳ್ಳು ಹೇಳುತ್ತಿದ್ದಾರೆ, ನಾವು ಗ್ಯಾರಂಟಿಯೇತರ ಅಭಿವೃದ್ಧಿ ಕಾರ್ಯಗಳಿಗೆ 54,374 ಕೋಟಿ ರೂ. ಖರ್ಚು ಮಾಡುವುದಾಗಿ ಬಜೆಟ್‌ನಲ್ಲಿ ಹೇಳಿದ್ದೆವು. ಆದರೆ 56,274 ಕೋಟಿ ಖರ್ಚು ಮಾಡಿದೆವು. ಅಂದರೆ ಬಜೆಟ್‌ನಲ್ಲಿ ಹೇಳಿದ್ದಕ್ಕಿಂತ ಹೆಚ್ಚು ● 9ನೇ ಪುಟಕ್ಕೆ

ತಾತ ಹೆಚ್.ಡಿ.ದೇವೇಗೌಡರ ಮೇಲೆ ಗೌರವವಿದ್ದರೆ ಎಸ್‌ಐಟಿಗೆ ಶರಣಾಗು

ಸಂಸದ ಪ್ರಜ್ವಲ್ ರೇವಣ್ಣರಿಗೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸಲಹೆ

● ದೇವೇಗೌಡರು ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆಗೆ ಮುಂದಾಗಿದ್ದರು
● ನಮ್ಮ ಕುಟುಂಬ, ಸ್ನೇಹಿತರ ಫೋನ್ ಕದ್ದಾಲಿಕೆ ಮಾಡುತ್ತಿದ್ದಾರೆ. ● ಇದು ಸೆಕ್ಷನ್ 376 ಸರ್ಕಾರ ● ಆಡಿಯೋ ಬಂದ ಮೇಲೆ ಉಸಿರೇ ಇಲ್ಲ



ಬೆಂಗಳೂರು, ಮೇ 20(ಕೆಎಂಶಿ)– ತಾತ ದೇವೇಗೌಡರ ಮೇಲೆ ಗೌರವ ಇದ್ದರೆ ಇನ್ನು 48 ಗಂಟೆಯೊಳಗಾಗಿ ಎಸ್‌ಐಟಿಗೆ ಶರಣಾಗುವಂತೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಸಂಸದ ಪ್ರಜ್ವಲ್ ರೇವಣ್ಣಗೆ ಸಲಹೆ ನೀಡಿದ್ದಾರೆ.

ದೊಡ್ಡಗೌಡರಿಗೆ ನೀನು ಬೆಲೆ ಕೊಡುವುದೇ ಆದರೆ, ಇನ್ನೆರಡು ದಿನದಲ್ಲಿ ಎಸ್‌ಐಟಿ ಮುಂದೆ ಶರಣಾಗು ಎಂದ ಕುಮಾರಸ್ವಾಮಿ, ಪ್ರಜ್ವಲ್‌ನಿಂದ ಮಹಿಳಾ ಸಿಬ್ಬಂದಿ ಮಾನಸಿಕ ಯಾತನೆ ಅನುಭವಿಸುತ್ತಿದ್ದು, ನನ್ನ ಸಹೋದರಿಯರ ಕ್ಷಮೆ ಕೇಳುತ್ತೇನೆ, ಈ ಪರಿಸ್ಥಿತಿ ಯಾರಿಗೂ ಬರಬಾರದಿತ್ತು. ಇದಕ್ಕೆ ● 9ನೇ ಪುಟಕ್ಕೆ

ಫೋನ್ ಟ್ಯಾಪ್ ಮಾಡಲು ಅವರೇನು ಭಯೋತ್ಪಾದಕರೇ: ಹೆಚ್‌ಡಿಕೆಗೆ ಡಿಕೆಶಿ ತಿರುಗೇಟು

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಫೋನ್ ಟ್ಯಾಪ್ ಮಾಡಲ್ಲ. ಮಾಡಲು ಅವರೇನು ಭಯೋತ್ಪಾದಕರೇ. ಅವರು ರಾಜಕೀಯ ನಾಯಕರು. ಅವರ ಫೋನ್ ಟ್ಯಾಪ್ ಯಾಕೆ ಮಾಡಬೇಕು ಎಂದು ಡಿಸಿಎಂ ಡಿಕೆ ಶಿವಕುಮಾರ್ ಪ್ರಶ್ನಿಸಿದ್ದಾರೆ.



ನನ್ನ ಮತ್ತು ರೇವಣ್ಣನ ಫೋನ್ ಟ್ಯಾಪ್ ಮಾಡಲಾಗುತ್ತಿದೆ ಎಂಬ ಹೆಚ್‌ಡಿ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಭಯೋತ್ಪಾದಕರ ಫೋನನ್ನು ಅನುಮತಿ ಪಡೆದು ಟ್ಯಾಪ್ ಮಾಡಲಾಗುತ್ತದೆ. ಇವರು ನಮ್ಮ ರಾಜ್ಯದ ನಾಯಕರು, ಇವರ ಫೋನ್ ಟ್ಯಾಪ್ ಮಾಡುವ ಅವಶ್ಯಕತೆ ನಮ್ಮ ಸರ್ಕಾರಕ್ಕಿಲ್ಲ. ಕೇವಲ ಪ್ರಚಾರಕ್ಕಾಗಿ ಇಂತಹ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಯಾರಿಗೂ ನಾನು ● 9ನೇ ಪುಟಕ್ಕೆ

ಶಾಲಾ–ಕಾಲೇಜುಗಳಿಗೆ ತೆರಳಿದ ಹೆಣ್ಣು ಮಕ್ಕಳು ಹಿಂತಿರುಗದ ಪರಿಸ್ಥಿತಿಯೇ ಸರ್ಕಾರದ ಸಾಧನೆ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ
● ಎಸ್ಸಿ, ಎಸ್ಟಿಗೆ ಮೀಸಲಿಟ್ಟ 25 ಕೋಟಿ ಬೇರೆಡೆಗೆ ವರ್ಗಾವಣೆ; ಕಾನೂನು ಸುವ್ಯವಸ್ಥೆ ಕುಸಿತ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿದರು.

ಬೆಂಗಳೂರು, ಮೇ 20(ಕೆಎಂಶಿ)–ಶಾಲಾ–ಕಾಲೇಜುಗಳಿಗೆ ತೆರಳಿದ ಹೆಣ್ಣು ಮಕ್ಕಳು ಹಿಂತಿರುಗದ ಪರಿಸ್ಥಿತಿ ತಂದಿದ್ದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಒಂದು ವರ್ಷದ ಸಾಧನೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಕೆಂಡಕಾರಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಂದು ವರ್ಷದ ಆಡಳಿತದಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪೂರ್ಣ ಹದಗೆಟ್ಟಿದೆ, ರೈತರು ಕೃಷಿ ಮಾಡಲಾಗದಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ, ಅಭಿವೃದ್ಧಿ ನಗಣ್ಯವಾಗಿದೆ, ಇನ್ನು ಶಿಕ್ಷಣ ಗ್ರೇಸ್ ಮಾರ್ಕ್ಸ್‌ನಲ್ಲಿ ನಡೆಯುತ್ತಿದೆ, ಇದೇ ಬೃಹತ್ ಸಾಧನೆ ಎಂದರು. ರೈತರು ಪಹಣಿ ಪ್ರತಿ ಪಡೆಯಲು ವಿಧಿಸುತ್ತಿದ್ದ 10 ರೂ. ಶುಲ್ಕವನ್ನು 25ರಿಂದ 30 ರೂ.ಗೆ ಹಚ್ಚಿಸಲಾಗಿದೆ, ಮುದ್ರಾಂಕ ಶುಲ್ಕವನ್ನೂ ಏರಿಕೆ ಮಾಡಲಾಗಿದೆ, ರೈತರು ಕೃಷಿ ಪಂಪ್ ಸೆಟ್‌ಗಳಿಗೆ ಟ್ರಾನ್ಸ್‌ಫಾರ್ಮರ್ ಸಂಪರ್ಕ ಪಡೆಯಲು ಇದುವರೆಗೆ ನೀಡುತ್ತಿದ್ದ 20 ಸಾವಿರ ರೂ. ಗಳನ್ನು ಎರಡೂವರೆಯಿಂದ 3 ಲಕ್ಷ ರೂ.ಗಳ ವರೆಗೂ ಹೆಚ್ಚಿಸಲಾಗಿದೆ, ಬರಗಾಲದಲ್ಲಿ ಹೈನುಗಾರಿಕೆಗೆ ಪ್ರೋತ್ಸಾಹ ಧನವನ್ನು ನೀಡಿಲ್ಲ ಎಂದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ನದಿ ಪಾತ್ರದಲ್ಲಿ ನೀರಿಲ್ಲ, ಬೆಳೆ ಬೆಳೆಯ ಬೇಡಿ ಎಂದು ಹೇಳಿದ್ದ ಸರ್ಕಾರ ನಂತರ ಬೆಳೆ ಬೆಳೆದಿಲ್ಲದ್ದರಿಂದ ಬರ ಪರಿಹಾರ ನೀಡುವುದಿಲ್ಲ ಎಂದಿತು, ಇದು ರೈತ ವಿರೋಧಿ ನಡೆಯಲ್ಲದೆ ಮತ್ತಿನ್ನೇನು? ಎಂದು ಪ್ರಶ್ನಿಸಿದರು.

ಕಳೆದೊಂದು ವರ್ಷ ರಾಜ್ಯ ಸರ ಕಾರದ ಸಾಧನೆ ಶೂನ್ಯ, ಕಳೆದ ಒಂದು ವರ್ಷದಲ್ಲಿ ಒಂದೇ ಒಂದು ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿಲ್ಲ, ಗುದ್ದಲಿ ಪೂಜೆಯ ಉದಾಹರಣೆಯೂ ಇಲ್ಲ. ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಕಾಂಗ್ರೆಸ್ ● 6ನೇ ಪುಟಕ್ಕೆ

ಇಂದು ದ್ವಿತೀಯ ಪಿಯುಸಿ ಪರೀಕ್ಷೆ–2ರ ಫಲಿತಾಂಶ

ಫಲಿತಾಂಶಕ್ಕಾಗಿ ವೆಬ್‌ಸೈಟ್ https://karresults.nic.in

ಬೆಂಗಳೂರು, ಮೇ 20: ದ್ವಿತೀಯ ಪಿಯುಸಿ ಪರೀಕ್ಷೆ – 2 ಫಲಿತಾಂಶವು ಮೇ 21ರಂದು ಮಧ್ಯಾಹ್ನ 3 ಗಂಟೆಗೆ ಪ್ರಕಟವಾಗಲಿದೆ ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ತಿಳಿಸಿದೆ. ಫಲಿತಾಂಶವನ್ನು ಮಂಡಳಿ ವೆಬ್‌ಸೈಟ್ https://karresults.nic.in ನಲ್ಲಿ ಪ್ರಕಟಿಸಲಾಗುವುದು ಎಂದು ಮಂಡಳಿ ಅಧ್ಯಕ್ಷರು ತಿಳಿಸಿದ್ದಾರೆ. ಏಪ್ರಿಲ್ 29ರಿಂದ ಮೇ 16–05–24 ರವರೆಗೆ ಪರೀಕ್ಷೆ ನಡೆಸಲಾಗಿತ್ತು. 1.49 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಪಿಯುಸಿ, ಎಸ್‌ಎಸ್‌ಎಲ್‌ಸಿಯಲ್ಲಿ ದ.ಕ. ಪ್ರಥಮ: ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ದ.ಕ. ಜಿಲ್ಲೆ ಪ್ರಥಮ ಸ್ಥಾನ ಹಾಗೂ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ದ್ವಿತೀಯ ಸ್ಥಾನ ಪಡೆದಿರುವ ಬಗ್ಗೆ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಮತ್ತು ದ.ಕ. ಜಿಲ್ಲಾ ಪಂಚಾಯಿತಿ ● 6ನೇ ಪುಟಕ್ಕೆ

ಸರ್ಕಾರದ ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಮೀಸಲಾತಿಗೆ ಆದೇಶ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆಸುವ ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸರ್ಕಾರ ಆದೇಶ ಹೊರಡಿಸಿದೆ. ಮೀಸಲಾತಿ ಕಲ್ಪಿಸುವಾಗಲೂ ಶೇ. 33ರಷ್ಟು ಮಹಿಳೆಯರಿಗೆ ಮೀಸಲಿಡುವಂತೆಯೂ ಸೂಚಿಸಿದೆ.

ಸರ್ಕಾರಿ ಇಲಾಖೆಗಳಲ್ಲಿ ವಿವಿಧ ಹಂತದ ಸಿಬ್ಬಂದಿ ನೇಮಕಾತಿಯನ್ನು ಹೊರಗುತ್ತಿಗೆ ಆಧಾರದಲ್ಲಿ ವಿವಿಧ ಏಜೆನ್ಸಿಗಳ ಮೂಲಕ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಮೀಸಲಾತಿ ಸಿಗುತ್ತಿಲ್ಲ. ಏಜೆನ್ಸಿಗಳು ತಮಗೆ ಬೇಕಾದವರಿಗೆ ಉದ್ಯೋಗ ನೀಡುತ್ತಿರುವುದರಿಂದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಸಮುದಾಯದವರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಇಲ್ಲಿಯೂ ಕಡ್ಡಾಯ ಮೀಸಲಾತಿ ಜಾರಿ ಮಾಡಬೇಕು ಎಂಬ ಹಕ್ಕೊತ್ತಾಯ ಬಹಳ ಕಾಲದಿಂದ ಇತ್ತು. 2023ರ ಡಿಸೆಂಬರ್ 21ರಂದು ನಡೆದ ಸಚಿವ ● 6ನೇ ಪುಟಕ್ಕೆ

ವಿಧಾನಪರಿಷತ್ ಚುನಾವಣೆ: ಅಂತಿಮವಾಗಿ ಕಣದಲ್ಲಿ 78 ಮಂದಿ

● ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 11 ಮಂದಿ ಸ್ಪರ್ಧೆ ● ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿಗೆ ಬಂಡಾಯ



ಮರಿತಿಬ್ಬೇಗೌಡ



ವಿವೇಕಾನಂದ

ಬೆಂಗಳೂರು, ಮೇ 20– ವಿಧಾನಪರಿಷತ್‌ನ ಆರು ಕ್ಷೇತ್ರಗಳಲ್ಲಿ ನಾಮಪತ್ರ ಹಿಂಪಡೆಯುವ ಅವಧಿ ಸೋಮವಾರ ಮುಕ್ತಾಯಗೊಂಡಿದ್ದು, ಅಂತಿಮವಾಗಿ 78 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ. ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳು ಬಂಡಾಯ ಎದುರಿಸುತ್ತಿವೆ.

ಒಟ್ಟು 12 ಅಭ್ಯರ್ಥಿಗಳು ಸೋಮವಾರ ನಾಮಪತ್ರ ಹಿಂಪಡೆದಿದ್ದಾರೆ. ಒಬ್ಬ ಮಹಿಳೆ ಮತ್ತು 77 ಪುರುಷರು ಕಣದಲ್ಲಿ ಉಳಿದಿದ್ದಾರೆ.

ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಇಬ್ಬರು ನಾಮಪತ್ರ ಹಿಂಪಡೆದಿದ್ದು, ಅಂತಿಮವಾಗಿ 11 ಮಂದಿ ಅಖಾಡದಲ್ಲಿ ಉಳಿದಿದ್ದಾರೆ.

ನಾಮಪತ್ರ ಹಿಂಪಡೆಯಲು ಕಡೇ ದಿನವಾದ ಸೋಮವಾರ ಬಿಜೆಪಿ ಮುಖಂಡ ಈ.ಸಿ.ನಿಂಗರಾಜ್ ಗೌಡ ಹಾಗೂ ಪಕ್ಷೇತರ ಅಭ್ಯರ್ಥಿ ಮಂಡ್ಯದ ಕೆ.ಆರ್. ರಾಜು ತಮ್ಮ ಉಮೇದುವಾರಿಕೆ ಹಿಂಪಡೆದಿದ್ದು, ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ. ವಿವೇಕಾನಂದ, ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ, ಕರ್ನಾಟಕ ಜನತಾ ಪಕ್ಷದ ● 9ನೇ ಪುಟಕ್ಕೆ

ವಿಧಾನಪರಿಷತ್ತಿನ 11 ಸ್ಥಾನಗಳಿಗೆ ಜೂನ್ 13ಕ್ಕೆ ಚುನಾವಣೆ

ವಿಧಾನಸಭಾ ಸದಸ್ಯರಿಂದ ಮತದಾನ

ಬೆಂಗಳೂರು: ಮುಂದಿನ ತಿಂಗಳು ತೆರವಾಗಲಿರುವ ಕರ್ನಾಟಕ ವಿಧಾನಪರಿಷತ್ತಿನ 11 ಸ್ಥಾನಗಳಿಗೆ ಚುನಾವಣಾ ದಿನಾಂಕ ಘೋಷಣೆಯಾಗಿದೆ. ಜೂನ್ 13 ರಂದು ಮತದಾನ ನಡೆಯಲಿದೆ. ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಚುನಾಯಿತರಾಗಿರುವ 11 ಸದಸ್ಯರ ಅವಧಿ ಜೂನ್ 17ಕ್ಕೆ ಕೊನೆಗೊಳ್ಳಲಿದೆ.

ನಾಮಪತ್ರ ಸಲ್ಲಿಸಲು ಜೂನ್ 3 ಕೊನೆಯ ದಿನ. ಜೂನ್ 4 ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಜೂನ್ 13 ರಂದು ಮತದಾನ ನಡೆದು ಅಂದೇ ಸಂಜೆ ಐದು ಗಂಟೆಗೆ ಮತ ಎಣಿಕೆ ನಡೆಯಲಿದೆ ಎಂದು ಕೇಂದ್ರ ಚುನಾವಣಾ ಆಯೋಗ ತಿಳಿಸಿದೆ. ತೇಜಸ್ವಿನಿಗೌಡ, ಪಿಎಂ ಮುನಿರಾಜುಗೌಡ, ಕೆಪಿ ನಂಜುಂಡಿ, ಬಿ. ಎಂ. ಫಾರೂಕ್, ಅರವಿಂದ ಕುಮಾರ್ ಅರಳಿ, ಎನ್.ಎಸ್. ಬೋಸರಾಜು, ಗೋವಿಂದರಾಜು, ರಘುನಾಥರಾವ್ ಮಲ್ಕಾಪುರೆ, ಎನ್.ರವಿಕುಮಾರ್, ಎಸ್. ರುದ್ರೇಗೌಡ, ಕೆ. ಹರೀಶ್‌ಕುಮಾರ್ ಅವರ ಅವಧಿ ಜೂನ್ 17ಕ್ಕೆ ಅಂತ್ಯವಾಗಲಿದೆ.

ನಕ್ಕರೆ ಅದೇ ಸ್ವರ್ಗ

ಮಾಸ್ತರರು : (ವಿದ್ಯಾರ್ಥಿಗಳನ್ನು ಕುರಿತು) "ಚಿಕ್ಕಂದಿನಲ್ಲಿ ನಾನು ಮಹಾಬುದ್ಧಿವಂತ ವಿದ್ಯಾರ್ಥಿಯಾಗಿದ್ದೆ. ನೀವೂ ಇದ್ದೀರಾ ಮುದ್ದೆ ಹೊಡೆಯೋಕೆ ಲಾಯಕ್ಕು"

ವಿದ್ಯಾರ್ಥಿ : "ನಿಮಗಾಗ ಬುದ್ಧಿವಂತ ಮಾಸ್ತರರು ಸಿಕ್ಕಿದ್ರು, ಆದ್ರೆ ನಮಗಿಲ್ಲವಲ್ಲ ಸಾರ್!"

ಮೈಸೂರು ಮಿತ್ರ

ಮಂಗಳವಾರ, 21 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಅನುಭವವೇ ಬುದ್ಧಿವಂತಿಕೆ, ಮುಖ್ಯ ಸ್ನೇಹಿತ –ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆದದ್ದೇ ಒಂದು / ಅಂದುಕೊಂಡದ್ದೇ ಒಂದು

ನಿಮ್ಮ ಪತ್ರಗಳು

ಸಮರ್ಥವಾಗಿ ಒಂದು ವರ್ಷ ಪೂರೈಸಿದ ರಾಜ್ಯ ಸರ್ಕಾರ

ಮಾನ್ಯರೆ,

ಇದೇ ಮೇ 20ಕ್ಕೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ಪೂರ್ಣಗೊಂಡಿದೆ. 135 ಸ್ಥಾನಗಳನ್ನು ಗೆದ್ದು ಸಂಪೂರ್ಣ ಬಹುಮತ ಪಡೆದು ಸರ್ಕಾರ ರಚಿಸುವ ಸಂಪೂರ್ಣ ಭರವಸೆ ಕಾಂಗ್ರೆಸ್ ನಾಯಕರಿಗೂ ಇರಲಿಲ್ಲವೇನೋ?

ಕಾಂಗ್ರೆಸ್ ಪಕ್ಷಕ್ಕೆ ಜನರು ಅಧಿಕಾರ ಕೊಡಲು ಅನೇಕ ಕಾರಣಗಳಿದ್ದವು. ಮುಖ್ಯವಾಗಿ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದ್ದ ಮಿತಿ ಮೀರಿದ ಭ್ರಷ್ಟಾಚಾರ, ಸಮ್ಮಿಶ್ರ ಸರ್ಕಾರಗಳ ಅವಧಿಯ ಆಡಳಿತದಿಂದ ಜನಸಾಮಾನ್ಯರು ರೋಸಿ ಹೋಗಿದ್ದು, ಆಡಳಿತದಲ್ಲಿನ ನಿಷ್ಕ್ರಿಯತೆ ಮತ್ತು ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಜನತೆಗೆ ನೀಡಿದ ಪಂಚ ಗ್ಯಾರಂಟಿಗಳು ಸ್ವಲ್ಪ ಮಟ್ಟಿಗೆ ಕಾಂಗ್ರೆಸ್ ಅಧಿಕಾರದ ಗದ್ದುಗೆಗೆ ಏರಲು ಕಾರಣವಾಯಿತು. ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ, ಅನೇಕ ಏಳು – ಬೀಳುಗಳ ನಡುವೆ ಸಮಾಧಾನಕರ ಆಡಳಿತ ನೀಡಿದೆ ಎಂದೇ ಹೇಳಬಹುದು.

ಪಂಚ ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತರಲು ಹೆಣಗಾಡಿದ್ದು, ರಾಜ್ಯದಲ್ಲಿ ಹಿಂದೆಂದೂ ಕಾಣದಂತಹ ಭೀಕರ ಬರಗಾಲದಿಂದ ಜನ ಕುಡಿಯುವ ನೀರಿಗಾಗಿ ಹಾಹಾಕಾರ ಪಟ್ಟಿದ್ದು, ಪಕ್ಕದ ತಮಿಳುನಾಡು ಸರ್ಕಾರ ಆಗಾಗ್ಗೆ ತಮ್ಮ ಪಾಲಿನ ನೀರಿಗಾಗಿ ತೊಂದರೆ ಕೊಟ್ಟಿದ್ದು, ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಜಿಎಸ್‌ಟಿ ತೆರಿಗೆ ಹಣಕ್ಕಾಗಿ ದೆಹಲಿಯಲ್ಲಿ ಧರಣಿ ನಡೆಸಿದ್ದು, ಹಾಗೂ ಕೇಂದ್ರ ಸರ್ಕಾರದಿಂದ ಸಿಗಬೇಕಾದ ನ್ಯಾಯಯುತ ಬರ ಪರಿಹಾರ ಹಣಕ್ಕಾಗಿ ರಾಜ್ಯ ಸುಪ್ರೀಂಕೋರ್ಟ್ ಕೋರ್ಟಿನ ಕದ ತಟ್ಟಿದ್ದು, ಹಾಸನದ ಸಂಸದ ಪ್ರಜ್ವಲ್ ರೇವಣ್ಣನವರದು ಎನ್ನಲಾಗುತ್ತಿರುವ ಪೆನ್‌ಡ್ರೈವ್‌ನ ಲೈಂಗಿಕ ದೌರ್ಜನ್ಯ ಇವೆಲ್ಲವುಗಳ ಮಧ್ಯೆ ಲೋಕಸಭಾ ಚುನಾವಣೆಯಲ್ಲಿ ತಮ್ಮ ವರ್ಚಸ್ಸು ಮತ್ತು ಸಾಮರ್ಥ್ಯವನ್ನು ಪಣಕ್ಕಿಟ್ಟಿದೆ. ಇವೆಲ್ಲವುಗಳನ್ನು ಹೆಚ್ಚು– ಕಮ್ಮಿ ಸಮರ್ಥವಾಗಿ ಸರ್ಕಾರ ನಿಭಾಯಿಸಿದೆ ಎಂದೇ ಹೇಳಬಹುದು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಒಳಚರಂಡಿ ವ್ಯವಸ್ಥೆ ಸರಿಪಡಿಸಿ

ಮಾನ್ಯರೆ,

ಮುಂಗಾರು ಪೂರ್ವ ಮಳೆ ಪ್ರಾರಂಭವಾಗಿದ್ದು, ಕೇವಲ ಎರಡು ಮೂರು ದಿನದ ಮಳೆಗೆ ರಾಜಧಾನಿ ಬೆಂಗಳೂರಿನ ರಸ್ತೆಗಳಲ್ಲಿ ನೀರು ತುಂಬಿದ್ದು, ಇನ್ನೂ ಸ್ವಲ್ಪ ಜೋರು ಮಳೆಯಾದರೆ ಮನೆಯೊಳಗೆ ನೀರು ಬರುವುದು, ನೀರಿನಿಂದ ಮನೆಗಳು ಜಲಾವೃತಗೊಳ್ಳುವುದು ಹಲವಾರು ವರ್ಷಗಳಿಂದ ಬೆಂಗಳೂರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಯಾಗಿದೆ.

ಇದಕ್ಕೆ ಮುಖ್ಯ ಕಾರಣ ಸೂಕ್ತ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು, ರಾಜಕಾಲುವೆಯ ಗಾತ್ರವನ್ನು ಸಮಯಕ್ಕೆ ಸರಿಯಾಗಿ ಹಿಗ್ಗಿಸದಿರುವುದು ಅಥವಾ ಬದಲಿ ವ್ಯವಸ್ಥೆ ಮಾಡದಿರುವುದು. ನೀರು ಇಂಗಲು ಸಿಮೆಂಟ್ ಕಟ್ಟಡಗಳು ಅವಕಾಶ ನೀಡದಿರುವುದು, ಕೆರೆಗಳ ಒತ್ತುವರಿ ಹೀಗೆ ಹತ್ತು ಹಲವು ಸಮಸ್ಯೆಗಳಿಂದ ಮಳೆಗಾಲದಲ್ಲಿ ಸಮಸ್ಯೆ ಉಂಟಾಗುತ್ತದೆ.ಮುಂಗಾರು ಮಳೆ ಪ್ರಾರಂಭಕ್ಕೂ ಮೊದಲು ಸರ್ಕಾರ ಒಳಚರಂಡಿ ಹೂಳನ್ನು ತೆಗೆದು ನೀರು ಸರಾಗವಾಗಿ ಹೋಗುವ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು

ಯಾರ ಹೃದಯ ಯಾರ ಪಾಲೋ!


ಮಾನ್ಯರೆ,

ಪಾಕಿಸ್ತಾನದ 19 ವರ್ಷದ ಆಯೇಷಾ ಎಂಬ ಯುವತಿಯೋರ್ವಳಿಗೆ ಭಾರತದ 69 ವರ್ಷ ವಯಸ್ಸಿನ ವೃದ್ಧರೊಬ್ಬರ ಹೃದಯ ಅಳವಡಿಸಿರುವ ವರದಿ ಇತ್ತೀಚೆಗೆ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಕಳೆದ ಐದು ವರ್ಷಗಳಿಂದ ಗಂಭೀರವಾದ ಹೃದ್ರೋಗಕ್ಕೆ ತುತ್ತಾಗಿ ಜೀವನ್ಮರಣಗಳ ನಡುವೆ ಹೋರಾಡುತ್ತಿದ್ದ ಯುವತಿಗೆ ಚೆನ್ನೈನ ಆಡ್ಯಾರ್ ಆಸ್ಪತ್ರೆಯ ವೈದ್ಯರು ಇತ್ತೀಚೆಗೆ ಮೃತಪಟ್ಟಿದ್ದ 69 ವರ್ಷದ ವೃದ್ಧರೊಬ್ಬರ ಹೃದಯವನ್ನು ಅಳವಡಿಸಿ ಯಶಸ್ವಿ ಶಸ್ತ್ರಚಿಕಿತ್ಸೆ ನೆರವೇರಿಸಿರುವುದು ಪ್ರಶಂಸನೀಯವಾಗಿದೆ. ಶಸ್ತ್ರಚಿಕಿತ್ಸೆ ನಂತರ, ಈ ಯುವತಿ ಪೂರ್ಣವಾಗಿ ಚೇತರಿಸಿಕೊಂಡಿದ್ದು, ಫ್ಯಾಷನ್ ಡಿಸೈನರ್ ಆಗುವ ಕನಸಿನೊಂದಿಗೆ ಪಾಕಿಸ್ತಾನಕ್ಕೆ ಹಿಂದಿರುಗಿದ್ದಾಳೆ ಎಂದು ಹೇಳಲಾಗಿದೆ. ಭಾರತ ಮತ್ತು ಪಾಕಿಸ್ತಾನ ಸಾಂಪ್ರದಾಯಿಕ ವೈರಿಗಳಾಗಿದ್ದರೂ ಸಹ ಪಾಕಿಸ್ತಾನದ ಯುವತಿ ಭಾರತದ ಓರ್ವರ ಮೂಲಕ ಮರುಹುಟ್ಟು ಪಡೆದಿದ್ದಾಳೆ. ಅದಕ್ಕೆ ಹೇಳುವುದು ಯಾವ ಹೂವು ಯಾರ ಮುಡಿಗೋ, ಅಲ್ಲ ಯಾರ ಹೃದಯ ಯಾರ ದೇಹಕ್ಕೋ !

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕೆಹೆಚ್‌ಬಿ 3ನೇ ಹಂತದಲ್ಲಿ ಚರಂಡಿ ಸ್ವಚ್ಛಗೊಳಿಸಿ

ಮಾನ್ಯರೆ,



ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ಕುವೆಂಪುನಗರದ (ವಾರ್ಡ್ ಸಂಖ್ಯೆ 57), ಕೆಹೆಚ್‌ಬಿ 3ನೇ ಹಂತ, ನಂದಿ ಪ್ಲೈವುಡ್ ಅಂಗಡಿ ಹಿಂಭಾಗದಲ್ಲಿರುವ ಖಾಲಿ ಮೂಲೆ ನಿವೇಶನ ಸಂಖ್ಯೆ 52 ರಲ್ಲಿರುವ ಚರಂಡಿಯಲ್ಲಿ ಕಸ ಹಾಗೂ ಮಣ್ಣು ತುಂಬಿಕೊಂಡಿದ್ದು, ಮಳೆ ಬಂದಾಗ ಕೆರೆಯಂತಾಗಿದೆ. ನೀರು ಹರಿಯದೆ ಮನೆ ಫೌಂಡೇಶನ್‌ಗೆ ನೀರು ನುಗ್ಗುತ್ತಿದೆ. ಹೆಗ್ಗಣ, ಹಾವು, ಮುಂಗುಸಿಗಳ ವಾಸಸ್ಥಾನವಾಗಿದ್ದು, ಗಬ್ಬು ವಾಸನೆ ಬೀರುತ್ತಿದೆ. ಈ ಬಗ್ಗೆ ವಾರ್ಡ್ ಸಂಖ್ಯೆ 57ರ ಕಾರ್ಪೋರೇಶನ್ ಸೂಪರ್ ವೈಸರ್‌ಗೆ ಮುಖತಃ ಕ್ಲೀನಿಂಗ್ ಮಾಡಿಸಲು ಹಲವಾರು ಬಾರಿ ಮನವಿ ಮಾಡಿದ್ದರೂ ಇದುವರೆವಿಗೂ ಗಮನಹರಿಸಿಲ್ಲ. ಈ ಸಂಬಂಧ ಕಂಪ್ಲೆಂಟ್ ಮಾಡಿದ್ದರೂ, ಗಮನ ಹರಿಸದೇ ಇರುವುದು ಖೇದದ ಸಂಗತಿ. ಮಳೆಗಾಲ ಪ್ರಾರಂಭವಾಗಿದ್ದು ಸಮಸ್ಯೆಗಳು ಇನ್ನೂ ಉಲ್ಬಣಗೊಳ್ಳುವುದರಿಂದ ಅನ್ಯ ಮಾರ್ಗವಿಲ್ಲದೆ ಮತ್ತೊಮ್ಮೆ ಕಂಪ್ಲೆಂಟ್ ನೀಡುತ್ತಿದ್ದೇವೆ. ಈಗಲಾದರೂ ಸಂಬಂಧ ಪಟ್ಟವರು ಚರಂಡಿಯಲ್ಲಿ ತುಂಬಿಕೊಂಡಿರುವ ಕಸ, ಮಣ್ಣನ್ನು ಪೂರ್ಣವಾಗಿ ತೆಗೆಸಬೇಕಾಗಿ ಕೋರಲಾಗಿದೆ.

–ಕಲ್ಲೇಶ್ ಬಿ ಎಸ್, ಕೆಹೆಚ್‌ಬಿ 3ನೇ ಹಂತ, ಕುವೆಂಪುನಗರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಗುರಿ ಎಲ್ಲೋ, ಗಮ್ಯವೆಲ್ಲೋ!!

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದೆ. ರಾಜ್ಯದಲ್ಲಿ ಶೇ.73.40ರಷ್ಟು ಫಲಿತಾಂಶ ಬಂದಿದೆ. ಅದೇ ರೀತಿ ಕೇಂದ್ರ ಸರ್ಕಾರ ನಡೆಸುವ ಸಿಬಿಎಸ್‌ಇ ಫಲಿತಾಂಶವೂ ಪ್ರಕಟವಾಗಿದೆ. ನಾಲ್ಕು ದಿನಗಳ ಅಂತರದಲ್ಲಿ ಈ ಫಲಿತಾಂಶಗಳು ಪ್ರಕಟವಾಗಿವೆ. ರಾಜ್ಯದ ಎಸ್‌ಎಸ್‌ಎಲ್‌ಸಿ ಪಠ್ಯಕ್ರಮ ಬೇರೆ, ಸಿಬಿಎಸ್‌ಇ ಪಠ್ಯಕ್ರಮ ಬೇರೆ. (ಇತ್ತೀಚೆಗೆ ರಾಜ್ಯ ಸರ್ಕಾರವೂ ಸಿಬಿಎಸ್‌ಇ ಕ್ರಮವನ್ನೇ ಅಳವಡಿಸಿಕೊಳ್ಳುತ್ತಿದೆ). ಆದರೆ ಓದುವ ವಿದ್ಯಾರ್ಥಿಗಳ ವಯಸ್ಸು ಮಾತ್ರ ಒಂದೇ. ರಾಜ್ಯದ ಎಸ್‌ಎಸ್‌ಎಲ್‌ಸಿಯ ಫಲಿತಾಂಶ ಶೇ.73.4 ಆದರೆ ಸಿಬಿಎಸ್‌ಸಿಯ ತೇರ್ಗಡೆ ಪ್ರಮಾಣ ಶೇ.93. ಅಂದರೆ ಫಲಿತಾಂಶದಲ್ಲಿ ಸಾಕಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಎರಡೂ ಫಲಿತಾಂಶದಲ್ಲಿ ಸಾಮಾನ್ಯ ಅಂಶ ಎಂದರೆ ಹೆಣ್ಣುಮಕ್ಕಳು ಪಾರಮ್ಯ ಮೆರೆದಿರುವುದು. ರಾಜ್ಯದ ಪರೀಕ್ಷೆಯಲ್ಲಿ ಸರ್ಕಾರಿ ಶಾಲೆಯಲ್ಲಿ ಓದಿದ ಅಂಕಿತಾ ಬಸಪ್ಪ ಪ್ರಥಮ ಸ್ಥಾನ ಗಳಿಸಿರುವುದು ಸಹ ಗಮನಾರ್ಹ ಹಾಗೂ ಅಭಿನಂದನೀಯ ವಿಚಾರ.

ಈ ಹಂತದಲ್ಲಿ ನಮ್ಮ ಶಿಕ್ಷಣ ವಿಧಾನದ ಬಗ್ಗೆ ಒಂದಷ್ಟು ಗಮನ ಹರಿಸುವುದು ಸೂಕ್ತ ಎಂದು ಕಂಡುಬರುತ್ತದೆ. ರಾಜ್ಯ ಹಾಗೂ ಕೇಂದ್ರದ ಶಿಕ್ಷಣ ಪದ್ಧತಿ ಹೆಚ್ಚೂ ಕಡಿಮೆ ಒಂದೇ ರೀತಿ ಇದೆ. ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಎಂದು ಕರೆದರೆ ಸಿಬಿಎಸ್‌ಇನಲ್ಲಿ ಇದನ್ನು ಹತ್ತನೇ ತರಗತಿ ಎಂದು ಹೇಳಲಾಗುತ್ತದೆ. ರಾಜ್ಯದಲ್ಲಿ 12ನೇ ತರಗತಿಯನ್ನು ಪಿಯುಸಿ ಎಂದು ಕರೆದರೆ ಸಿಬಿಎಸ್‌ಇನಲ್ಲಿ 12ನೇ ತರಗತಿ ಎಂದೇ ಕರೆಯಲಾಗುತ್ತದೆ. ಆದರೆ ಇವರೆಡರ ನಡುವೆ ಒಂದು ಗಟ್ಟಿ ಗೆರೆ ಕಾಣಬರುತ್ತಿದೆ. ಸಿಬಿಎಸ್‌ಇ ಪರೀಕ್ಷಾ ವಿಧಾನ ಸ್ವಲ್ಪ ಕಠಿಣ. ಸರಿಯಾಗಿ ಅಭ್ಯಾಸ ಮಾಡದಿದ್ದರೆ ಪಾಸಾಗುವುದು ತುಸು ಕಷ್ಟವೇ. ಜೊತೆಗೆ ಕೇಂದ್ರದ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳೂ ಭಿನ್ನವಾಗಿರುತ್ತವೆ. ಪ್ರತಿ ವಿಷಯದ ಪರೀಕ್ಷೆಯಲ್ಲಿ ಮೂರು ರೀತಿಯ ಪ್ರಶ್ನೆಪತ್ರಿಕೆ ತಯಾರಿಸಿ ಮಕ್ಕಳಿಗೆ ನೀಡಲಾಗುತ್ತದೆ. ಅಕ್ಕಪಕ್ಕದಲ್ಲಿ ಕುಳಿತವರಿಗೆ ಬೇರೆ ಬೇರೆ ರೀತಿಯಾದ ಪ್ರಶ್ನೆಪತ್ರಿಕೆಗಳಿರುತ್ತವೆ. ಹೀಗಾಗಿ ನಕಲು ಮಾಡುವ ಅವಕಾಶವೇ ಇರುವುದಿಲ್ಲ. ಇದರ ಅರಿವಿರುವುದರಿಂದ ಮಕ್ಕಳು ಪರೀಕ್ಷೆಗೆ ಸಾಕಷ್ಟು ಸಿದ್ಧತೆ ಮಾಡಿಕೊಳ್ಳಲೇ ಬೇಕಾಗುತ್ತದೆ. (ರಾಜ್ಯವೂ ಇತ್ತೀಚೆಗೆ ಇದೇ ಕ್ರಮದತ್ತ ಸಾಗುತ್ತಿದೆ ಎಂದು ಕಂಡು ಬರುತ್ತದೆ) ಇಲ್ಲಿ ಯಾವ ಪರೀಕ್ಷಾ ವಿಧಾನ ಸರಿ ಎಂಬ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಪರೀಕ್ಷಾ ವಿಧಾನ ಹೇಗಿರಬೇಕು ಎಂಬ ಬಗ್ಗೆ ಗಮನಹರಿಸಬೇಕು ಎಂಬುದು ಮುಖ್ಯವಾಗುತ್ತದೆ.

ಈ ಸಲ ರಾಜ್ಯದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟವಾದ ದಿನಪತ್ರಿಕೆಗಳಲ್ಲಿ ವರದಿಯಾದ ಹಲವು ವಿಷಯಗಳು ಗಾಬರಿಯಾಗುವಂತೆ ಮಾಡಿತು. ಮೊದಲನೆಯದಾಗಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇಕಡ ಹತ್ತರಷ್ಟು ಫಲಿತಾಂಶ ಕಡಿಮೆಯಾಗಿದೆ ಎಂಬುದು. ಇದು ನಿಜಕ್ಕೂ ಗಂಭೀರವಾಗಿ ಆಲೋಚಿಸಬೇಕಾದ ವಿಷಯ. ಶೇಕಡ ಹತ್ತು ಎಂದರೆ ಕಳೆದ ವರ್ಷಕ್ಕಿಂತ ಸುಮಾರು 85 ಸಾವಿರ ವಿದ್ಯಾರ್ಥಿಗಳು ನಪಾಸಾದರು ಎಂದು ಅರ್ಥ. ವರದಿಗಳಂತೆ ಈ ವರ್ಷ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ 8,59,967. ಇದರಲ್ಲಿ 6,31,204 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಉಳಿಕೆ 2,28,763 ವಿದ್ಯಾರ್ಥಿಗಳು ನಪಾಸಾಗಿದ್ದಾರೆ. ಅಂದರೆ ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ ಕಾಲು ಭಾಗಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಉತ್ತೀರ್ಣರಾಗಿಲ್ಲ. ಈ ಬಗ್ಗೆ ಪರಿಶೀಲನೆ ನಡೆಯಬೇಕಾಗಿದೆ. ಫಲಿತಾಂಶ ಕಡಿಮೆಯಾದ ಬಗ್ಗೆ ಕಾರಣವನ್ನೂ ಪರೀಕ್ಷಾ ಮಂಡಳಿ ಹೇಳಿದೆ. ಈ ವರ್ಷ ಪರೀಕ್ಷೆಯಲ್ಲಿ ನಕಲು ಮಾಡಲು ಅವಕಾಶ ಸಿಗದಿದ್ದರಿಂದ ಫಲಿತಾಂಶ ಕಡಿತವಾಗಿದೆ. ('ಮೈಸೂರು ಮಿತ್ರ' 10ನೇ ಮೇ 2024). ಇದೇ ಮೊದಲ ಬಾರಿಗೆ ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾ ಮತ್ತು ವೆಬ್‌ಕಾಸ್ಟಿಂಗ್ ಅಳವಡಿಸಿದ್ದರಿಂದ ನಕಲು ಮಾಡಲು ಸಾಧ್ಯವಾಗಲಿಲ್ಲ. ಅಲ್ಲದೆ ಇದರಿಂದಾಗಿ ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳಿಗೆ ಸಣ್ಣಪುಟ್ಟ ಸಹಾಯ ಮಾಡಲೂ ಸಾಧ್ಯವಾಗಲಿಲ್ಲ. ವೆಬ್‌ಕಾಸ್ಟಿಂಗ್‌ನಿಂದ ಪರೀಕ್ಷೆ ಕೊಠಡಿಗಳ ದೃಶ್ಯಾವಳಿಗಳನ್ನು ಮೇಲ್ವಿಚಾರಣೆ ಮಾಡಲು ಎಲ್ಲಾ ಜಿಲ್ಲೆಗಳಲ್ಲಿ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿತ್ತು. ಇದರಿಂದಾಗಿ ಪರೀಕ್ಷಾ ಮೇಲ್ವಿಚಾರಕರು ಕಟ್ಟುನಿಟ್ಟಾಗಿ ಪರೀಕ್ಷೆಗಳನ್ನು ನಡೆಸಿದರು ಎಂದು ಹೇಳಿಕೊಂಡಿದೆ. ಇದರಿಂದಾಗಿ ಫಲಿತಾಂಶ ಶೇ. 30 ರಷ್ಟು ಕುಸಿದಿದೆ. ಅಲ್ಲದೆ ಮತ್ತೊಂದು ವಿಚಾರವೆಂದರೆ ಈ ವರ್ಷ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 20 ಅಂಕಗಳನ್ನು ಕೃಪಾಂಕವಾಗಿ ನೀಡಲಾಯಿತು, ಇಲ್ಲದಿದ್ದರೆ ಇನ್ನೂ 1.75 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದರು. ಸರ್ಕಾರ ಮಧ್ಯೆ ಪ್ರವೇಶ ಮಾಡಿ



> **ಇತ್ತೀಚಿನ ಒಂದು ವರದಿಯಂತೆ 7ನೇ ತರಗತಿಯ ವಿದ್ಯಾರ್ಥಿಗಳಿಗೆ ಮೂರನೇ ತರಗತಿಯ ಕನ್ನಡ ಪಠ್ಯಪುಸ್ತಕ ಕೊಟ್ಟು ಓದುವಂತೆ ಹೇಳಿದಾಗ ಅರ್ಧದಷ್ಟು ಮಕ್ಕಳೂ ಓದಲಿಲ್ಲ. ಆದರೂ ಅವರು ಮುಂದೆ 8ನೇ ತರಗತಿಗೆ ಹೋಗುತ್ತಾರೆ. ಸಾಮಾನ್ಯವಾಗಿ ನಮ್ಮ ಪಠ್ಯಗಳು ಆರೋಹಣ ಕ್ರಮದಲ್ಲಿ ಇರುತ್ತದೆ. ಒಂದನೇ ತರಗತಿಯಲ್ಲಿ ಓದಿದ ವಿಷಯದ ಮುಂದುವರೆದ ಭಾಗವಾಗಿ ಎರಡನೇ ತರಗತಿಯ ಪಠ್ಯ ಇರುತ್ತದೆ. ಹಾಗೆಯೇ ಮುಂದಿನ ತರಗತಿಗಳಿಗೆ ಹಿಂದಿನ ತರಗತಿಗಿಂತ ಮುಂದಿನ ಭಾಗಗಳಿರುತ್ತದೆ. ಒಬ್ಬ ವಿದ್ಯಾರ್ಥಿ ಒಂದನೇ ತರಗತಿಯಿಂದ ಸರಿಯಾಗಿ ಆ ಪಠ್ಯಗಳನ್ನು ಓದಿಕೊಂಡು ಬಂದರೆ ಅವನಿಗೆ ಮುಂದಿನ ವಿದ್ಯಾಭ್ಯಾಸ ಸಲೀಸಾಗುತ್ತದೆ. ಆದರೆ ಏನೂ ಜ್ಞಾನವಿಲ್ಲದಿದ್ದರೂ ಮುಂದಿನ ತರಗತಿಗೆ ಹೋಗಬಹುದು ಎಂದಾದಾಗ ವಿದ್ಯಾರ್ಥಿಯ ಜ್ಞಾನ ಗಳಿಕೆ ಹೆಚ್ಚಾಗುವುದಾದರೂ ಹೇಗೆ?**

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 20 ಅಂಕಗಳನ್ನು ಗ್ರೇಸ್ ಮಾರ್ಕ್ ಆಗಿ ನೀಡಿದೆ ಎಂದೂ ಹೇಳಿದೆ. ಮತ್ತೊಂದು ಆಘಾತದ ವಿಷಯ ಎಂದರೆ ಪರೀಕ್ಷೆ ಪಾಸಾಗಲು ಇದ್ದ ಕನಿಷ್ಠ ಅಂಕವನ್ನು 35ರಿಂದ 25ಕ್ಕೆ ಇಳಿಸಿದೆ. ಇದರಿಂದಾಗಿ ಇಷ್ಟು ಫಲಿತಾಂಶ ಬಂದಿದೆ. ಇಲ್ಲದಿದ್ದರೆ ಇನ್ನಷ್ಟು ಕುಸಿಯುತ್ತಿತ್ತು ಎಂಬುದು. ಅಲ್ಲದೆ ಮುಂದಿನ ದಿನಗಳಲ್ಲಿ ಈ ವೆಬ್‌ಕಾಸ್ಟಿಂಗ್ ವಿಧಾನಕ್ಕೆ ವಿದ್ಯಾರ್ಥಿಗಳು ಹೊಂದಿಕೊಳ್ಳುವುದರಿಂದ ಫಲಿತಾಂಶದಲ್ಲಿ ಚೇತರಿಕೆ ಕಾಣಬಹುದು ಎಂಬ ಆಶಾವಾದವನ್ನೂ ಮಂಡಳಿ ನೀಡಿದೆ. ನಿಜ, ಈ ರೀತಿ ಕಠಿಣ ಕ್ರಮ ಕೈಗೊಳ್ಳುವುದು ವಿದ್ಯಾರ್ಥಿಗಳ ದೃಷ್ಟಿಯಿಂದ ಸೂಕ್ತವಾದುದು.

ಇವೆಲ್ಲವನ್ನೂ ಒಟ್ಟುಗೂಡಿಸಿ ನೋಡಿದಾಗ ಈವರೆವಿಗೆ ರಾಜ್ಯದಲ್ಲಿ ಪರೀಕ್ಷೆ ಹೇಗೆ ನಡೆಯುತ್ತಿತ್ತು ಎಂಬುದು ಗೊತ್ತಾಗುತ್ತದೆ. ನಕಲು ಮಾಡಲು ಅವಕಾಶ ನೀಡುವುದು ಸೂಕ್ತವಲ್ಲ. ಹೀಗಾದರೆ ಚೆನ್ನಾಗಿ ಓದಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಮೋಸ ಮಾಡಿದಂತಾಗುವುದಿಲ್ಲವೇ? ಮಂಡಳಿಯೇ ಈ ರೀತಿ ಹೇಳಿಕೆ ನೀಡಿ ತನ್ನ ಅಸಹಾಯಕತೆಯನ್ನು ಪ್ರದರ್ಶಿಸಿದೆ ಎನ್ನಬಹುದಾಗಿದೆ. ಅಲ್ಲದೆ ಪರೀಕ್ಷೆ ಪಾಸು ಮಾಡಲು ಇದ್ದ ಕನಿಷ್ಠ ಅಂಕ 35 ನ್ನು 25ಕ್ಕೆ ಇಳಿಸಿ ಫಲಿತಾಂಶ ನೀಡಿರುವುದು, ಅದೂ ಸಾಲದೆಂಬಂತೆ 20 ಅಂಕಗಳನ್ನು ಕೃಪಾಂಕವಾಗಿ ನೀಡಿದ್ದು. ಅಂದರೆ ವಿದ್ಯಾರ್ಥಿ ಸ್ವಂತವಾಗಿ ಕೇವಲ 5 ಅಂಕಗಳನ್ನು ಗಳಿಸಿದರೆ ಸಾಕು ಪಾಸಾಗಬಹುದು. ಇಷ್ಟಾದರೂ ಎರಡೂ ಕಾಲು ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ ಎಂದರೆ ನಾವು ವಿದ್ಯಾರ್ಥಿಗಳನ್ನು ಹೇಗೆ ತಯಾರು ಮಾಡುತ್ತಿದ್ದೇವೆ ಎಂಬುದನ್ನು ತೀವ್ರವಾಗಿ ಆಲೋಚಿಸಬೇಕಾಗಿದೆ.

ಇದಲ್ಲದೆ ಮತ್ತೊಂದು ವಿಶೇಷ ಎಂದರೆ ಒಬ್ಬ ವಿದ್ಯಾರ್ಥಿನಿ 625ಕ್ಕೆ 625 ಅಂಕಗಳನ್ನು ಗಳಿಸಿರುವುದು. ಇದಕ್ಕಿಂತ ಒಂದು ಅಂಕ ಕಡಿಮೆ ಗಳಿಸಿ ಎರಡನೇ ಸ್ಥಾನ ಗಳಿಸಿದವರು ಏಳು ವಿದ್ಯಾರ್ಥಿಗಳು, 623 ಅಂಕ ಗಳಿಸಿದವರು 14 ಜನ, 622 ಅಂಕಗಳಿಸಿದವರು 21 ಮಂದಿ. ಇದು ಸಾಧ್ಯವೇ? ಇದೂ ವಿದ್ಯಾರ್ಥಿಗಳಿಗೆ ಮಾಡುತ್ತಿರುವ ಮೋಸ ಎಂದು ಪರಿಗಣಿಸಬಹುದೇ? ಈ ಹಿಂದೆ ಅಂದರೆ ಎರಡು ಮೂರು ದಶಕಗಳ ಹಿಂದೆ ರ್‍ಯಾಂಕ್ ಪಡೆದ ವಿದ್ಯಾರ್ಥಿ ಶೇ. 65–70 ಅಂಕಗಳಿಸಿದವರಾಗುತ್ತಿದ್ದರು. ಪ್ರಥಮ ದರ್ಜೆ (ಅಂದರೆ ಶೇಕಡಾ 60 ಹಾಗೂ ಹೆಚ್ಚಿನ ಅಂಕಗಳು) ಪಡೆದವರು ಕೇವಲ ಕೆಲವರಾಗಿರುತ್ತಿದ್ದರು. 55–60 ಅಂಕ ಬಂದರೆ ಅದನ್ನು ಹೈಸೆಕೆಂಡ್ ಕ್ಲಾಸ್ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲಾಗುತ್ತಿತ್ತು. ಅಲ್ಲೋ ಇಲ್ಲೋ ಒಂದಿಬ್ಬರು ಗಣಿತ ಪರೀಕ್ಷೆಯಲ್ಲಿ ಶೇ. 80–85 ಅಂಕ ಗಳಿಸುತ್ತಿದ್ದರು. ಆದರೆ ಈಗ ಎಲ್ಲ ವಿಷಯಗಳಲ್ಲೂ ಶೇಕಡಾ ನೂರು ಅಂಕ ಬರುವುದು ಸಾಮಾನ್ಯವಾಗಿದೆ. ಶೇ.90 ಅಂಕ ಗಳಿಸಿದವನು ದಡ್ಡನಂತೆ ಕಂಡು ಬರುತ್ತಾನೆ. ಹಾಗಾದರೆ ಈಗಿನ ಮಕ್ಕಳು ಹಿಂದಿನವರಿಗಿಂತ ಬುದ್ಧಿವಂತರು ಎಂದು ಪರಿಗಣಿಸಬಹುದೇ? ಎಂಬ ಪ್ರಶ್ನೆಯೂ ಕಾಡುತ್ತದೆ.

ನಿಜ, ಇಂದಿನ ಮಕ್ಕಳಿಗೆ ಕಂಪ್ಯೂಟರ್, ಮೊಬೈಲ್‌ಗಳ ಮೂಲಕ ಹೆಚ್ಚಿನ ಮಾಹಿತಿಗಳು ಲಭ್ಯವಾಗುತ್ತಿದೆ. ಆದರೆ ಹಾಗೆಂದು ಇವುಗಳಿಂದ ಎಷ್ಟು ಮಕ್ಕಳು ಹೆಚ್ಚಿನ ವಿಷಯ ಸಂಗ್ರಹಕ್ಕೆ ತೊಡಗುತ್ತಾರೆ? ಎಂಬುದನ್ನೂ ಪರಿಶೀಲಿಸಬೇಕಾಗುತ್ತದೆ.

ನಮಗೆ ಮುಖ್ಯವಾಗಿ ಕಾಡುವ ಪ್ರಶ್ನೆ ಎಂದರೆ ನಾವು ಮುಂದಿನ ಸಮಾಜಕ್ಕಾಗಿ ಈಗಿನ ಮಕ್ಕಳನ್ನು ಹೇಗೆ ತಯಾರು ಮಾಡುತ್ತಿದ್ದೇವೆ? ಎಂಬುದು. ಇಂದು ಸರ್ಕಾರ ಏನೆಲ್ಲಾ ಸವಲತ್ತುಗಳನ್ನು ಕೊಟ್ಟರೂ ಮಕ್ಕಳು ಸರ್ಕಾರಿ ಶಾಲೆಗೆ ಸೇರಲು ಉತ್ಸಾಹ ತೋರುವುದಿಲ್ಲ. (ಮಕ್ಕಳಲ್ಲ, ಅವರ ಪಾಲಕರು ಎಂದು ಹೇಳಬಹುದು) ನಮ್ಮ ಶಿಕ್ಷಣ ಪದ್ಧತಿ ಹೇಗಾಗಿದೆ ಎಂದರೆ ಒಂದನೇ ತರಗತಿಗೆ ಸೇರುವ ಮಗುವನ್ನು ಹತ್ತನೇ ತರಗತಿಯವರೆಗೆ ನಪಾಸು ಮಾಡುವಂತಿಲ್ಲ. ಒಂದರಿಂದ ಒಂಬತ್ತರವರೆಗೆ ಅವನು ಕನಿಷ್ಠ ಜ್ಞಾನವಿಲ್ಲದಿದ್ದರೂ ಮುಂದಿನ ತರಗತಿಗೆ ಹೋಗುತ್ತಾನೆ. ಹೀಗಾಗಿ ಹತ್ತನೇ ತರಗತಿಗೆ ಬಂದಾಗ ಅದು ಪಬ್ಲಿಕ್ ಪರೀಕ್ಷೆಯಾಗಿರುವುದರಿಂದ ಸೂಕ್ತ ಅರಿವಿಲ್ಲದವರು ನಪಾಸಾಗುತ್ತಾರೆ. ಇತ್ತೀಚಿನ ಒಂದು ವರದಿಯಂತೆ 7ನೇ ತರಗತಿಯ ವಿದ್ಯಾರ್ಥಿಗಳಿಗೆ ಮೂರನೇ ತರಗತಿಯ ಕನ್ನಡ ಪಠ್ಯಪುಸ್ತಕ ಕೊಟ್ಟು ಓದುವಂತೆ ಹೇಳಿದಾಗ ಅರ್ಧದಷ್ಟು ಮಕ್ಕಳೂ ಓದಲಿಲ್ಲ. ಆದರೂ ಅವರು ಮುಂದೆ ಎಂಟನೇ ತರಗತಿಗೆ ಹೋಗುತ್ತಾರೆ. ಸಾಮಾನ್ಯವಾಗಿ ನಮ್ಮ ಪಠ್ಯಗಳು ಆರೋಹಣ ಕ್ರಮದಲ್ಲಿ ಇರುತ್ತದೆ. ಒಂದನೇ ತರಗತಿಯಲ್ಲಿ ಓದಿದ ವಿಷಯದ ಮುಂದುವರೆದ ಭಾಗವಾಗಿ ಎರಡನೇ ತರಗತಿಯ ಪಠ್ಯ ಇರುತ್ತದೆ. ಹಾಗೆಯೇ ಮುಂದಿನ ತರಗತಿಗಳಿಗೆ ಹಿಂದಿನ ತರಗತಿಗಿಂತ ಮುಂದಿನ ಭಾಗಗಳಿರುತ್ತದೆ. ಒಬ್ಬ ವಿದ್ಯಾರ್ಥಿ ಒಂದನೇ ತರಗತಿಯಿಂದ ಸರಿಯಾಗಿ ಆ ಪಠ್ಯಗಳನ್ನು ಓದಿಕೊಂಡು ಬಂದರೆ ಅವನಿಗೆ ಮುಂದಿನ ವಿದ್ಯಾಭ್ಯಾಸ ಸಲೀಸಾಗುತ್ತದೆ. ಆದರೆ ಏನೂ ಜ್ಞಾನವಿಲ್ಲದಿದ್ದರೂ ಮುಂದಿನ ತರಗತಿಗೆ ಹೋಗಬಹುದು ಎಂದಾದಾಗ ವಿದ್ಯಾರ್ಥಿಯ ಜ್ಞಾನ ಗಳಿಕೆ ಹೆಚ್ಚಾಗುವುದಾದರೂ ಹೇಗೆ?

ಇದಕ್ಕೆ ಪರ್ಯಾಯ ಏನು ಎಂಬುದನ್ನು ಇಂದು ತೀವ್ರವಾಗಿ ಯೋಚಿಸಬೇಕಾಗಿದೆ. ನಮ್ಮ 'ಇಂದಿನ ಮಕ್ಕಳು ಮುಂದಿನ ದೇಶದ ಪ್ರಜೆಗಳು' ಎಂದು ಹೇಳುವ ನಾವು ಅವರನ್ನು ಅದಕ್ಕಾಗಿ ಹೇಗೆ ತಯಾರು ಮಾಡುತ್ತಿದ್ದೇವೆ? ಎಂಬ ಬಗ್ಗೆ ಆಲೋಚಿಸಬೇಕಾಗುತ್ತದೆ.

ಪರೀಕ್ಷಾ ವಿಧಾನವೇ ಸರಿಯಿಲ್ಲ ಎಂದು ಹೇಳುವ ಒಂದು ವರ್ಗವೂ ಇದೆ. ವರ್ಷಪೂರ್ತಿ ಓದಿದ್ದನ್ನು ಎರಡು–ಮೂರು ಗಂಟೆಗಳಲ್ಲಿ ಹೇಗೆ ಪರೀಕ್ಷೆ ಮಾಡಬಹುದು? ಆದ್ದರಿಂದ ಪರೀಕ್ಷಾ ವಿಧಾನವೇ ಸರಿಯಿಲ್ಲ ಎಂದು ಅವರು ಹೇಳುತ್ತಾರೆ. ಒಂದು ಹಂತದಲ್ಲಿ ಈ ವಾದ ಸರಿ ಎನಿಸುತ್ತದೆ. ಆದರೆ ವಿದ್ಯಾರ್ಥಿ ಒಂದು ವರ್ಷದಲ್ಲಿ ಏನು ಕಲಿತ ಎಂಬುದರ ಅವಲೋಕನವಾಗದಿದ್ದರೆ ಹೇಗೆ?


ಇನ್ನು ಈ ಫಲಿತಾಂಶದ ಬಗ್ಗೆ ಹಾಗೂ ಸುಧಾರಣೆ ಕುರಿತಾಗಿ ಶಿಕ್ಷಕರ ಅಭಿಪ್ರಾಯವನ್ನು ಪಡೆಯುವುದು ಸೂಕ್ತವಾಗಿರುತ್ತದೆ. ಹೆಚ್ಚಿನ ಮಕ್ಕಳು ಪಾಸಾಗಬೇಕು ಎಂದು ಶಿಕ್ಷಕರು ನಿರಂತರವಾಗಿ ಶ್ರಮಿಸಿರುತ್ತಾರೆ. ಹಾಗಾಗಿ ಅವರ ಅಭಿಪ್ರಾಯ ಪಡೆಯುವುದು ಮುಖ್ಯವಾಗುತ್ತದೆ.

ಈಗ ದೇಶವು ಶಿಕ್ಷಣದ ವಿಷಯದಲ್ಲಿ ಕವಲು ದಾರಿಯಲ್ಲಿದೆ ಎನ್ನಬಹುದು. ಇಲ್ಲಿಯವರೆಗೆ ನಮ್ಮ ಹೋರಾಟ ನಮ್ಮ ಜೊತೆಗಾರರ ಜೊತೆಗೆ ಹಾಗೂ ರಾಷ್ಟ್ರಮಟ್ಟದಲ್ಲಿ ಮಾತ್ರ ಆಗುತ್ತಿತ್ತು. ಮುಂದಿನ ದಿನಗಳಲ್ಲಿ ನಮ್ಮ ಹೋರಾಟ ವಿಶ್ವಮಟ್ಟದಲ್ಲಿ ಆಗಬೇಕಾಗಿದೆ. ಸ್ಪರ್ಧೆ ಎಂದಾದಾಗ ಅದು ಎಲ್ಲರಿಗೂ ಮುಕ್ತವಾಗಿರಬೇಕು. ಹಾಗಾದಾಗ ಜ್ಞಾನ ಪಡೆದವರು ಮುಂದೆ ಬರುತ್ತಾರೆ. ನಮ್ಮ ಮಕ್ಕಳು ದಡ್ಡರಂತೂ ಅಲ್ಲ. ಅವರನ್ನು ನಾವು ತಯಾರು ಮಾಡುತ್ತಿರುವ ರೀತಿಯಿಂದ ಅವರ ಬುದ್ಧಿವಂತಿಕೆ ಬೆಳಕಿಗೆ ಬರುತ್ತಿಲ್ಲ. ಈ ದಿಸೆಯತ್ತ ನಮ್ಮ ಆಲೋಚನೆಗಳಿರಬೇಕು ಎನಿಸುತ್ತದೆ.

ಕಡೆಗೂ ಕುಕ್ಕರಹಳ್ಳಿ ಕೆರೆ ಪುನರುಜ್ಜೀವನಕ್ಕೆ ಮುಂದಾದ ಮೈಸೂರು ಜಿಲ್ಲಾಡಳಿತ



ಕುಕ್ಕರಹಳ್ಳಿ ಕೆರೆ



ಮೈಸೂರು ಮಹಾನಗರಪಾಲಿಕೆ ಕಚೇರಿಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಭೆ ನಡೆಸಿದರು.

ಮೈಸೂರು, ಮೇ 20(ಆರ್‌ಕೆ)– ವಿಶ್ವಮಾನವ ಕುವೆಂಪು ಅವರ ಬರಹ, ಕಾವ್ಯಗಳಿಗೆ ಸ್ಫೂರ್ತಿಯ ತಾಣವಾಗಿದ್ದ ಮೈಸೂರು ನಗರದ ಹೃದಯ ಭಾಗದಲ್ಲಿರುವ ಕುಕ್ಕರಹಳ್ಳಿ ಕೆರೆಯನ್ನು ಪುನರುಜ್ಜೀವನಗೊಳಿಸಲು ಕಡೆಗೂ ಜಿಲ್ಲಾಡಳಿತ ಮುಂದಾಗಿದೆ.

ಒಳಚರಂಡಿ ನೀರು ಹರಿದು ಮಲಿನಗೊಂಡು ಜಲಚರ, ಪಕ್ಷಿಗಳಿಗೆ ತೊಂದರೆಯಾಗುತ್ತಿರುವುದರಿಂದ ಕುಕ್ಕರಹಳ್ಳಿ ಕೆರೆಯನ್ನು ಸ್ವಚ್ಛಗೊಳಿಸಿ ಪ್ರಕೃತಿ ಸೌಂದರ್ಯ ಉಳಿಸಿ ವಾಯುವಿಹಾರಿಗಳಿಗೆ ಉತ್ತಮ ವಾತಾವರಣ ಸೃಷ್ಟಿಸುವ ಸಲುವಾಗಿ ಜಿಲ್ಲಾಡಳಿತವು ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿದೆ.

ಮೈಸೂರು ಮಹಾನಗರಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಸೋಮವಾರ ಅಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಪ್ರಮುಖರೊಂದಿಗೆ ಕುಕ್ಕರಹಳ್ಳಿ ಕೆರೆ ಪುನರುಜ್ಜೀವನ ಸಂಬಂಧ ಸಭೆ ನಡೆಸಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜೂನ್ ಅಂತ್ಯದೊಳಗೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಲ್ಲಿಸುವಂತೆ ಜವಾಬ್ದಾರಿ ಹೊತ್ತಿರುವ ಇಂಟಾಕ್ ಸಂಸ್ಥೆಗೆ ಸೂಚನೆ ನೀಡಿದರು.

ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ (ಇಂಟಾಕ್) ಸಂಸ್ಥೆಗೆ ಕುಕ್ಕರಹಳ್ಳಿ ಕೆರೆ ನೀರನ್ನು ಸ್ವಚ್ಛಗೊಳಿಸಿ ಮಲಿನ ನೀರು ಹರಿದುಬರದಂತೆ ತಡೆದು ಮಳೆ ನೀರು ಹರಿದು ಬರುವ ಕಾಲುವೆಗಳಲ್ಲಿ ಹೂಳು ತೆಗೆಯುವುದು, ದಿವಾನ್ ಪೂರ್ಣಯ್ಯ ನಾಲೆ ಒತ್ತುವರಿ ತೆರವುಗೊಳಿಸಿ ಸಂಪೂರ್ಣ ಅಭಿವೃದ್ಧಿಗಾಗಿ ಸರ್ವೆ ಮಾಡಿ ಡಿಪಿಆರ್ ಸಲ್ಲಿಸುವ ಕಾರ್ಯವನ್ನು ಒಪ್ಪಿಸಲಾಗಿದ್ದು, ಸಂಸ್ಥೆಯು ಜೂನ್ ಅಂತ್ಯದೊಳಗೆ ವರದಿ ಸಲ್ಲಿಸಬೇಕು ಎಂದು ಅವರು ತಿಳಿಸಿದರು.

ಸುತ್ತಮುತ್ತಲಿನ ವಸತಿ ಬಡಾವಣೆಗಳಿಂದ ಬರುತ್ತಿರುವ ಒಳಚರಂಡಿ ನೀರನ್ನು ತಡೆಯಬೇಕು, ಮಳೆ ನೀರು ಹರಿದು ಬರುವ ಸಂಪರ್ಕ ಜಾಲ ಸದೃಢಪಡಿಸಿ ಕೆರೆ ನೀರು ಸದಾ ಶುದ್ಧವಾಗಿರುವಂತೆ ನೋಡಿಕೊಳ್ಳಬೇಕು ಎಂದ ಜಿಲ್ಲಾಧಿಕಾರಿಗಳು, ಕುಕ್ಕರಹಳ್ಳಿ ಕೆರೆ ಬಳಿಯ ಕಸದ ರಾಶಿಗಳನ್ನು ತೆರವುಗೊಳಿಸಬೇಕೆಂದು ತಿಳಿಸಿದರು.

ಕೆರೆಯ ಹಸಿರೀಕರಣ ಉಳಿಸಿಕೊಂಡು, ನಿಶ್ಯಬ್ದ ಕಾಪಾಡಿಕೊಂಡು ಪ್ರಾಣಿ–ಪಕ್ಷಿಗಳಿಗೆ ಅಡಚಣೆಯಾಗದಂತೆ ನಿರ್ವಹಿಸಬೇಕು, ಈ ಕುರಿತು ಸ್ಥಳದಲ್ಲಿ ಸೂಚನಾ ಫಲಕಗಳನ್ನು ಅಳವಡಿಸಬೇಕು. ನಿತ್ಯ ಸಾವಿರಾರು ಮಂದಿ ವಾಯುವಿಹಾರ ಮಾಡುವವರಿಗೆ ಶುದ್ಧ ವಾತಾವರಣ ನಿರ್ಮಾಣವಾಗುವಂತೆ ಮಾಡಲು ಯೋಜನೆ ರೂಪಿಸಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಇಂಟಾಕ್ ಸಂಸ್ಥೆ ಪ್ರತಿನಿಧಿಗಳಿಗೆ ಸಲಹೆ ನೀಡಿದರು.

ಕುಕ್ಕರಹಳ್ಳಿ ಕೆರೆ ಅಭಿವೃದ್ಧಿ ಸಂಬಂಧ ತಜ್ಞರು, ಪರಿಣತರು, ಪರಿಸರ ಪ್ರೇಮಿಗಳು, ಸಂಘ–ಸಂಸ್ಥೆಗಳ ಪ್ರಮುಖರಿಂದ ಸಲಹೆಗಳನ್ನು ಪಡೆದ ಅವರು, ಪುನರುಜ್ಜೀವನಗೊಳಿಸಲು ಕೈಗೊಂಡಿರುವ ಕ್ರಮಗಳ ಕುರಿತು ಚರ್ಚೆ ನಡೆಸಿದರು.

ನಗರಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಆತ್ಮ ಸಾಕ್ಷಾತ್ಕಾರವೇ ಪರಮಾರ್ಥಗೀತೆ


ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮೀಜಿ ಅಭಿಮತ



ಮೈಸೂರು, ಮೇ 20–ಆತ್ಮ ಸಾಕ್ಷಾತ್ಕಾರವೇ ಪರಮಾರ್ಥಗೀತೆ ಎಂದು ಬೆಳಗಾವಿಯ ಘೋಡಗೇರಿ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು ಹೇಳಿದರು. ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರಿಗೆ ಶ್ರೀ ನಿಜಗುಣ ಶಿವಯೋಗಿ ಗಳವರ 'ಪರಮಾರ್ಥಗೀತೆ' ಕೃತಿಯ ಬಗ್ಗೆ ಏರ್ಪಡಿಸಿರುವ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ, ಕವಿ–ಕೃತಿ ಪರಿಚಯದ ಉಪನ್ಯಾಸ ನೀಡುತ್ತಾ ತಿಳಿಸಿದರು.

ಶ್ರೀ ನಿಜಗುಣ ಶಿವಯೋಗಿಗಳು ನಾಡು ಕಂಡ ಅಪ್ರತಿಮ ದಾರ್ಶನಿಕರು. ಅವರ ಕೃತಿಗಳಾದ ವಿವೇಕ ಚಿಂತಾಮಣಿ, ಪರ ಮಾರ್ಥ ಪ್ರಕಾಶಿಕೆ, ಅನುಭವ ಸಾರ, ಕೈವಲ್ಯ ಪದ್ಧತಿ, ಪರಮಾರ್ಥ ಗೀತೆಗಳು ಬದುಕಿನ ಮೌಲ್ಯಗಳನ್ನು ತಿಳಿಸಿ ಮೋಕ್ಷ ಮಾರ್ಗದ ಕಡೆಗೆ ಕೊಂಡೊಯ್ಯುವ ದಾರಿದೀಪಗಳಾಗಿವೆ. ಭಾರತೀಯ ಸಂಸ್ಕೃತಿಯಲ್ಲಿನ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮಗಳು ತ್ರಿವರ್ಗಕ್ಕೆ ಸೇರಿದರೆ, ಮೋಕ್ಷ ಪ್ರವರ್ಗಕ್ಕೆ ಸೇರಿದೆ. ಪರಮಾರ್ಥ ಗೀತೆಯು ಶುದ್ಧವಾದ ಮನಸ್ಸು, ಹೃದಯ, ಸದ್ಗುಣಗಳನ್ನು ಹೊಂದಿರುವ ವ್ಯಕ್ತಿಗೆ ಬ್ರಹ್ಮೋಪದೇಶ ಮಾಡುವುದಾಗಿದೆ ಕೃತಿಯು ಕಂದಪದ್ಯ ಹಾಗೂ ರಗಳೆ ಗಳಿಂದ ಕೂಡಿದ್ದು, ವಸ್ತು–ಶಕ್ತಿ–ದ್ವಿತಯಂ, ಭೂತ ಪಂಚೀಕರಣಂ, ಗುಣ ಭೇದ ವಿಕಾರಂ, ಪಿಂಡಾಂಡ–ಉದಯ–ವಿಭೇದ, ವಿಶ್ವ ರಚನಾ ಭೇದಂ, ಬಂಧ ಮೋಕ್ಷ ದ್ವಿಯಯಂ, ಸಾಧಕನ ಸ್ಥಿತಿ, ಯೋಗದ ಕ್ರಮ, ನಿಸ್ಸಂಗ ಯೋಗ, ಚತುರ್ಭೂ ಮಿಕಾ, ಯೋಗಿವರನ ಚರಿತಂ, ಗತಿಗಳನ್ನು ಹೊಂದಿದೆ ಎಂದು ತಿಳಿಸಿದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಮೇ 20– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ಕೆ.ವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಮೇ 21ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಶ್ರೀರಾಂಪುರ ಎರಡನೇ ಹಂತ, ರಮಾಭಾಯಿನಗರ, ಮಹದೇವಪುರ, ಜಯನಗರ 1ರಿಂದ 20ನೇ ಕ್ರಾಸ್, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ ಕೆ ಬ್ಲಾಕ್, ಅಪೋಲೊ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶಗಳು. ಚಿಕ್ಕಹರದನಹಳ್ಳಿ, ಗೊರೂರುಗ್ರಾಮ, ಕಳಲವಾಡಿ, ಕೋಟೆ ಹುಂಡಿ, ಯಡಹಳ್ಳಿ, ರಾಯನಕೆರೆ, ಸರಸ್ವತಿಪುರಂ 1ನೇ ಮುಖ್ಯರಸ್ತೆಯಿಂದ 6ನೇ ಮುಖ್ಯರಸ್ತೆ, ಭಾಗಶಃ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.







13ನೇ ವರ್ಷದ ಚಿರಸ್ಮರಣೆ



ವಿ.ಮುನಿವೆಂಕಟಪ್ಪ
ಕ.ಆ.ಸೇ ನಿವೃತ್ತ ವಿಶೇಷ ಜಿಲ್ಲಾಧಿಕಾರಿ, ಮೈಸೂರು
ಜನನ: 03.02.1938 ಮರಣ: 21.05.2012

ನೀವು ನಮ್ಮನ್ನಗಲಿ 12 ವರ್ಷಗಳು ಕಳೆದರೂ ನಮ್ಮ ಬದುಕಿನ ಬಾಳ ಬಂಡಿ ನಡೆಸುತ್ತಿರುವ ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಸದಾ ಪ್ರಾರ್ಥಿಸುವ
ನಿಮ್ಮ ಪತ್ನಿ ಸರಸ.ವಿ.ಎಂ.
ಮಕ್ಕಳು ಬಂಧುಬಳಗ ಸ್ನೇಹಿತರು

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾಸನ ವಿಭಾಗ, ಅರಣ್ಯ ಭವನ, ಡೈರಿ ಸರ್ಕಲ್ ಹತ್ತಿರ, ಬಿ.ಎಂ. ರೋಡ್, ಹಾಸನ–573201
Phone & Fax :08172-268296 Email: dcfhassan@yahoo.in.
ಸಂಖ್ಯೆ: ಬಿ3/ಬಿಯುಡಿ/ವಿವ–08/2024–25 ದಿನಾಂಕ: 20.05.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ) 2023–24ನೇ ಸಾಲಿನಲ್ಲಿ ಹಾಸನ ಪ್ರಾದೇಶಿಕ ವಿಭಾಗದ ವಿವಿಧ ವಲಯಗಳಲ್ಲಿ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜು 702.862 ಲಕ್ಷ ಮೊತ್ತದ 130 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಂಕ್ಷಿಪ್ತ ಟೆಂಡರ್ ಕರೆಯಲಾಗಿದೆ. ದಿನಾಂಕ: 29.05.2024 ರಂದು 16.00 (ಸಂಜೆ 4.00 ಗಂಟೆ) ಗಂಟೆಯವರೆವಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಪಡೆಯಬಹುದಾಗಿದೆ.

ಸಹಿ/–ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/16/ಕೆಎಸ್‌ಎಂಸಿಎ/2024–25

ಮೈಸೂರು ಮಿತ್ರ

ಮಂಗಳವಾರ 21 ಮೇ 2024

ಪ್ರತ್ಯೇಕ ಅಪಘಾತ: ಇಬ್ಬರು ಸಾವು, ನಾಲ್ವರು ಚಿಂತಾಜನಕ



ಅಕ್ಷಯ್



ಇಂದ್ರಮ್ಮ





ಮದ್ದೂರಿನ ಸಾದೊಳಲು ಬಳಿ ಸಂಭವಿಸಿದ ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು(ಬಲಚಿತ್ರ) ಮತ್ತು ಜಖಂಗೊಂಡಿರುವ ಬಸ್

ಮದ್ದೂರು/ಹಲಗೂರು, ಮೇ 20– ಪ್ರತ್ಯೇಕ ಅಪಘಾತ ಪ್ರಕರಣದಲ್ಲಿ ಇಬ್ಬರು ಸಾವನ್ನಪ್ಪಿ, ನಾಲ್ವರ ಸ್ಥಿತಿ ಚಿಂತಾಜನಕವಾಗಿರುವ ಘಟನೆ ವರದಿಯಾಗಿದೆ. ಕೆಎಸ್‌ಆರ್‌ಟಿಸಿ ಬಸ್ ಹಾಗೂ ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಓರ್ವ ಸ್ಥಳದಲ್ಲೇ ಸಾವನ್ನಪ್ಪಿ, ನಾಲ್ಕು ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮದ್ದೂರು ತಾಲೂಕಿನ ಸಾದೊಳಲು ಗ್ರಾಮದ ಬಳಿ ಸಂಭವಿಸಿದೆ.

ಮದ್ದೂರು–ಮಳವಳ್ಳಿ ರಸ್ತೆಯಲ್ಲಿರುವ ಸಾದೊಳಲು ಗ್ರಾಮದ ಗೇಟ್ ಬಳಿ ದುರ್ಘಟನೆ ಸಂಭವಿಸಿದ್ದು, ಘಟನೆಯಲ್ಲಿ ಮಳವಳ್ಳಿ ಪಟ್ಟಣದ ಪೇಟೆ ಬೀದಿ ನಿವಾಸಿ ಅಕ್ಷಯ್ (24) ಸಾವನ್ನಪ್ಪಿದ ಯುವಕನಾಗಿದ್ದು, ಮಳವಳ್ಳಿ ಕಡೆಯಿಂದ ಬರುತ್ತಿದ್ದ ಬಸ್ ಹಾಗೂ ಇತ್ತ ಮದ್ದೂರು ಕಡೆಯಿಂದ ಹೋಗುತ್ತಿದ್ದ ಸ್ವಿಫ್ಟ್ ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಈ ದುರ್ಘಟನೆ ನಡೆದಿದೆ.

ಡಿಕ್ಕಿ ರಭಸಕ್ಕೆ ಕಾರು ನಜ್ಜುಗುಜ್ಜಾಗಿದ್ದು, ಕಾರು ಚಾಲಕ ಅಕ್ಷಯ್ ಸ್ಥಳದಲ್ಲೇ ಸಾವನ್ನಪ್ಪಿದರೆ, ಕಾರಿನಲ್ಲಿದ್ದ ಉಳಿದ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ.

ಸ್ವಿಫ್ಟ್ ಕಾರಿನಲ್ಲಿದ್ದ ಐವರು ಸ್ನೇಹಿತರು ಬೆಳಗ್ಗೆ 7 ಗಂಟೆ ಸುಮಾರಿಗೆ ಮಳವಳ್ಳಿ ಟೌನ್‌ನಿಂದ ಚನ್ನಪಟ್ಟಣ ತಾಲೂಕಿನ ಗೌಡಗೆರೆಯ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆದು ವಾಪಸ್ ಬರುವಾಗ ಮದ್ದೂರಿನಿಂದ ಮಳವಳ್ಳಿ ಕಡೆ ಹೋಗುವಾಗ ಈ ಅಪಘಾತ ಸಂಭವಿಸಿದೆ.

ಚಿಂತಾಜನಕ ಸ್ಥಿತಿಯಲ್ಲಿರುವ ಮಧು (25), ಬಸವರಾಜು (26), ಮನು (25), ಮಾದೇಗೌಡ (27) ಅವರನ್ನು ಮದ್ದೂರಿನ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇವರುಗಳು ಸಹ ಮಳವಳ್ಳಿ ಪಟ್ಟಣದ ಪೇಟೆ ಬೀದಿ ನಿವಾಸಿಗಳಾಗಿದ್ದಾರೆ.

ಬಸ್ಸಿನಲ್ಲಿದ್ದ ಪ್ರಯಾಣಿಕರು ಹಾಗೂ ಚಾಲಕ, ನಿರ್ವಾಹಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಅಪಘಾತದಿಂದಾಗಿ ಬೋರಾಪುರ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಮದ್ದೂರು ಸಿಪಿಐ ಪ್ರಸಾದ್ ಹಾಗೂ ಪೊಲೀಸರು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದರು.

ಅಪಘಾತ, ಮಹಿಳೆ ಸಾವು: ಹಲಗೂರು ರಾಷ್ಟ್ರೀಯ ಹೆದ್ದಾರಿಯ ಬೈಪಾಸ್ ರಸ್ತೆಯಲ್ಲಿ ಮಹೇಂದ್ರ ಗೂಡ್ಸ್ ವಾಹನ ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನ ಹಿಂಬದಿಯಲ್ಲಿದ್ದ ಮಹಿಳೆ ಸಾವನ್ನಪ್ಪಿದ ಘಟನೆ ಸೋಮವಾರ ಮುಂಜಾನೆ ಸಂಭವಿಸಿದೆ.

ಘಟನೆಯಲ್ಲಿ ಮಳವಳ್ಳಿ ತಾಲೂಕಿನ ಗೊಲ್ಲರಹಳ್ಳಿ ಗ್ರಾಮದ ಇಂದ್ರಮ್ಮ (45) ಸಾವನ್ನಪ್ಪಿದ ಮಹಿಳೆಯಾಗಿದ್ದು, ತಮ್ಮ ಮಗುವಿಗೆ ಜ್ವರವಿದ್ದ ಕಾರಣ ಹಲಗೂರಿಗೆ ರೋಹಿತ್ ಗೌಡ ಅವರ ಬೈಕ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆ ದಾಟುವಾಗ, ಗೂಡ್ಸ್ ವಾಹನ ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ರೋಹಿತ್‌ಗೌಡ ಹಾಗೂ ಹಿಂಬದಿಯ ಸವಾರ ಇಂದ್ರಮ್ಮಗೆ ತಲೆ ಹಾಗೂ ಕೈ, ಕಾಲುಗಳಿಗೆ ಗಂಭೀರವಾಗಿ ಗಾಯಗಳಾಗಿವೆ.

ತಕ್ಷಣ ಹಲಗೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಂದ್ರಮ್ಮ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ರೋಹಿತ್ ಗೌಡ ಮತ್ತು ಇಂದಿರಮ್ಮ ಅವರ ಮಗುವನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾವೇರಿ ನದಿ ದಂಡೆಯಲ್ಲಿ ಒತ್ತುವರಿ ತೆರವು

ಪೊಲೀಸರ ಸಮ್ಮುಖದಲ್ಲಿ ಅಧಿಕಾರಿಗಳ ಕಾರ್ಯಾಚರಣೆ



ಶ್ರೀರಂಗಪಟ್ಟಣ, ಮೇ 20–ತಾಲೂಕಿನ ಬಂಗಾರದೊಡ್ಡಿ ನಾಲೆಯ ಸಮೀಪ ಹಾಗೂ ಕಾವೇರಿ ನದಿ ದಂಡೆಯಲ್ಲಿ ಕೆಲವು ಖಾಸಗಿ ಭೂ ಮಾಲೀಕರು ಅನಧಿಕೃತವಾಗಿ ಕಾವೇರಿ ನದಿ ತೀರವನ್ನು ಒತ್ತುವರಿ ಹಾಗೂ ತಡೆಗೋಡೆ ನಿರ್ಮಿಸಿಕೊಂಡಿದ್ದನ್ನು ತಹಸೀಲ್ದಾರ್ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಪೊಲೀಸರ ರಕ್ಷಣೆಯಲ್ಲಿ ತೆರವುಗೊಳಿಸಿದ್ದಾರೆ.

ತಾಲೂಕಿನ ರಾಜಸ್ವ ನಿರೀಕ್ಷಕರು ಸೇರಿದಂತೆ 15 ಜನ ಪೊಲೀಸ್ ಸಿಬ್ಬಂದಿ, ಹಾಗೂ ತಾಲ್ಲೂಕು ಭೂಮಾಪಕರೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿ ಸರ್ವೆ ನಂಬರ್. 175/4ರಲ್ಲಿ ಕಾವೇರಿ ನದಿ ಪಾತ್ರದ ಖರಾಬು ಭೂಮಿಯನ್ನು ಒತ್ತುವರಿ ಮಾಡಿರುವುದನ್ನು ತೆರವುಗೋಳಿಸಿ ಕಾವೇರಿ ನದಿ ಗಡಿಯನ್ನು ಗುರ್ತಿಸಿ ಗಡಿಭಾಗದಲ್ಲಿ ಕಂದಕವನ್ನು (Trench)ತೆಗೆಯಲಾಗಿದೆ.

ಸುಮಾರು 50–60 ಟಿಪ್ಪರ್ ಮಣ್ಣನ್ನು ನದಿ ಪಾತ್ರದಲ್ಲಿ ಹಾಕಿ ಎತ್ತರ ಮಾಡಿರುವುದನ್ನು ತೆರವುಗೊಳಿಸಲು ಸ್ಥಳದಲ್ಲಿಯೇ ಸೂಚಿಸಲಾಯಿತು. ಒಂದು ವಾರದೊಳಗೆ ಮಣ್ಣನ್ನು ತೆಗೆದು ಯಥಾಸ್ಥಿತಿಗೆ ತರುವಂತೆ ಸೂಚಿಸಲಾಯಿತು, ಇಲ್ಲವಾದಲ್ಲಿ ಕ್ರಮ ತೆಗೆದುಕೊಳ್ಳುವುದಾಗಿ ಒತ್ತುವರಿದಾರರಿಗೆ ಅಧಿಕಾರಿಗಳು ತಿಳಿಸಿದರು.

ಕಾವೇರಿ ನದಿ ಪಾತ್ರದ ಖರಾಬು ಭೂಮಿಯನ್ನು ಒತ್ತುವರಿ ಮಾಡಿ ನದಿಯ ದಂಡೆಯ ಸ್ವಾಭಾವಿಕ ಸ್ಥಿತಿಯನ್ನು ಬದಲಾಯಿಸಿ ಕೆಲವು ಕಾಮಗಾರಿಯನ್ನು ನದಿಯ ಖರಾಬಿನಲ್ಲಿ ಕೈಗೊಂಡಿರುವುದನ್ನು ತೆರವುಗೊಳಿಸುವ ಸಂದರ್ಭದಲ್ಲಿ ವಿದ್ಯುತ್ ಲೈನ್‌ಗಳು ಇದ್ದ ಕಾರಣ ಸುರಕ್ಷತಾ ಹಿತದೃಷ್ಟಿಯಿಂದ ತೆರವುಗೊಳಿಸಲು ಸಾಧ್ಯವಾಗಿಲ್ಲ. ಸ್ಥಳದಲ್ಲಿ ಹಾಜರಿದ್ದ ಮಾಲೀಕರು 15 ದಿನಗಳ ಒಳಗೆ ಒತ್ತುವರಿಯನ್ನು ತೆರವುಗೊಳಿಸಿಕೊಡುವುದಾಗಿ ಉಲ್ಲೇಖ (1)ರಲ್ಲಿ ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬರ, ಬೆಳೆ ನಷ್ಟ ಪರಿಹಾರ ಒದಗಿಸಲು ಆಗ್ರಹಿಸಿ ಪ್ರತಿಭಟನೆ



ಮದ್ದೂರು, ಮೇ 20–ಕಬ್ಬು ಸೇರಿದಂತೆ ತೋಟಗಾರಿಕಾ ಬೆಳೆಗಳಿಗೆ ಸಮರ್ಪಕ ಬರ ಪರಿಹಾರ ಹಾಗೂ ಬೆಳೆ ನಷ್ಟ ಪರಿಹಾರವನ್ನು ಒದಗಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಾಲೂಕಿನ ಕೊಪ್ಪದಲ್ಲಿ ಮದ್ದೂರು–ನಾಗಮಂಗಲ ಮಾರ್ಗದ ರಸ್ತೆ ಸಂಚಾರ ತಡೆದು ಪ್ರತಿಭಟನೆ ಮಾಡಲಾಯಿತು.

ಸಮರ್ಪಕವಾದ ಬರ ಪರಿಹಾರ ಹಾಗೂ ಬೆಳೆನಷ್ಟ ಪರಿಹಾರ ಕೊಡದ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿ, ರಸ್ತೆ ಸಂಚಾರ ತಡೆದ ಕಾರಣ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರೈತ ಮುಖಂಡ ಕೀಳಘಟ್ಟ ನಂಜುಂಡಯ್ಯ ಮಾತನಾಡಿ, ಜಿಲ್ಲೆಯ ಪ್ರಮುಖ ಬೆಳೆಗಳಲ್ಲಿ ಕಬ್ಬು ಅಗ್ರಮಾನ್ಯ ಸ್ಥಾನವನ್ನು ಪಡೆದುಕೊಂಡಿದೆ. ಅದಕ್ಕಾಗಿಯೇ ಮಂಡ್ಯ ಜಿಲ್ಲೆಯನ್ನು ಸಕ್ಕರೆ ನಾಡು ಎಂದು ಕರೆಯಲಾಗುತ್ತದೆ. ಪ್ರಸ್ತುತ ಮಂಡ್ಯ ಜಿಲ್ಲೆಗೆ ಭೀಕರ ಬರಗಾಲ ಬಂದೋದಗಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರು ತಾವು ಬೆಳೆದ ಬೆಳೆಗಳಿಂದ ನಷ್ಟ ಮಾಡಿಕೊಂಡು ವೇದನೆ ಪಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಯ ಪ್ರಧಾನವಾದ ಕಬ್ಬಿನ ಬೆಳೆ ಗದ್ದೆಗಳಲ್ಲಿ ಒಣಗಿ ಬೆಂಡಾಗಿದೆ. ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿ ಹಣ ವ್ಯರ್ಥವಾಗಿದೆ. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ಸೀಬೆ, ಮಾವು ಸೇರಿದಂತೆ ಇತರ ಬೆಳೆಗಳು ರೈತನ ಕೈಗೆ ಸೇರದೆ ಸಂಕಷ್ಟ ಉಂಟು ಮಾಡಿವೆ. ಸರ್ಕಾರ ಭತ್ತ, ರಾಗಿ, ಮೆಕ್ಕೆಜೋಳ ಬೆಳೆಗಳಿಗೆ ಮಾತ್ರ ಪರಿಹಾರ ನೀಡಲು ಹೊರಟಿರುವುದು ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಎಂಬ ಪರಿಸ್ಥಿತಿ ಉಂಟಾಗಿದೆ ಎಂದರು.

ರೈತ ಮುಖಂಡ ಸೊ.ಶಿ.ಪ್ರಕಾಶ್ ಮಾತನಾಡಿ, ಸರ್ಕಾರ ಕಬ್ಬು ಸೇರಿದಂತೆ ನಷ್ಟವಾಗಿರುವ ತೋಟಗಾರಿಕೆ ಬೆಳೆಗಳಿಗೆ ಸೂಕ್ತ ಪರಿಹಾರ ನೀಡಬೇಕು. ಫಸಲ್‌ಭೀಮಾ ಯೋಜನೆಯಡಿ ಬೆಳೆ ವಿಮೆ ಮಾಡಿಸಿರುವ ರೈತರಿಗೂ ಇನ್ನೂ ಪರಿಹಾರ ಬಂದಿಲ್ಲ. ಅಧಿಕಾರಿಗಳು ಚುನಾವಣಾ ನೀತಿ ಸಂಹಿತೆಯ ನೆಪ ಹೇಳಿಕೊಂಡು ಕಾಲಹರಣ ಮಾಡುತ್ತಿದ್ದಾರೆ ಎಂದರು.

ಪ್ರತಿಭಟನಾ ಸ್ಥಳಕ್ಕೆ ಬಂದ ಕಂದಾಯ ನಿರೀಕ್ಷಕ ಮಹೇಂದ್ರ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ರೈತ ಮುಖಂಡರಾದ ಅಣ್ಣೂರು ಮಹೇಂದ್ರ ಸೊ.ಶಿ.ಪ್ರಕಾಶ್, ನವೀನ್, ಕುಮಾರ್, ಜಗದೀಶ್, ಪುಟ್ಟಸ್ವಾಮಿ, ರಾಮೇಗೌಡ, ಉಮೇಶ್, ನಿಂಗೇಗೌಡ, ಶ್ರೀನಿವಾಸ್, ಶಿವರಾಮು, ಶಿವಮೂರ್ತಿ, ಕುಮಾರ್, ತಿಮ್ಮೇಶ್, ಶಿವನಂಜೇಗೌಡ, ರಾಮಣ್ಣ, ರಾಮಕೃಷ್ಣ ಸೇರಿದಂತೆ ಇತರರು ಇದ್ದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ



ಮಂಡ್ಯ, ಮೇ 20– ಬಸರಾಳು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಹಮ್ಮಿಕೊಳ್ಳಲಾಗಿದ್ದು, ಮೇ 21ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಬಸರಾಳು, ಶಿವಪುರ, ಬೇಬಿ, ಕಂಬದಹಳ್ಳಿ, ಬಿದರಕಟ್ಟೆ, ಮಾರಸಿಂಗನಹಳ್ಳಿ, ಅಂಕುಶಾಪುರ, ಬೆನ್ನಹಟ್ಟಿ, ಶಾನಭೋಗನಹಳ್ಳಿ, ಬೊಮ್ಮನಹಳ್ಳಿ, ಅನುಕುಪ್ಪೆ, ಮನುಗನಹಳ್ಳಿ, ಎಂಹಟ್ನ, ಗಣಿಗ, ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಮಂಡ್ಯ ಸೆಸ್ಕ್, ಕಾ ಮತ್ತು ಪಾ ವಿಭಾಗದ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿನಕುರಳಿ ಬಳಿ ಸಿಡಿಲು ಬಡಿದು ಹಸು ಸಾವು

ಮತ್ತೊಂದು ಹಸು, ಯುವಕ ಅಸ್ವಸ್ಥ



ಚಿನಕುರಳಿ, ಮೇ 20–ಚಿನಕುರುಳಿ ಬಳಿಯ ಇಳ್ಳೇನಹಳ್ಳಿ ಗ್ರಾಮದಲ್ಲಿ ಭಾನುವಾರ ಸುರಿದ ಭಾರಿ ಮಳೆ ವೇಳೆ ಸಿಡಿಲು ಬಡಿದು ಒಂದು ಹಸು ಸ್ಥಳದಲ್ಲೇ ಸಾವನ್ನಪ್ಪಿ, ಮತ್ತೊಂದು ಹಸು ಹಾಗೂ ಯುವಕ ಗಾಯಗೊಂಡಿದ್ದಾರೆ.

ಗ್ರಾಮದ ಬೆಟ್ಟೇಗೌಡರಿಗೆ ಸೇರಿದ ಹಸುಗಳನ್ನು ಜಮೀನು ಬಳಿಯಿಂದ ಮೊಮ್ಮಗ ಮನೋಜ್ ಮನೆಗೆ ಹಿಡಿದುಕೊಂಡು ಬರುವ ವೇಳೆ 1.20 ಲಕ್ಷರೂ ಬೆಲೆಬಾಳುವ ಹಸು ಸಾವನ್ನಪ್ಪಿದ್ದು, ಮತ್ತೊಂದು 80 ಸಾವಿರ ಬೆಲೆ ಬಾಳುವ ಹಸು ಅಸ್ವಸ್ಥಗೊಂಡಿದೆ.

ಈ ವೇಳೆ ಸ್ಥಳದಲ್ಲಿದ್ದ ಮನೋಜ್ ಕೂಡ ಸಿಡಿಲಿನ ಆಘಾತದಿಂದ ಅಸ್ವಸ್ಥಗೊಂಡಿದ್ದಾನೆ. ಈತನನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ.

ಈ ವೇಳೆ ಗ್ರಾಮ ಲೆಕ್ಕಾಧಿಕಾರಿ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಸರ್ಕಾರದಿಂದ ಸೂಕ್ತ ಪರಿಹಾರ ದೊರಕಿಸುವುದಾಗಿ ಭರವಸೆ ನೀಡಿದ್ದಾರೆ.

ಕಾಂಗ್ರೆಸ್ ಸರ್ಕಾರದಿಂದ ಶೂನ್ಯ ಸುರಕ್ಷತೆ ಗ್ಯಾರಂಟಿ

ಪಾಂಡವಪುರ, ಮೇ 20– ರಾಜ್ಯದ ಕಾಂಗ್ರೆಸ್ ಸರಕಾರ ಮಹಿಳೆಯರ ರಕ್ಷಣೆ ವಿಚಾರದಲ್ಲಿ ಶೂನ್ಯ ಸುರಕ್ಷತೆ ಗ್ಯಾರಂಟಿ ಕೊಟ್ಟಿದೆ ಎಂದು ಬಿಜೆಪಿ ಜಿಲ್ಲಾ ಮಹಿಳಾಧ್ಯಕ್ಷೆ ಮಂಗಳ ನವೀನ್ ಕುಮಾರ್ ಆರೋಪಿಸಿದರು. ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು ಹೆಣ್ಣುಮಕ್ಕಳು, ಮಹಿಳೆಯರ ಕೊಲೆ ಸುಲಿಗೆಗಳು, ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿವೆ, ಇದರಿಂದ ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ಸರಕಾರ ಸಂಪೂರ್ಣ ವಿಫಲವಾಗಿದೆ ಎಂದು ಕಿಡಿಕಾರಿದರು. ಶಾಲಾ–ಕಾಲೇಜುಗಳಿಗೆ ಹೋಗುವ ಹೆಣ್ಣುಮಕ್ಕಳಿಗೆ ಸೂಕ್ತ ರಕ್ಷಣೆ ಇಲ್ಲದಂತಾಗಿದೆ. ರಾಜ್ಯದಲ್ಲಿ ನೇಹಾ, ಅಂಜಲಿ ಕೊಲೆ ಪ್ರಕರಣಗಳು ರಾಜ್ಯದ ಮಹಿಳಾ ಸಮೂಹವನ್ನು ಬೆಚ್ಚಿಬೀಳಿಸುವಂತೆ ಮಾಡಿದೆ ಎಂದು ಹರಿಹಾಯ್ದರು.

ಮೂರನೇ ಪುಟದಿಂದ

ಪರಿಸ್ಥಿತಿಯೇ ಸರ್ಕಾರದ ಸಾಧನೆ

ನಾಯಕರು ಸಾಕಷ್ಟು ನಿರೀಕ್ಷೆ ಗಳನ್ನು ಹುಟ್ಟು ಹಾಕಿದ್ದರು, ನುಡಿದಂತೆ ನಡೆಯುವ ಸರಕಾರ ಎಂದು ಕಾಂಗ್ರೆಸ್ಸಿ ಗರು ತಮ್ಮ ಬೆನ್ನನ್ನು ತಾವು ತಟ್ಟಿಕೊಳ್ಳುತ್ತಿ ದ್ದಾರೆ. ಹೊಗಳು ಭಟರು, ಜಾಹೀರಾತಿನ ಮೂಲಕ ತಮ್ಮನ್ನು ತಾವು ಹೊಗಳಿಸಿ ಕೊಳ್ಳುವುದು ಮತ್ತು ಅಭಿವೃದ್ಧಿ ಆಗಿದೆ ಎಂದು ಬಿಂಬಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ಗ್ಯಾರಂಟಿಯೇ ಅಭಿವೃದ್ಧಿ ಎಂದು ಬಿಂಬಿಸಲಾಗುತ್ತಿದೆ, ಬರಗಾಲದ ವಿಚಾರ ದಲ್ಲಿ ಸರಕಾರದ ನಡವಳಿಕೆ ಅಕ್ಷಮ್ಯ ಅಪರಾಧ, ಕೇಂದ್ರ ಸರಕಾರದಿಂದ ಅನು ದಾನ ಬಂದಿಲ್ಲ ಎಂದು ಹೋರಾಟ ಮಾಡಿದರು. ರಾಜ್ಯದಲ್ಲಿ 692ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ರಾಜ್ಯ ಸರಕಾರವು ಕೃಷಿ ಸಾಲ, ಬೆಳೆ ನಷ್ಟಕ್ಕೆ ಪರಿಹಾರ ಕೊಡುವಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳದೆ ಇರುವುದು ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು. ಹೈನುಗಾರಿಕೆ ಪ್ರೋತ್ಸಾಹಧನವನ್ನೂ 8–10 ತಿಂಗಳಿನಿಂದ ನೀಡಿಲ್ಲ. ಗ್ಯಾರಂಟಿ ಗಳ ಅನುಷ್ಠಾನದ ಆತುರದಲ್ಲಿ ಅಭಿವೃದ್ಧಿ ಯನ್ನು ಸಂಪೂರ್ಣವಾಗಿ ಮರೆತಿದ್ದಾರೆ. ರಾಜ್ಯ ಸರಕಾರ ಆರ್ಥಿಕ ಸಂಕಷ್ಟದ ಸುಳಿ ಯಲ್ಲಿ ಸಿಲುಕಿ ಹಾಕಿಕೊಂಡಿದೆ ಎಂದರು.

ಕರ್ನಾಟಕದ ಅಭಿವೃದ್ಧಿ ದೇಶಕ್ಕೇ ಮಾದರಿ ಎಂಬಂತೆ ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಒಬ್ಬರು ಕಾಂಗ್ರೆಸ್ ನಾಯಕರು ಅಸಾಧ್ಯವಾದುದನ್ನು ನಾವು ಸಾಧಿಸಿ ತೋರಿಸಿ ದ್ದೇವೆ ಎನ್ನುತ್ತಿದ್ದಾರೆ. ಕರ್ನಾಟಕ ಎಂದರೆ ಕೊಲೆಗಡುಕರ ಸರಕಾರ ಎಂದು ದೇಶದೆಲ್ಲೆಡೆ ಮಾತ್ರವಲ್ಲದೆ ಅಂತರ ರಾಷ್ಟ್ರೀಯ ಮಟ್ಟದಲ್ಲೂ ಮಾತು ಕೇಳಿ ಬರುತ್ತಿದೆ, ಕೊಲೆ ಪ್ರಕರಣ ಹೆಚ್ಚುತ್ತಿರುವ ಸಂದರ್ಭದಲ್ಲಿ ರಾಜ್ಯ ಸರಕಾರ ನಿಷ್ಕ್ರಿಯ ವಾಗಿದೆ, ಲವ್ ಜಿಹಾದ್ ಪ್ರಕರಣದಲ್ಲಿ ಬೇಜವಾಬ್ದಾರಿ ಹೇಳಿಕೆ ಕೊಡುತ್ತಿದೆ. ಕೊಲೆಗಡುಕರಿಗೆ ಶಕ್ತಿ ಕೊಡುವ ಕೆಲಸ ವನ್ನು ರಾಜ್ಯ ಸರಕಾರ ಮಾಡು ತ್ತಿದೆಯೇ ಎಂಬ ಪ್ರಶ್ನೆ ಕೇಳುವಂತಾಗಿದೆ, ಮಹಿಳಾ ಸುರಕ್ಷತೆ ಬಗ್ಗೆ ಯಕ್ಷಪ್ರಶ್ನೆ ಮೂಡಿದೆ, ಅಭಿವೃದ್ಧಿ ಇಲ್ಲ, ರೈತರ ವಿಚಾರದಲ್ಲಿ ಕಾಳಜಿ ಇಲ್ಲದಂತಾಗಿದೆ, ಲವ್ ಜಿಹಾದ್ ಹೆಚ್ಚಳ, ಹಿಂದೂ ಕಾರ್ಯಕರ್ತರ ಹತ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದರೂ ಸರಕಾರ ಬೇಜವಾಬ್ದಾರಿಯಿಂದ ನಡೆದು ಕೊಳ್ಳುತ್ತಿದೆ ಎಂದು ಆರೋಪಿಸಿದರು.

ಪರಿಶಿಷ್ಟ ಜಾತಿ, ಪಂಗಡದವರಿಗೆ ಮೀಸಲಿಟ್ಟ 25 ಸಾವಿರ ಕೋಟಿ ರೂ. ಮೊತ್ತವನ್ನು ಬೇರೆಡೆಗೆ ವರ್ಗಾವಣೆ ಮಾಡಿ ಅನ್ಯಾಯ ಮಾಡಿದ್ದಾರೆ. ಕಿಸಾನ್ ಸಮ್ಮಾನ್ ಯೋಜನೆಯಡಿ ಬಿಜೆಪಿ ರಾಜ್ಯ ಸರಕಾರ ಹೆಚ್ಚುವರಿಯಾಗಿ ಕೊಡುತ್ತಿದ್ದ 4 ಸಾವಿರವನ್ನು ತಡೆ ಹಿಡಿದಿದ್ದಾರೆ ಎಂದ ರಲ್ಲದೆ, ಪ್ರಕೃತಿ ವಿಕೋಪ ನಿಧಿಯಡಿ ಎಷ್ಟು ಹಣ ನೀಡಿದ್ದೀರಿ ಎಂದು ಪ್ರಶ್ನಿಸಿದರು. ಬರಗಾಲದ ಸಂದರ್ಭದಲ್ಲೂ 7 ತಾಸು ವಿದ್ಯುತ್ ಕೊಡದ ನಿಷ್ಕ್ರಿಯ ಸರಕಾರ, ಲೋಕಸಭಾ ಚುನಾವಣೆ ಫಲಿತಾಂಶ ಬಂದ ಬಳಿಕ ಈ ಸರಕಾರದ ಹಣೆಬರಹ ಗೊತ್ತಾಗಲಿದೆ. ಸರಕಾರ ಅಭಿವೃದ್ಧಿ ಕಡೆ ಗಮನ ಕೊಡಬೇಕು, ಕಾನೂನು–ಸುವ್ಯವಸ್ಥೆ ಕಾಪಾಡಬೇಕು ಎಂದು ಆಗ್ರಹಿಸಿದರು.

ಪಿಯುಸಿ ಪರೀಕ್ಷೆ–2ರ ಫಲಿತಾಂಶ

ಸಿಇಒ ಡಾ.ಆನಂದ ಅವರು ಹರ್ಷ ವ್ಯಕ್ತ ಪಡಿಸಿದ್ದು, ಇದು ದ.ಕ. ಜಿಲ್ಲೆಗೆ ಹೆಮ್ಮೆಯ ವಿಷಯ ಎಂದು ಹೇಳಿದ್ದಾರೆ. ಕಳೆದ 125 ಪ್ರೌಢಶಾಲೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ದ.ಕ.ಜಿಲ್ಲೆಯಲ್ಲಿ ಶೇ. ನೂರು ಫಲಿತಾಂಶ ದಾಖಲಿಸಿದರೆ ಈ ಬಾರಿ 270 ಶಾಲೆಗಳು ಈ ಸಾಧನೆ ಮಾಡಿವೆ. ಕಳೆದ ವರ್ಷ 35 ಸರ್ಕಾರಿ ಪ್ರೌಢಶಾಲೆಗಳು ಶೇ.ನೂರು ಫಲಿತಾಂಶ ದಾಖಲಿಸಿದ್ದರೆ, ಈ ಬಾರಿ 84ಕ್ಕೆ ಏರಿಕೆಯಾಗಿದೆ. ಪಿಯುಸಿಯಲ್ಲೂ ಕಳೆದ ವರ್ಷ 37 ಕಾಲೇಜುಗಳು ಶೇ.ನೂರು ಫಲಿತಾಂಶ ದಾಖಲಿಸಿದ್ದರೆ, ಈ ಬಾರಿ 59ಕ್ಕೆ ಏರಿಕೆಯಾಗಿದೆ. ಕಳೆದ ಬಾರಿ 9 ವಿದ್ಯಾರ್ಥಿಗಳು ರ್‍ಯಾಂಕ್‌ಗಳಿಸಿದ್ದರೆ, ಈ ಬಾರಿ 25 ವಿದ್ಯಾರ್ಥಿಗಳು ರ್‍ಯಾಂಕ್ ಗಳಿಸಿದ್ದಾರೆ.

ನೇಮಕಾತಿಯಲ್ಲಿ ಮೀಸಲಾತಿಗೆ ಆದೇಶ

ಸಂಪುಟ ಸಭೆಯಲ್ಲಿ ಹೊರಗುತ್ತಿಗೆಯಲ್ಲೂ ಮೀಸಲಾತಿ ನೀತಿಯನ್ನು ಜಾರಿಗೊಳಿಸುವ ಪ್ರಸ್ತಾವನೆಗೆ ಅಂಗೀಕಾರ ನೀಡಲಾಗಿತ್ತು. ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮವನ್ನು ಹೊರಗುತ್ತಿಗೆ ನೌಕರ ನೇಮಕಾತಿಗೂ ಕಡ್ಡಾಯವಾಗಿ ಅನ್ವಯಿಸಬೇಕು. ಅದಕ್ಕೆ ಕೆಲವು ಸೂಚನೆಗಳನ್ನು ಪಾಲನೆ ಮಾಡಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೋಮವಾರ ಹೊರಡಿಸಿದೆ ಸುತ್ತೋಲೆಯಲ್ಲಿ ನಿರ್ದೇಶನ ನೀಡಿದೆ. ಈ ಸೂಚನೆಗಳು ಸರ್ಕಾರದ ಎಲ್ಲ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮ, ಮಂಡಳಿಗಳು, ವಿಶ್ವವಿದ್ಯಾಲಯಗಳಿಗೆ ಅನ್ವಯವಾಗಲಿದೆ ಎಂದು ತಿಳಿಸಲಾಗಿದೆ.

ಆದೇಶದಲ್ಲಿ ಏನಿದೆ?: ಹೊರಗುತ್ತಿಗೆ ಸಿಬ್ಬಂದಿ ಒದಗಿಸುವ ಏಜೆನ್ಸಿ ನೀಡುವ ಸಿಬ್ಬಂದಿಯ ಜಾತಿ ಪ್ರಮಾಣಪತ್ರ ಮತ್ತು ಇತರೆ ದಾಖಲೆಗಳನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಪರಿಶೀಲಿಸಿಯೇ ಕಾರ್ಯಾದೇಶ ನೀಡಲು ಕ್ರಮ ವಹಿಸಬೇಕು. ಯಾವುದೇ ಇಲಾಖೆಯಲ್ಲಿ 20 ಅಥವಾ ಅದಕ್ಕಿಂತ ಅಧಿಕ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಮಾತ್ರ ಮೀಸಲಾತಿ ನೀತಿ ಜಾರಿ, ಅಭ್ಯರ್ಥಿಯ ಕನಿಷ್ಠ ವಯೋಮಿತಿ 18 ವರ್ಷ ಮತ್ತು ಗರಿಷ್ಠ ವಯೋಮಿತಿ 60 ವರ್ಷ ಆಗಿರುತ್ತದೆ. ಸಾಮಾಜಿಕ ನ್ಯಾಯ ಮತ್ತು ಸಮಾನ ಉದ್ಯೋಗಾವಕಾಶಗಳನ್ನು ಒದಗಿಸುವ ಉದ್ದೇಶದಿಂದ ಜಾರಿಗೆ ತರಲಾಗುವ ಈ ನಿಯಮಗಳಡಿ ನೇಮಕಾತಿ ಆದವರನ್ನು ಕಾಯಂಗೆ ಪರಿಗಣಿಸುವಂತಿಲ್ಲ.

ನಂ.ಗೂಡು ತಾಲೂಕು ತಗಡೂರು ಗ್ರಾಮದಲ್ಲಿ

ಕಾಲರಾ ಸೋಂಕು ದೃಢಪಟ್ಟಿದ್ದ ಮೂವರು ಗುಣಮುಖ

ಮೈಸೂರು,ಮೇ 20(ಪಿಎಂ)– ನಂಜನಗೂಡು ತಾಲೂಕಿನ ತಗಡೂರು ಗ್ರಾಮದಲ್ಲಿ ಕಾಲರಾ ಸೋಂಕು ಪತ್ತೆಯಾಗಿದ್ದು, ಗ್ರಾಮದಲ್ಲಿ ಸೋಂಕು ಹರಡುವ ಆತಂಕದ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ.

ಸೋಂಕು ದೃಢಪಟ್ಟಿದ್ದ ಗ್ರಾಮದ ಮೂವರು ವಯಸ್ಕರು ಗುಣಮುಖರಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಮಾಹಿತಿಯಂತೆ ಕಳೆದ ಐದು ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಕಾಲರಾ ಸೋಂಕು ಪತ್ತೆಯಾಗಿರಲಿಲ್ಲ. ಆದರೆ ಕಳೆದ ಏಪ್ರಿಲ್‌ನಲ್ಲಿ ಇಬ್ಬರು ಮಕ್ಕಳಲ್ಲಿ ಕಾಲರಾ ದೃಢಪಟ್ಟಿತ್ತು.

ಮೈಸೂರಿನ ಗಾಯಿತ್ರಿಪುರಂನ ಒಬ್ಬ ಬಾಲಕಿ ಹಾಗೂ ಮೈಸೂರು ತಾಲೂಕಿನ ಹಂಚ್ಯಾ ಗ್ರಾಮದ ಒಬ್ಬ ಬಾಲಕನಿಗೆ ಸೋಂಕು ದೃಢಪಟ್ಟು ಸೂಕ್ತ ಚಿಕಿತ್ಸೆ ದೊರೆತು ಆ ಇಬ್ಬರೂ ಗುಣಮುಖರಾದರು. ಇದೀಗ ತಗಡೂರು ಗ್ರಾಮದಲ್ಲೂ ಮೂವರು ವಯಸ್ಕರು ಸೋಂಕಿಗೆ ತುತ್ತಾಗಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಸರ್ವೇಕ್ಷಣಾಧಿಕಾರಿ (ಡಿಎಸ್‌ಓ) ಡಾ.ಮಹದೇವ ಪ್ರಸಾದ್, ತಗಡೂರಿನಲ್ಲಿ ವಾಂತಿ ಸೇರಿದಂತೆ ಇನ್ನಿತರ ಅನಾರೋಗ್ಯಕ್ಕಾಗಿ ಹಲವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾಲರಾ ಸೋಂಕು ಮೂವರಲ್ಲಿ ಮಾತ್ರ ದೃಢಪಟ್ಟಿತ್ತು. ಆ ಮೂವರು ಈಗ ಗುಣಮುಖರಾಗಿದ್ದಾರೆ. ಮೇ 10ರಿಂದ ಈ ಪ್ರಕರಣಗಳು ಪತ್ತೆಯಾಗಿದ್ದವು. ಮುನ್ನೆಚ್ಚರಿಕೆ ಕ್ರಮವಾಗಿ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ 24 ಗಂಟೆ ಕಾಲ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಇಲ್ಲಿ ಹೆಚ್ಚುವರಿ ವೈದ್ಯರು, ಶುಶ್ರೂಷಕರನ್ನು ನಿಯೋಜಿಸಲಾಗಿದೆ. ಗ್ರಾಮದಲ್ಲಿ 7 ಸಾವಿರ ಜನಸಂಖ್ಯೆ ಇದೆ. ಇಲ್ಲಿರುವ 16 ಬೋರ್‌ವೆಲ್‌ಗಳ ಪೈಕಿ ಕಲುಷಿತ ನೀರಿನ ಮೂಲಕ ಸೋಂಕು ಹರಡಲು ಕಾರಣ ಎಂದು ಶಂಕಿಸಲಾಗಿರುವ ನಾಲ್ಕು ಬೋರ್‌ವೆಲ್‌ಗಳನ್ನು ಸದ್ಯ ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿದರು.

ಗ್ರಾಮಕ್ಕೆ ಜಿಪಂ ಸಿಇಓ ಭೇಟಿ: ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯಿತ್ರಿ ಸೋಮವಾರ ತಗಡೂರು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಸಾಂಕ್ರಾಮಿಕ ರೋಗ ಹರಡದಂತೆ ಮುನ್ನೆಚ್ಚರಿಕಾ ಕ್ರಮ ವಹಿಸುವ ಬಗ್ಗೆ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಆರೋಗ್ಯ ಇಲಾಖೆ ಅಧಿಕಾರಿಗಳು, ತಾಲೂಕು ಪಂಚಾಯಿತಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿಯೊಂದಿಗೆ ಸಭೆ ನಡೆಸಿದರು.

ಎಲ್ಲಾ ವಾರ್ಡ್‌ಗಳಲ್ಲೂ ನೀರಿನ ಟ್ಯಾಂಕ್, ಬೋರ್‌ವೆಲ್‌ಗಳ ಸ್ವಚ್ಛತೆ ಹಾಗೂ ಶುದ್ಧತೆಗಾಗಿ ನೀರಿನ ಪರೀಕ್ಷೆಯನ್ನು ಕಾಲ ಕಾಲಕ್ಕೆ ಮಾಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದರು. ಅಲ್ಲದೆ, ಕುಡಿಯುವ ನೀರು ಕಲುಷಿತಗೊಂಡಿದ್ದರೂ ಇನ್ನೂ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳದ ಕಾರಣ ಪಿಡಿಓಗೆ ನೋಟೀಸ್ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರಲ್ಲದೆ, ನಾಳೆ ಸಂಜೆಯೊಳಗೆ ಎಲ್ಲಾ ಚರಂಡಿಗಳನ್ನು ಸ್ವಚ್ಛಗೊಳಿಸದಿದ್ದಲ್ಲಿ ಪಿಡಿಓ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡುವುದಾಗಿ ಎಚ್ಚರಿಕೆ ನೀಡಿದರು. ಪ್ರತಿಯೊಬ್ಬ ನೀರುಗಂಟಿಗಳಿಂದ ನೀರು ಬಿಡುವ ಅವಧಿ, ಎಷ್ಟು ಮನೆಗಳಿವೆ ಎಂಬ ಮಾಹಿತಿ ಸಂಗ್ರಹಿಸಿದ ಅವರು, ನೀರಿನ ಶುದ್ಧತೆ ಬಗ್ಗೆ ಈ ಮುಂಚೆ ತರಬೇತಿ ನೀಡಿದ್ದು, ಅದರಂತೆ ನೀರಿನ ಶುದ್ಧತೆ ಪರೀಕ್ಷಿಸಿ ನೀರು ಬಿಡುವಂತೆ ಸೂಚನೆ ನೀಡಿದರು.

ಗ್ರಾಮಗಳಲ್ಲಿ ಜನತೆಗೆ ಮೂಲಸೌಕರ್ಯ ಒದಗಿಸಲು ಮೊದಲ ಆದ್ಯತೆ ನೀಡಬೇಕು. ಬಳಕೆಯಲ್ಲಿಲ್ಲದ ಓವರ್‌ಹೆಡ್ ಟ್ಯಾಂಕ್ ಅನ್ನು ಶೀಘ್ರವೇ ದುರಸ್ತಿಗೊಳಸಿ ಬಳಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಜೆಜೆಎಂ ಅಡಿಯಲ್ಲಿ ಶೀಘ್ರವೇ ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದರು.

ಆಶಾ ಕಾರ್ಯಕರ್ತೆಯರು ಪ್ರತಿದಿನ ಮನೆ ಮನೆಗೆ ಭೇಟಿ ನೀಡಿ ಸಾಂಕ್ರಾಮಿಕ ರೋಗ ಹರಡದಂತೆ ಮುನ್ನೆಚ್ಚರಿಕಾ ಕ್ರಮದ ಬಗ್ಗೆ ಅರಿವು ಮೂಡಿಸಬೇಕು. ಕುಡಿಯುವ ನೀರನ್ನು ಕುದಿಸಿ ಆರಿಸಿ ಬಳಸುವಂತೆ ಜಾಗೃತಿ ಮೂಡಿಸಬೇಕು. ಜಾಗೃತಿ ಕಾರ್ಯಕ್ರಮಕ್ಕಾಗಿ ತಾಲೂಕು ಮಟ್ಟದಲ್ಲಿ ಸಮಿತಿ ರಚಿಸಿ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಕೃಷಿ ಸಖಿ, ಪಶು ಸಖಿ, ಆರೋಗ್ಯ ಇಲಾಖೆ ಐಇಸಿ ಹಾಗೂ ತಾಲೂಕು ಪಂಚಾಯಿತಿ ಐಇಸಿಗಳಿಂದ ಅರಿವು ಮೂಡಿಸುವುದು. ಸಣ್ಣ ಮಕ್ಕಳು, ಬಾಣಂತಿಯರು, ಗರ್ಭಿಣಿಯರು ಹಾಗೂ ವಯಸ್ಸಾದವರಿಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದು ನಿರ್ದೇಶನ ನೀಡಿದರು.

ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣಕ್ಕಾಗಿ ವಾರದೊಳಗೆ ಅಗತ್ಯ ಕ್ರಮ ವಹಿಸುವಂತೆ ಸೂಚನೆ ನೀಡಿದರಲ್ಲದೆ, ಬಳಿಕ ಗ್ರಾಮದಲ್ಲಿ ಕಲುಷಿತಗೊಂಡಿದ್ದ ಕುಡಿಯುವ ನೀರು ಸರಬರಾಜು ಮಾಡುವ ಬೋರ್‌ವೆಲ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ತಗಡೂರು ಸಮುದಾಯ ಆರೋಗ್ಯ ಕೇಂದಕ್ಕೆ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸಿದರು.

ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ರಂಜಿತ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ, ನಂಜನಗೂಡು ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಲೂಕು ಆರೋಗ್ಯಾಧಿಕಾರಿ ಡಾ.ಈಶ್ವರ್, ನರೇಗಾ ಸಹಾಯಕ ನಿರ್ದೇಶಕ ಶಿವಕುಮಾರ್ ಸೇರಿ ಹಲವರು ಹಾಜರಿದ್ದರು.

ಗ್ರಾಮಕ್ಕೆ ಜಿಪಂ ಸಿಇಓ ಭೇಟಿ



ತಗಡೂರು ಗ್ರಾಮಕ್ಕೆ ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಸೋಮವಾರ ಭೇಟಿ ನೀಡಿ, ಪರಿಶೀಲಿಸಿದರು.

ಕೆ.ಸಾಲುಂಡಿಯಲ್ಲಿ 6 ಮಂದಿಗೆ ವಾಂತಿ–ಭೇದಿ; ಗ್ರಾಮಕ್ಕೆ ಡಿಸಿ ಭೇಟಿ




ಮೈಸೂರು,ಮೇ 20(ಪಿಎಂ)– ಜಯಪುರ ಹೋಬಳಿಯ ಕೆ.ಸಾಲುಂಡಿ ಗ್ರಾಮದಲ್ಲಿ 6 ಮಂದಿ ವಯಸ್ಕರಲ್ಲಿ ವಾಂತಿ ಮತ್ತು ಭೇದಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸೋಮವಾರ ರಾತ್ರಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಗ್ರಾಮಕ್ಕೆ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಕುಡಿಯುವ ನೀರಿನ ಬಗ್ಗೆ ಜನರು ಹೆಚ್ಚಿನ ಕಾಳಜಿ ವಹಿಸಬೇಕು. ಜೊತೆಗೆ ಸುತ್ತಲಿನ ಪರಿಸರವನ್ನು ಸ್ವಚ್ಛತೆಯಿಂದಿಟ್ಟು ಕೊಳ್ಳಬೇಕು. ಸಾಂಕ್ರಾಮಿಕ ರೋಗ ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಸಾರ್ವಜನಿಕರಿಗೆ ತಿಳಿ ಹೇಳಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಸರ್ವೇಕ್ಷಣಾಧಿಕಾರಿ (ಡಿಎಸ್‌ಓ) ಡಾ.ಮಹದೇವಪ್ರಸಾದ್, ಕೆ.ಸಾಲುಂಡಿ ಗ್ರಾಮದಲ್ಲಿ 6 ಮಂದಿ ವಯಸ್ಕರದಲ್ಲಿ ವಾಂತಿ ಭೇದಿ ಕಾಣಿಸಿ ಕೊಂಡಿದೆ. ಈ ಸಂಬಂಧ ಪ್ರಯೋಗಾಲಯದ ವರದಿ ಬಂದ ಬಳಿಕ ಯಾವ ರೀತಿಯ ಸೋಂಕು ಎಂದು ಖಚಿತವಾಗಿ ಹೇಳಬಹುದು. ಹಾಗಾಗಿ ಈ ಪ್ರಕರಣಗಳನ್ನು ಈಗಲೇ ಕಾಲರಾ ಎಂದು ಹೇಳಲು ಬರುವುದಿಲ್ಲ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಡಿಎಸ್‌ಓ ಡಾ.ಮಹದೇವ ಪ್ರಸಾದ್, ತಾಲೂಕು ಆರೋಗ್ಯಾಧಿಕಾರಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ಹೆಲಿಕಾಪ್ಟರ್ ಪತನ: ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಸೇರಿ ಹಲವರು ಸಜೀವ ದಹನ



ದುಬೈ: ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಮತ್ತು ಇತರರನ್ನು ಹೊತ್ತೊಯ್ಯುತ್ತಿದ್ದ ಹೆಲಿಕಾಪ್ಟರ್ ಪತನವಾಗಿದ್ದು ಅದರಲ್ಲಿದ್ದವರು ಯಾರೂ ಬದುಕುಳಿದಿಲ್ಲ ಎಂದು ಸರ್ಕಾರಿ ಮಾಧ್ಯಮ ದೃಢಪಡಿಸಿದೆ.

ಹೆಲಿಕಾಪ್ಟರ್ ನಿನ್ನೆ ಪತನಗೊಂಡಿತ್ತು ಅದರಲ್ಲಿ ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ, ವಿದೇಶಾಂಗ ಸಚಿವ ಹುಸೇನ್ ಅಮೀರ್ ಅಬ್ದುಲ್ಲಾಹಿಯಾನ್, ಪೂರ್ವ ಅಜೆರ್ಬೈಜಾನ್ ಪ್ರಾಂತ್ಯದ ಗವರ್ನರ್ ಮಾಲೆಕ್ ರಹಮತಿ, ತಬ್ರಿಜ್‌ನ ಇಮಾಮ್ ಮೊಹಮ್ಮದ್ ಅಲಿ ಅಲೆಹಶೆಮ್, ಪೈಲಟ್, ಕೋ ಪೈಲಟ್, ಸಿಬ್ಬಂದಿ ಮುಖ್ಯಸ್ಥ, ಭದ್ರತಾ ಮುಖ್ಯಸ್ಥ ಹಾಗೂ ಗನ್‌ಮ್ಯಾನ್‌ಗಳು ಪ್ರಯಾಣಿಸುತ್ತಿದ್ದರು, ಎಲ್ಲರೂ ಸಜೀವ ದಹನವಾಗಿದ್ದಾರೆ ಎಂದು ತಿಳಿದುಬಂದಿದೆ.

ಇಬ್ರಾಹಿಂ ರೈಸಿ ನೆರೆಯ ರಾಷ್ಟ್ರವಾದ ಅಝರ್ಬೈಜಾನ್‌ನಲ್ಲಿ ಆ ದೇಶದ ಅಧ್ಯಕ್ಷ ಇಲ್ಹಾಮ್ ಅಲಿಯೆವ್ ಜತೆ ಅಣೆಕಟ್ಟು ಉದ್ಘಾಟನೆ ಕಾರ್ಯಕ್ರಮಕ್ಕೆ ತೆರಳಿದ್ದರು. ರೈಸಿ ಅವರಿದ್ದ ಹೆಲಿಕಾಪ್ಟರ್‌ನೊಂದಿಗೆ ಪ್ರಯಾಣಿಸುತ್ತಿದ್ದ ಇತರೆ ಎರಡು ಬೆಂಗಾವಲು ಹೆಲಿಕಾಪ್ಟರ್‌ಗಳು ಸುರಕ್ಷಿತವಾಗಿ ಹಿಂದಿರುಗಿವೆ. ಬೆಂಗಾವಲು ಹೆಲಿಕಾಪ್ಟರ್‌ಗಳಲ್ಲಿ ಇಂಧನ ಸಚಿವ ಅಲಿ ಅಕ್ಬರ್ ಮೆಹ್ರಾಬಿಯಾನ್ ಹಾಗೂ ವಸತಿ ಸಚಿವ ಮೆಹ್ರದಾದ್ ಇದ್ದು ಅವರು ಸುರಕ್ಷಿತವಾಗಿ ಮರಳಿದ್ದಾರೆ.

ಮೋದಿ ಸಂತಾಪ: ಹೆಲಿಕಾಪ್ಟರ್ ಅಪಘಾತದಲ್ಲಿ ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಅವರು ಸಾವಿಗೀಡಾಗಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ, ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.


ಇಂದು ಭಾರತದಾದ್ಯಂತ ಶೋಕಾಚರಣೆ: ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟ ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಅವರ ಗೌರವಾರ್ಥ ಮಂಗಳವಾರ ಭಾರತದಾದ್ಯಂತ ಒಂದು ದಿನದ ಶೋಕಾಚರಣೆ ಆಚರಿಸಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಶೋಕಾಚರಣೆಯ ದಿನದಂದು, ರಾಷ್ಟ್ರಧ್ವಜವನ್ನು ನಿಯಮಿತವಾಗಿ ಹಾರಿಸುವ ಎಲ್ಲಾ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಭಾರತದಾದ್ಯಂತ ಅರ್ಧಕ್ಕೆ ಹಾರಿಸಲಾಗುತ್ತದೆ ಮತ್ತು ಯಾವುದೇ ಅಧಿಕೃತ ಕಾರ್ಯಕ್ರಮ ಇರುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 21 ಮೇ 2024

ಮೇ 23ರಂದು ಬುದ್ಧ ಜಯಂತಿ

ಮೈಸೂರು, ಮೇ 20– ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣ ದಲ್ಲಿರುವ ಬುದ್ಧವಿಹಾರ ದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ ಮೇ 23ರ ಗುರುವಾರ ಸಂಜೆ 6 ಗಂಟೆಗೆ 2568ನೇ ಬುದ್ಧ ಜಯಂತಿ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ.



ಕಾರ್ಯಕ್ರಮದ ಸಮ್ಮುಖವನ್ನು ಕೊಳ್ಳೇ ಗಾಲ ತಾಲೂಕಿನ ಚೆನ್ನಲಿಂಗಾನಹಳ್ಳಿಯ ಜೇತವನ ಬುದ್ಧವಿಹಾರದ ಮನೋ ರಕ್ಷಿತ ಭಂತೇಜಿ ವಹಿಸುವರು. ಸೋದೆ ಭಂತೇಜಿಯವರು ಬುದ್ಧವಂದನೆಯನ್ನು ನೆರವೇರಿಸಿಕೊಡುವರು. ನಂತರ ಭಗ ವಾನ್ ಬುದ್ಧರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಾಗುವುದು. ಮುಖ್ಯ ಅತಿಥಿಗಳಾಗಿ ವಿಚಾರವಾದಿ ಹಾಗೂ ವಕೀಲ ಎನ್.ಬಿ. ಶಿವರುದ್ರಪ್ಪ ಭಾಗವಹಿಸುವರು. ಮೈವಿವಿ ಸಿಂಡಿಕೇಟ್ ಮಾಜಿ ಸದ ಸ್ಯರು ಹಾಗೂ ಕರ್ನಾಟಕ ಬುದ್ಧಧಮ್ಮ ಸಮಿತಿ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ ಅಧ್ಯಕ್ಷತೆ ವಹಿಸುವರು. ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ ಪ್ರಾಸ್ತಾವಿಕ ಮಾತುಗಳನ್ನಾ ಡುವರು. ಸಹ ಕಾರ್ಯದರ್ಶಿ ಎಚ್.ಶಿವ ರಾಜ್, ನಿವೃತ್ತ ಇಂಜಿನಿಯರ್ ಆರ್.ನಟ ರಾಜು, ಸಾವಕಯ್ಯ, ಸಮಿತಿ ಪದಾಧಿ ಕಾರಿಗಳು, ದಲಿತ ಸಂಘಟನೆಗಳ ಮುಖಂ ಡರು, ಸಂಶೋಧಕರು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹಾ ದೇವಪ್ಪ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯಗಳು...



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆದ ಬಿಜೆಪಿ ಹಿರಿಯ ಮುಖಂಡ ಯಶಸ್ವಿ ಸೋಮಶೇಖರ್ ಅವರಿಗೆ ಹುಟ್ಟುಹಬ್ಬದ ಪ್ರಯುಕ್ತ ಶುಭ ಕೋರಲಾಯಿತು. ಚಾಮುಂಡೇಶ್ವರಿ ನಗರದ ಮಂಡಲದ ಅಧ್ಯಕ್ಷ ರಾಕೇಶ್ ಭಟ್, ಎಸ್‌ಸಿ ಮೋರ್ಚಾ ನಗರ ಉಪಾಧ್ಯಕ್ಷ ಎನ್.ಪ್ರತಾಪ್, ಮಂಡಲದ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಚಂದನ್‌ಗೌಡ, ಯುವ ಮುಖಂಡ ಯೋಗೇಶ್ ಇದ್ದಾರೆ.

ಮೇ 26, ನಿರಂತರ ಕಲೆಮನೆ ಉತ್ಸವ



ಮೈಸೂರು, ಮೇ 20– ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಮೇ 26ರಂದು ಮಧ್ಯಾಹ್ನ 2.30ಕ್ಕೆ 39ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವವನ್ನು ಕಲೆ ಮನೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಶ್ರೀ ಜಯ ಚಾಮರಾಜ ಅರಸು ಶಿಕ್ಷಣ ಸಂಸ್ಥೆ ಉಪಾಧ್ಯಕ್ಷೆ ಶ್ರೀಮತಿ ಭಾರತಿ ಶ್ರೀಧರ್ ರಾಜ್ ಅರಸ್, ಸಹಾಯಕ ಪ್ರಾಧ್ಯಾಪಕಿ ಡಾ.ಬಿ.ನಿರ್ಮಲಾ ಭಾಗವಹಿಸಲಿದ್ದಾರೆ.

ನೃತ್ಯ ಕಾರ್ಯಕ್ರಮದಲ್ಲಿ ಶ್ರೀ ಉಮಾ ಮಹೇಶ್ವರ ನೃತ್ಯ ಕಲಾ ಕ್ಷೇತ್ರದ ನಿರ್ದೇ ಶಕಿ ಗುರು ವಿದುಷಿ ಶ್ರೀಮತಿ ಟಿ.ಎಸ್. ಶ್ರೀಲಕ್ಷ್ಮಿ ಕುಮಾರ್ ಮತ್ತು ಅವರ ಶಿಷ್ಯರು; ಬೆಂಗಳೂರಿನ ಶ್ರೀ ಸಾಯುಜ್ಯ ನೃತ್ಯ ಶಾಲೆ ವಿದುಷಿ ಶ್ರೀಮತಿ ಸೌಮ್ಯ ಎಸ್ ಶರ್ಮಾ ಮತ್ತು ಅವರ ಶಿಷ್ಯರು; ನಂಜನಗೂಡು ನಟರಾಜ ನೃತ್ಯ ಶಾಲೆ ನಿರ್ದೇಶಕರಾದ ವಿದುಷಿ ಶ್ರೀಮತಿ ರಮ್ಯ ಎಸ್ ರಾಘ ವೇಂದ್ರ ಮತ್ತು ಅವರ ಶಿಷ್ಯರು; ಪುತ್ತೂರು ಶ್ರೀ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯ ಆರ್ಟಿಸ್ಟಿಕ್ ನಿರ್ದೇಶಕರಾದ ಗುರು ಕಲಾ ದೀಪ ವಿದ್ವಾನ್ ದೀಪಕ್‌ಕುಮಾರ್ ಮತ್ತು ವಿದುಷಿ ಪ್ರೀತಿಕಲಾ; ಮೈಸೂರಿನ ಮನು ವಿದ್ಯಾ ಸಾಂಸ್ಕೃತಿಕ ಫೌಂಡೇಶನ್ ನಿರ್ದೇ ಶಕರಾದ ವಿದುಷಿ ನೇತ್ರ.ಎಸ್ ಮತ್ತು ಅವರ ಶಿಷ್ಯರು ಮತ್ತು ಬೆಂಗಳೂರಿನ ಗುರು ವಿದುಷಿ ಶ್ರೀಮತಿ ಬೈಜಾ ರಾಣಿ ಲಿಜಿನ್ ಅವರು ಪ್ರದರ್ಶನ ನೀಡಲಿದ್ದಾರೆ.

ಮಹಾಜನ ಕಾಲೇಜಿಗೆ ದ್ವಿತೀಯ ಸಮಗ್ರ ಪ್ರಶಸ್ತಿ



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿ ಸಿದ್ದ, ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಪುರುಷರ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು 2023–24ನೇ ಸಾಲಿನ ದ್ವಿತೀಯ ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ವೇದಿಕೆಯ ಮೇಲೆ ನಿಂತಿರುವವರು): ಡಾ. ರವಿಕುಮಾರ್, ಕೆಎಎಸ್ ಅಧಿಕಾರಿಗಳು, ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ, ಡಾ. ಬಿ.ಆರ್.ಜಯಕುಮಾರಿ, ಪ್ರಾಂಶುಪಾಲರು, ಡಾ.ಎಸ್.ಆರ್.ರಮೇಶ್, ಸಿಇಒ, ಡಾ.ಭಾಸ್ಕರ್ ಹೆಚ್.ಎನ್. ಮತ್ತು ಪಿ.ಎಸ್.ಮಧುಸೂಧನ, ದೈಹಿಕ ಶಿಕ್ಷಣ ನಿರ್ದೇಶಕರು, ಸೋಮಶೇಖರ್ ಹಾಗೂ ಕ್ರೀಡಾ ವಿದ್ಯಾರ್ಥಿಗಳನ್ನು ಕಾಣಬಹುದು.

ನಿಧನ



ಮುಸ್ತಾಕ್ ಅಹಮದ್

ಮೈಸೂರು, ಮೇ 20– ಮೈಸೂರು ಮಹಾನಗರ ಪಾಲಿಕೆ ನಿವೃತ್ತ ಸಹಾಯಕ ಆಯುಕ್ತರು ಮತ್ತು ಸಿದ್ಧಿಖ್‌ನಗರ ನಿವಾಸಿ ಮುಸ್ತಾಕ್ ಅಹಮದ್ ಸೋಮವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಎಂಸಿಸಿ ನಿವೃತ್ತ ಕಮಿಷನರ್ ಎ.ಬಿ.ಅದೂರ್ ಇಬ್ರಾಹಿಂ; ಕೆನರಾ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಎಂ.ಅಜೀವ್ ಅಹಮದ್ ಖಾನ್; ನಿವೃತ್ತ ದಕ್ಷಿಣ ರೈಲ್ವೆ & ಇಸ್ಲಾಮಿಯ ಕ್ಯಾಪ್ ಮಾರ್ಟ್ ಲೇಟ್ ಎಂ.ಅಬ್ದುಲ್ ಅಜೀಜ್ ಖಾನ್, ಡಿಸಿಸಿ ಅಲ್ಪಸಂಖ್ಯಾತರ ವಿಭಾಗದ ಮಾಜಿ ವಕ್ತಾರ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಮೆ॥ ನ್ಯಾಚುರಲ್ ಕೇಟರರ್ಸ್ ಹಬೀಬ್ ಉಲ್ಲಾ ಷರೀಫ್; ಮಾಜಿ ಕಾರ್ಪೋರೇಟರ್, ಅಕ್ಮಲ್ ಪಾಷ; ಸಿದ್ದಿಖಿ ನಗರದ ನಿವಾಸಿಗಳು, ನಗರಪಾಲಿಕೆಯ ನಿವೃತ್ತ ಅಧಿಕಾರಿಗಳು & ಸಿಬ್ಬಂದಿ ವರ್ಗ; ಅಖೀಲ್ ಅಹಮದ್ ಖಾನ್, ಶಮದ್ ಅಹಮದ್ ಖಾನ್ ಅವರು ಅಲ್‌ಹಾಜ್ ಮುಸ್ತಾಕ್ ಅಹಮದ್ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

ಕರ್ನಾಟಕ ಸೇರಿದಂತೆ ಮೂರು ರಾಜ್ಯಗಳಲ್ಲಿ ಏಕಕಾಲದಲ್ಲಿ ಮೇ 23ರಿಂದ 25ರವರೆಗೆ ಆನೆಗಳ ಗಣತಿ

- ಇದೇ ಮೊದಲ ಬಾರಿಗೆ ಆ್ಯಪ್ ಬಳಸಿ ಗಣತಿ ಅಂಕಿ-ಅಂಶ ದಾಖಲು
- ನಿಖರ ಮಾಹಿತಿ ಕ್ರೋಢಿಕರಿಸಲು ಕ್ರಮ
- ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶ ಸೇರಿದಂತೆ ವನ್ಯಧಾಮಗಳಲ್ಲೂ ಗಣತಿ





ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆನೆ ಗಣತಿಗೆ ಸಿಬ್ಬಂದಿಗಳು ಪರಿಶೀಲಿಸುತ್ತಿರುವುದು.

ಮೈಸೂರು,ಮೇ 20(ಎಂಟಿವೈ)– ಆನೆಗಳ ಸಂಖ್ಯೆಯ ನಿಖರ ಅಂಕಿ ಅಂಶ ವನ್ನು ದಾಖಲೀಕರಿಸುವ ನಿಟ್ಟಿನಲ್ಲಿ ಕರ್ನಾ ಟಕ, ಕೇರಳ, ತಮಿಳುನಾಡಿನಲ್ಲಿ ಮೇ 23ರಿಂದ 25ರವರೆಗೆ ಏಕಕಾಲದಲ್ಲಿ 3 ದಿನಗಳ ಆನೆಗಳ ಗಣತಿ ಕಾರ್ಯ ನಡೆ ಸುತ್ತಿದ್ದು, ಇದೇ ಮೊದಲ ಬಾರಿಗೆ ಮೊಬೈಲ್ ಆ್ಯಪ್ ಬಳಸಿ ಗಣತಿ ನಡೆಸಲಾಗುತ್ತಿದೆ.

ಗಡಿಭಾಗದಲ್ಲಿ ಹೆಚ್ಚುತ್ತಿರುವ ಮಾನವ –ವನ್ಯಜೀವಿ ಸಂಘರ್ಷ ತಡೆಗಾಗಿ ಕೆಲ ತಿಂಗಳ ಹಿಂದೆ ರಚಿಸಲಾದ ಮೂರು ರಾಜ್ಯಗಳ ಅಧಿಕಾರಿಗಳನ್ನೊಳಗೊಂಡ ಸಮ ನ್ವಯ ಸಮಿತಿಯು ಆನೆ ಗಣತಿಯಲ್ಲೂ ಸಮನ್ವಯತೆ ಕಾಯ್ದುಕೊಳ್ಳಲು ನಿರ್ಧರಿ ಸಿದ್ದು, ಏಕಕಾಲದಲ್ಲಿ ಒಂದೇ ಮಾದರಿ ಯಲ್ಲಿ ಗಣತಿ ಕಾರ್ಯ ನಡೆಸಲು ಸಮ್ಮ ತಿಸಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ, ಕೇರಳ, ತಮಿಳುನಾಡಿನ ಅರಣ್ಯದಲ್ಲಿ ಮೇ 23, 24 ಹಾಗೂ 25ರಂದು ಮೂರು ದಿನ ನಿಯಮಾನುಸಾರ ಗಣತಿ ಪ್ರಕ್ರಿಯೆ ನಡೆಸಿ, ಗಮನಿಸಿದ ಆನೆಗಳ ಹಿಂಡು, ಸಂಖ್ಯೆ ಸೇರಿದಂತೆ ಇನ್ನಿತರ ಅಂಶಗಳನ್ನು ಆ್ಯಪ್ ನಲ್ಲಿ ದಾಖಲಿಸಲಿದ್ದಾರೆ. ಅದಕ್ಕಾಗಿ 3 ರಾಜ್ಯಗಳ ಅರಣ್ಯ ಇಲಾಖೆ ಸಿದ್ಧತೆ ಮಾಡಿ ಕೊಂಡಿದ್ದು, ಆಯಾ ಹುಲಿ ಸಂರಕ್ಷಿತ ಪ್ರದೇಶ, ವನ್ಯಧಾಮ, ಸಾಮಾಜಿಕ ಅರಣ್ಯ ಸೇರಿದಂತೆ ಕಾಡಾನೆ ಬೀಡು ಬಿಟ್ಟಿರುವ ಸ್ಥಳಗಳಲ್ಲಿ ಗಣತಿ ನಡೆಸಲು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಆ ಸಿಬ್ಬಂದಿಗೆ ಆನ್ ಲೈನ್ ಹಾಗೂ ಆಫ್‌ಲೈನ್ ಮೂಲಕ ತರ ಬೇತಿ ನೀಡಲಾಗಿದ್ದು, ಮೇ 22ರಂದು ಅಂತಿಮ ಹಂತದ ತರಬೇತಿ ನೀಡಿ ಗಣತಿ ಕಾರ್ಯಕ್ಕೆ ಅಣಿಗೊಳಿಸಲಾಗುತ್ತದೆ.

ಮೂರು ಹಂತದಲ್ಲಿ ಗಣತಿ: ಈ ಹಿಂದೆ ಅನುಸರಿಸಿದ್ದಂತೆ ಈ ಬಾರಿಯೂ ಆನೆ ಗಣತಿಯನ್ನು 3 ವಿಭಾಗದಲ್ಲಿ ನಡೆಸಲಾಗು ತ್ತದೆ. ನೇರ ವೀಕ್ಷಣೆ(ಬ್ಲಾಕ್ ಸಾಂಪ್ಲಿಂಗ್), ನಿಗದಿತ ಮಾರ್ಗದಲ್ಲಿ ಸಿಗುವ ಲದ್ದಿ ಪರಿಶೀಲನೆ(ಲೈನ್ ಟ್ರಾನ್ಸೆಕ್ಟ್) ಹಾಗೂ ಆನೆ ಗಳು ನೀರು ಕುಡಿಯಲು ಬರುವ ಕೆರೆ–ಕಟ್ಟೆ(ವಾಟರ್ ಹೋಲ್) ಬಳಿ ಗಣತಿ ಕಾರ್ಯ ನಡೆಸಲಾಗುತ್ತದೆ. ಗಣತಿಯ ಮೊದಲ ದಿನ ಗಣತಿಗಾಗಿ ನಿಯೋಜಿಸಿರುವ ಸಿಬ್ಬಂದಿಗಳ(3–4) ತಂಡ 5 ಚ.ಕಿ.ಮೀ ಅಳತೆಯ ಮಾದರಿಯಲ್ಲಿ ಗುರುತಿಸಿರುವ ಬ್ಲಾಕ್‌ಗಳಲ್ಲಿ ಕಾಲ್ನಡಿಗೆಯಲ್ಲಿ ಸಂಚರಿಸಿ ಆನೆಗಳ ಗಣತಿ ಮಾಡಲಿದೆ. ಕನಿಷ್ಠ 15 ಕಿ.ಮೀ ಕಾಲ್ನಡಿಗೆಯಲ್ಲಿ ನಡೆದು ಸಾಗುವ ಈ ತಂಡ ನೇರ ವೀಕ್ಷಣೆಯಾಗುವ ಆನೆಗಳ ಮಾಹಿತಿ ಕಲೆ ಹಾಕುತ್ತದೆ. ಅದರಲ್ಲಿ ಗುಂಪಿ ನಲ್ಲಿರುವ ಆನೆಗಳ ಸಂಖ್ಯೆ, ಗಂಡಾನೆ, ಹೆಣ್ಣಾನೆ, ಮಕನಾ ಆನೆಗಳ ಸಂಖ್ಯೆ ಯನ್ನು ನಮೂದು ಮಾಡಲಿದ್ದಾರೆ. ಅಲ್ಲದೆ, ಆನೆಗಳ ವಯಸ್ಸಿನ ಮಾಹಿತಿ, ವಯಸ್ಕ, ಉಪವಯಸ್ಕ, ತಾರುಣ್ಯ ,ಮರಿ ಹಾಗೂ ಇತರೆ ಮಾಹಿತಿ ದಾಖಲಿಸಲಾಗುತ್ತದೆ.

2ನೇ ದಿನ(ಮೇ 24) ಬೆಳಗ್ಗೆ 6 ಗಂಟೆಗೆ ನಿಗದಿತ ಮಾರ್ಗದಲ್ಲಿ(ಲೈನ್ ಟ್ರಾನ್ಸೆಕ್ಟ್) 2 ಕಿ.ಮೀ ಟ್ರಾನ್ಸೆಕ್ಟ್‌ನಲ್ಲಿ ಸಾಗಿ ರಸ್ತೆಯ ಎರಡೂ ಬದಿಯಲ್ಲಿ ಕಾಣಸಿಗುವ ಆನೆಗಳ ಲದ್ದಿಗಳು, ಹೆಜ್ಜೆಗಳ ಗುರುತುಗಳ ಮಾಹಿತಿ ದಾಖಲಿಸಲಾಗುತ್ತದೆ. 3ನೇ ದಿನ(ಮೇ 25) ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಅರಣ್ಯ ಪ್ರದೇಶದ ಗುರುತಿಸಲ್ಪಟ್ಟ ಕೆರೆ–ಕಟ್ಟೆಗಳ ಬಳಿ ಮರದ ಮೇಲೆ ಮಚಾನ್ ನಿರ್ಮಿಸಿಕೊಂಡು ನೀರು ಕುಡಿಯಲು ಬರುವ ಆನೆಗಳ ಛಾಯಾಚಿತ್ರದೊಂದಿಗೆ ಮಾಹಿತಿ ದಾಖಲಿಸಲಾಗುತ್ತದೆ. ಗಣತಿಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಈ ಹಿಂದೆ ಪೇಪರ್‌ನಲ್ಲಿ ಬರೆದು ಸಲ್ಲಿಸಲಾಗುತ್ತಿತ್ತು. ಈ ಬಾರಿ ಆನೆ ಗಣತಿಗಾಗಿಯೇ ಆ್ಯಪ್ ವೊಂದನ್ನು ಅಭಿವೃದ್ಧಿಪಡಿಸಲಾಗಿದೆ. ಈ ಬಾರಿ ನಡೆಸುವ ಆನೆ ಗಣತಿಯಲ್ಲಿ ಕಂಡು ಬಂದ ಮಾಹಿತಿನ್ನು ಆ್ಯಪ್‌ನಲ್ಲಿ ದಾಖಲಿಸು ವುದರಿಂದ ನಿಖರ ಮಾಹಿತಿ ಲಭಿಸಲಿದೆ.

ನಾಗರಹೊಳೆಯಲ್ಲಿ ಗಣತಿಗೆ ಸಿದ್ಧತೆ

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶವು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ವ್ಯಾಪಿಸಿದೆ. ಈಗಾಗಲೇ ಆಧುನಿಕ ತಂತ್ರಜ್ಞಾನ ಹೊಂದಿರುವ ಕ್ಯಾಮರಾ ಟ್ರಾಪ್ ಬಳಸಿ 15 ದಿನಗಳಿಂದ ಗಣತಿ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ನಾಗರಹೊಳೆ ಹುಲಿ ಸಂರಕ್ಷಿತ ವ್ಯಾಪ್ತಿಯ 91 ಗಸ್ತುಗಳಲ್ಲಿ 300ಕ್ಕೂ ಹೆಚ್ಚು ಸಿಬ್ಬಂದಿ ಆನೆ ಗಣತಿಯಲ್ಲಿ ಭಾಗವಹಿಸಲಿದ್ದಾರೆ. ಗಣತಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಆನ್‌ಲೈನ್ ಮೂಲಕ ಪ್ರತಿ ಗಸ್ತಿನ ಸಿಬ್ಬಂದಿಗೆ ಆನೆಗಣತಿಗೆ ತರಬೇತಿ ನೀಡಲಾಗಿದೆ. ಆನೆಗಳ ಲಿಂಗ ಪ್ರಮಾಣ, ಪ್ರತಿ ಕಿ.ಮೀಗೆ ಆನೆಗಳ ಸಾಂದ್ರತೆ ಹೆಚ್ಚಾಗಿರುವ ಪ್ರದೇಶಗಳನ್ನು ಗುರುತಿಸುವುದರಿಂದ ಮಾನವ ಆನೆ ಸಂಘರ್ಷ ತಡೆಗಟ್ಟಲು ಮತ್ತು ಸಂಘರ್ಷ ನಿರ್ವಹಣೆ ತಂತ್ರಗಳನ್ನು ವಿನ್ಯಾಸಗೊಳಿ ಸುವುದಕ್ಕೆ ಉಪಯೋಗವಾಗುತ್ತದೆ. **– ಹರ್ಷಕುಮಾರ್ ಚಿಕ್ಕನರಗುಂದ, ನಿರ್ದೇಶಕ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ**


ಬಂಡೀಪುರದಲ್ಲಿ 150 ಸಿಬ್ಬಂದಿಗಳ ನಿಯೋಜನೆ

ಆನೆ ಗಣತಿಗೆ ಬಂಡೀಪುರದಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಟೈಗರ್ ಸೆಲ್‌ನಿಂದ ಸಿಬ್ಬಂದಿಗಳಿಗೆ ಆನ್‌ಲೈನ್ ಮೂಲಕ ತರಬೇತಿ ನೀಡಲಾಗಿದೆ. ಕಳೆದ ವರ್ಷದ ಗಣತಿಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 1116 ಆನೆಗಳಿದ್ದವು. ಈ ಬಾರಿ ಗಣತಿಗೆ ಸಿಬ್ಬಂದಿಗಳನ್ನು ಸಜ್ಜುಗೊಳಿಸಲಾಗಿದೆ. ಈ ಬಾರಿ ಕರ್ನಾಟಕ, ಕೇರಳ, ತಮಿಳುನಾಡು ಅರಣ್ಯ ಇಲಾಖೆಗಳ ಸಮನ್ವಯತೆಯಿಂದ ಗಣತಿ ನಡೆಸ ಲಾಗುತ್ತಿದೆ. **–ಎಸ್.ಪ್ರಭಾಕರನ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ**

ಮೊದಲ ಬಾರಿಗೆ ಆ್ಯಪ್ ಬಳಸಿ ಗಣತಿ

ಕಳೆದ ಮಾರ್ಚ್‌ನಲ್ಲಿ ಮಾನವ–ಪ್ರಾಣಿ ಸಂಘರ್ಷ ತಡೆಗೆ ರಚಿಸಲಾದ ಮೂರು ರಾಜ್ಯಗಳ ಅಧಿಕಾರಿಗಳಿರುವ ಸಮನ್ವಯ ಸಮಿತಿಯ ಸಹಕಾರದಿಂದ ಮೂರು ರಾಜ್ಯಗಳಲ್ಲೂ ಏಕಕಾಲದಲ್ಲಿ ಆನೆ ಗಣತಿ ನಡೆಸಲಾಗುತ್ತಿದೆ. ಈ ಬಾರಿ ಆನೆ ಗಣತಿಗಾಗಿಯೇ ಆ್ಯಪ್ ಸಿದ್ಧಪಡಿಸಲಾಗಿದ್ದು, ಗಣತಿಯಲ್ಲಿ ಗುರುತಿಸಿದ ಅಂಕಿ ಅಂಶಗಳನ್ನು ಆ್ಯಪ್‌ನಲ್ಲಿ ದಾಖಲಿಸುವುದರಿಂದ ನಿಖರ ಮಾಹಿತಿ ದೊರೆಯಲಿದೆ. ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆನೆ ಗಣತಿಗೆ ಸಿದ್ಧತೆ ಮಾಡಿಕೊಳ್ಳಲಾಗಿದ್ದು, 200 ಸಿಬ್ಬಂದಿಗಳನ್ನು ಗಣತಿಗೆ ಸಜ್ಜುಗೊಳಿಸಲಾಗಿದೆ. ಎರಡು ಬಾರಿ ತರಬೇತಿ ನೀಡಲಾಗಿದೆ. ಮೇ 22ರಂದು ಮತ್ತೊಮ್ಮೆ ಸಿಬ್ಬಂದಿಗಳಿಗೆ ತರಬೇತಿ ನೀಡಿ ಗಣತಿಗೆ ಕಳುಹಿಸಲಾಗುತ್ತದೆ. **–ದೀಪಾ ಕಂಟ್ರಾಕ್ಟರ್, ನಿರ್ದೇಶಕರು, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶ**

ಕಾಂಗ್ರೆಸ್ ಸರ್ಕಾರಕ್ಕೆ ಒಂದು ವರ್ಷ: ಸಂಭ್ರಮಾಚರಣೆ



ಮೈಸೂರು, ಮೇ 20– ಮೈಸೂರಿನ ನಂಜುಮಳಿಗೆ ವೃತ್ತದಲ್ಲಿ (ಕನಕ ವೃತ್ತ) ಡಾ.ಯತೀಂದ್ರ ಯುವ ಬ್ರಿಗೇಡ್ ಹಾಗೂ ಕೃಷ್ಣರಾಜ ಯುವ ಬಳಗದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಂದು ವರ್ಷ ಯಶಸ್ವಿಯಾಗಿ ಪೂರೈಸಿದ ಹಿನ್ನೆಲೆ ಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್ ಮೂರ್ತಿ ನೇತೃತ್ವದಲ್ಲಿ ಸಿಹಿ ವಿತರಿಸಿ ಸಿದ್ದ ರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರ ಭಾವಚಿತ್ರ ಹಿಡಿದು ಕಾಂಗ್ರೆಸ್‌ನ ಗ್ಯಾರಂಟಿ ಸರ್ಕಾರ ಎಂದು ಘೋಷಣೆ ಕೂಗುತ್ತಾ ಸಂಭ್ರಮಿಸಿದರು.

ಬಳಿಕ ಆರ್.ಮೂರ್ತಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಪೂರ್ವ ಸಾಧನೆ ಮಾಡಿದ್ದು, ಅತ್ಯಂತ ಕಿರು ಅವಧಿ ಯಲ್ಲಿ ಅಗಣಿತವಾಗಿ ಜನಮನ್ನಣೆ ಗಳಿಸಿದೆ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಇಂದಿಗೆ ಸ್ಥಾಪನೆ ಗೊಂಡು ಒಂದು ವರ್ಷ ಪೂರೈಸಿದ, ಈ ಅವಧಿಯಲ್ಲಿ ಯಾವುದೇ ಜಾತಿ ಧರ್ಮ ಎನ್ನದೆ ಎಲ್ಲರನ್ನೂ ಸಮಾನ ವಾಗಿ ಕಾಣುವ ತತ್ವ ಪಾಲಿಸಿಕೊಂಡು ಬರುತ್ತಿದೆ ಎಂದು ಹೇಳಿದರು. ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಮೂಲಕ 4.60 ಕೋಟಿ ಜನರನ್ನು ತಲುಪುತ್ತಿದೆ. ಬಡವರು ಮಹಿಳೆಯರು ರೈತರು ಸೇರಿದಂತೆ ಶ್ರಮಿಕ ವರ್ಗದವ ರನ್ನು ಸಹ ಆರ್ಥಿಕವಾಗಿ ಸಶಕ್ತನಾಗಿರಿ ಸಿದ, ಕಾಂಗ್ರೆಸ್ ಗ್ಯಾರಂಟಿ ಯೋಜನೆ ಗಳು ದೇಶದಲ್ಲಿ, ಅಷ್ಟೇ ಯಾಕೆ ವಿಶ್ವದಲ್ಲಿ ಮಾದರಿಯಾಗಿದೆ. ನುಡಿದಂತೆ ನಡೆದ ಸರ್ಕಾರ ಎಂದರು. ಕೆಪಿಸಿಸಿ ಸದಸ್ಯ ನಜರ್ ಬಾದ್ ನಟರಾಜ್, ಕೆ.ಆರ್.ಬ್ಯಾಂಕ್ ಉಪಾ ಧ್ಯಕ್ಷ ಬಸವರಾಜ್ ಬಸಪ್ಪ, ಜಿ ರಾಘ ವೇಂದ್ರ, ಡಾ.ಯತೀಂದ್ರ ಯುವ ಬ್ರಿಗೇಡ್ ಅಧ್ಯಕ್ಷ ಶಿವಕುಮಾರ್, ಲೋಕೇಶ್, ರವಿಚಂದ್ರ, ಎಸ್.ಎನ್.ರಾಜೇಶ್, ತೀರ್ಥ ಕುಮಾರ್, ಬ್ರೆಡ್ ವೇ ಕಿರಣ್, ಶಿವ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಟಾಪ್ ವಿದ್ಯಾರ್ಥಿಗಳಿಗೆ ಅಭಿನಂದನೆ



ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಮೈಸೂರು ಜಿಲ್ಲೆ ಉತ್ತಮ ಸಾಧನೆ ಮಾಡಿದ ಜಿಲ್ಲೆಯ ಟಾಪ್ 10 ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಭಿನಂದಿಸಿದರು. ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಡಿಡಿಪಿಐ ಹೆಚ್.ಕೆ.ಪಾಂಡು ಮತ್ತಿತರರಿದ್ದರು.

ದಿನೇಶ್ ಗುಂಡೂರಾವ್ ಅಭಿಮಾನಿ ಬಳಗದಿಂದ ಜನ ಸೇವಾ ಕೇಂದ್ರ ಉದ್ಘಾಟನೆ



ಮೈಸೂರು, ಮೇ 20– ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ದಿನೇಶ್ ಗುಂಡೂರಾವ್ ಅಭಿಮಾನಿ ಬಳಗದ ವತಿಯಿಂದ ಸಾರ್ವಜನಿಕರ ಅನುಕೂಲ ಕ್ಕಾಗಿ ಹಾಗೂ ವೃದ್ಧರಿಗೆ ಉಚಿತವಾಗಿ ಸರ್ಕಾರದ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಆರಂಭಿಸಲಾದ ಜನಸೇವಾ ಕೇಂದ್ರವನ್ನು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಇಂದಿನ ತಾಂತ್ರಿಕ ಯುಗದಲ್ಲಿ ಆನ್‌ಲೈನ್ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸರ್ಕಾ ರದ ಸವಲತ್ತು ತಲುಪಲು ಸಾರ್ವಜನಿಕ ಸೇವಾ ಕೇಂದ್ರಗಳು ಸಂಪರ್ಕ ಸೇತುವೆ ಯಾಗಿ ಕೆಲಸ ಮಾಡುತ್ತಿರುವುದು ಶ್ಲಾಘ ನೀಯವಾದುದು. ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳ ಭಾಗ್ಯಗಳು ಕರ್ನಾಟಕದ ಜನತೆಯನ್ನು ಹಸಿವು ಮುಕ್ತಗೊಳಿಸಿ ಬೆಳಕನ್ನು ನೀಡುವ ಮೂಲಕ ಪ್ರತಿ ಮನೆಯ ಯಜಮಾನಿಗೆ ಪ್ರೋತ್ಸಾಹಧನವನ್ನು ನೀಡಿ ಯುವ ಪದವೀಧರರನ್ನು ರಕ್ಷಿಸುವಲ್ಲಿ ಸಿದ್ದರಾಮಯ್ಯ ಸರ್ಕಾರ ಯಶಸ್ಸು ಕಂಡಿದೆ. ಕೋವಿಡ್‌ನಿಂದ ಜನರು ಬಾರದೇ ಬಿಕೋ ಎನ್ನುತ್ತಿದ್ದ ಪ್ರವಾಸಿ ತಾಣಗಳು, ರಾಜ್ಯದ ದೇವಸ್ಥಾನಗಳು, ಕಲ್ಯಾಣ ಮಂಟಪಗಳು, ಮತ್ತೊಮ್ಮೆ ಜನ ಸೇರಲು ಸರ್ಕಾರದ 'ಶಕ್ತಿ' ಯೋಜನೆ ನೆರವಾಗಿದೆ ಎಂದರು.

ದಿನೇಶ್ ಗುಂಡೂರಾವ್ ಅಭಿಮಾನಿ ಬಳಗದ ಅಧ್ಯಕ್ಷ ವಿನಯ್ ಕಣಗಾಲ್ ಮಾತನಾಡಿ, ಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸವಲತ್ತುಗಳನ್ನು ತಲು ಪಿಸುವ ನಿಟ್ಟಿನಲ್ಲಿ ಸೇವಾ ಕೇಂದ್ರ ತೆರೆದಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದರು. ವಿಶೇಷವಾಗಿ ಹಿರಿಯ ನಾಗರಿಕರಿಗೆ ಉಚಿತ ಸೇವೆಯನ್ನು ಈ ಸೇವಾ ಕೇಂದ್ರದಲ್ಲಿ ಒದಗಿಸಲಾಗು ವುದು. ಮಾಹಿತಿಗಾಗಿ 99726 06425 ಕರೆ ಮಾಡಬಹುದು ಎಂದರು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆಪಿಸಿಸಿ ಕಾರ್ಯದರ್ಶಿ ವೀಣಾ, ನಗರ ಕಾಂಗ್ರೆಸ್ ಮಾಜಿ ಅಧ್ಯಕ್ಷ ರವಿಶಂಕರ್, ಡಾ.ಸುಜಾತಾ ರಾವ್, ವಿನಯ್‌ಕುಮಾರ್, ಯತೀಂದ್ರ ಯುವ ಬ್ರಿಗೇಡ್ ಅಧ್ಯಕ್ಷ ಶಿವಕುಮಾರ್, ರಾಜೇಶ್, ರಾಕೇಶ್, ರವಿಚಂದ್ರನ್, ಜಯ ಸಿಂಹ, ರಂಗನಾಥ್, ವಿಜಯ್‌ಕುಮಾರ್, ರಾಮಚಂದ್ರು ಇನ್ನಿತರರು ಹಾಜರಿದ್ದರು.

ಇದಲ್ಲವೇ ಕನ್ನಡದ ದೌರ್ಭಾಗ್ಯ...!?

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಪ್ರಗತಿ ಬರೀ ಕಾಲಹರಣ!

- ಬೆಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ರಾಜಪ್ಪ ದಳವಾಯಿ ವಿಷಾದ
- ತಮಿಳು, ತೆಲುಗು ಕೇಂದ್ರಗಳು ಪ್ರಗತಿಯಲ್ಲಿ ದಾಪುಗಾಲು

ಮೈಸೂರು, ಮೇ 20(ಎಸ್‌ಪಿಎನ್)– ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಮೈಸೂರಿನಲ್ಲೋ.... ಬೆಂಗಳೂರಿ ನಲ್ಲೋ.. ಎಂಬ ಚರ್ಚೆಯಲ್ಲಿ ಹಲವು ವರ್ಷ ಕಾಲಹರಣ ಮಾಡಿದ್ದು ಬಿಟ್ಟರೆ ಈ ಅಧ್ಯಯನ ಕೇಂದ್ರದಲ್ಲಿ ಬೇರೆ ಯಾವುದೇ ಕನ್ನಡ ಪರ ಕೆಲಸಗಳಾಗಿಲ್ಲ ಎಂದು ಬೆಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ರಾಜಪ್ಪ ದಳವಾಯಿ ತೀವ್ರ ಬೇಸರ ವ್ಯಕ್ತಪಡಿಸಿದರು.



ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದಲ್ಲಿ ಡಾ.ಬಿ.ಪವಿತ್ರ ಅವರ ಸಂಶೋಧನಾ ಪ್ರಬಂಧ 'ಕಡಲೊಳಗಿನ ಕಿಡಿಗಳು' ಪುಸ್ತಕವನ್ನು ಬೆಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ರಾಜಪ್ಪ ದಳವಾಯಿ ಬಿಡುಗಡೆಗೊಳಿಸಿದರು.

ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದಲ್ಲಿ ಡಾ.ಬಿ.ಪವಿತ್ರ ಅವರ ಸಂಶೋಧನಾ ಪ್ರಬಂಧ 'ಕಡ ಲೊಳಗಿನ ಕಿಡಿಗಳು' ಪುಸ್ತಕವನ್ನು ಬಿಡು ಗಡೆಗೊಳಿಸಿ ಮಾತನಾಡಿದರು.

ತಮಿಳು ಮತ್ತು ತೆಲುಗು ಶಾಸ್ತ್ರೀಯ ಅಧ್ಯಯನ ಕೇಂದ್ರಗಳು ಭಾರತೀಯ ಭಾಷಾ ಸಂಸ್ಥಾನದಿಂದ ಸ್ವಾಯತ್ತತೆ ಪಡೆದು ಸ್ವತಂತ್ರ ವಾಗಿ ಕೆಲಸ ನಿರ್ವಹಿಸುತ್ತಿವೆ. ಈಗಾಗಲೆ ಹತ್ತಾರು ಸಂಶೋಧನಾ ಗ್ರಂಥಗಳನ್ನು ಆಯಾಯ ಭಾಷಾ ಕೇಂದ್ರದಲ್ಲಿ ಪ್ರಕಟಿ ಸಿವೆ. ಆದರೆ, ಕನ್ನಡ ಶಾಸ್ತ್ರೀಯ ಅತ್ಯುನ್ನತ ಕೇಂದ್ರದಲ್ಲಿ ಮಾತ್ರ ಏನೂ ಪ್ರಗತಿ ಕಾಣುತ್ತಿಲ್ಲ. ಏಕೆಂದರೆ ಈ ಕೇಂದ್ರ ಎಲ್ಲಿರಬೇಕು ಎಂಬುದರಲ್ಲೇ ಕಾಲ ಹರಣವಾಗಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನನ್ನನ್ನು ರಂಗಸಮಾಜದ ಸದಸ್ಯ ಸ್ಥಾನಕ್ಕೆ ನೇಮಕ ಮಾಡಿದೆ. ರಂಗ ಸಮಾಜದ ಸಭೆಯನ್ನು ಸರ್ಕಾರ ಕರೆದರೆ ಆ ಸಭೆಯಲ್ಲಿ ನಾನು ಖಂಡಿತವಾಗಿಯೂ ಈ ಕೇಂದ್ರಕ್ಕೆ ಹೆಚ್ಚಿನ ಅನುದಾನ ಬಿಡುಗಡೆಗೊಳಿಸಿ ಅಭಿವೃದ್ಧಿ ಪಡಿಸುವಂತೆ ಒತ್ತಾಯಿಸುತ್ತೇನೆ ಎಂದರು.

ಜನಸಾಮಾನ್ಯರೂ ಸಾಹಿತ್ಯ ಓದು ತ್ತಾರೆ ಎಂಬುದಕ್ಕೆ ನಿದರ್ಶನವೊಂದನ್ನು ಪ್ರೊ.ರಾಜಪ್ಪ ದಳವಾಯಿ ನೀಡಿದರು; ಬಾಂಗ್ಲಾದಿಂದ ಬಂದಂತಹ ಚಿತ್ತರಂಜನ್ ಎಂಬ ವ್ಯಕ್ತಿ ಕಲ್ಕತ್ತಾದಲ್ಲಿ ಸೈಕಲ್ ರಿಕ್ಷಾ ಓಡಿಸಿ ಜೀವನ ಸಾಗಿಸುತ್ತಿದ್ದ. ಒಂದು ದಿನ ಹಿರಿಯ ಸಾಹಿತಿ ಮಹಾಶ್ವೇತ ಅವರು ಮನೆಗೆ ಹೋಗಲು ಚಿತ್ತರಂಜನ್ ಸೈಕಲ್ ರಿಕ್ಷಾ ಏರಲು ಮುಂದಾಗುತ್ತಾರೆ. ಆದರೆ, ಚಿತ್ತರಂಜನ್, ಪುಸ್ತಕವೊಂದನ್ನು ಓದುವು ದರಲ್ಲಿ ಮಗ್ನನಾಗಿದ್ದು, ಬೇರೆ ಸೈಕಲ್ ರಿಕ್ಷಾ ಹಿಡಿಯುವಂತೆ ಹೇಳುತ್ತಾನೆ. ಅಂತೆಯೇ ಮಹಾಶ್ವೇತರು ಬೇರೆ ರಿಕ್ಷಾ ಹಿಡಿಯಲು ಯತ್ನಿಸಿ, ಸಾಧ್ಯವಾಗದೇ ಮತ್ತೆ ಇವನ ಬಳಿ ಬಂದಾಗ ವಿಧಿಯಿಲ್ಲದೆ ಚಿತ್ತರಂಜನ್ ತನ್ನ ರಿಕ್ಷಾದಲ್ಲಿ ಅವರನ್ನು ಹತ್ತಿಸಿಕೊಂಡು ಸಾಗುತ್ತಾನೆ. ಮಹಾಶ್ವೇತರು ಅವನನ್ನು ಮಾತಿಗೆಳೆದು, ಯಾವ ಪುಸ್ತಕ ಓದುತ್ತಿದ್ದೆ ಎಂದು ಕೇಳುತ್ತಾರೆ.

ಅದಕ್ಕೆ ಆತ ಸಾಹಿತಿ ಮಹಾಶ್ವೇತರ ಕಾದಂಬರಿ ಎನ್ನುತ್ತಾನೆ. ಅದರಲ್ಲಿ ತನಗೆ ಇಷ್ಟವಾದ ಪ್ರಸಂಗವನ್ನು ವರ್ಣಿಸುತ್ತಾನೆ. ಆಗ ಮಹಾಶ್ವೇತ ಅವರು ತನ್ನ ಪರಿ ಚಯ ಮಾಡಿಕೊಂಡು ಅವನನ್ನು ಪ್ರಶಂ ಸಿಸಿ ಸಮಯ ಸಿಕ್ಕಾಗ ಮನೆಗೆ ಬರು ವಂತೆ ಆಹ್ವಾನಿಸುತ್ತಾರೆ. ಇದರ ಪರಿ ಣಾಮ ಚಿತ್ತರಂಜನ್ ಮುಂದೆ ಜನಾನು ರಾಗಿಯಾಗಿ ರಾಜಕೀಯಕ್ಕೂ ಪ್ರವೇಶಿಸಿ ತೃಣಮೂಲ ಕಾಂಗ್ರೆಸ್ ಶಾಸಕನಾಗಿ ಆಯ್ಕೆಯಾದ ಪ್ರಸಂಗ ವಿವರಿಸಿದರು.

ಕಾರ್ಯಕ್ರಮದಲ್ಲಿ ಹಂಪಿ ವಿವಿ ಪ್ರಾಧ್ಯಾಪಕ ಡಾ.ಮಾಧವ ಪೆರಾಜೆ ಕೃತಿ ಕುರಿತು ಮಾತನಾಡಿದರು.

ರೂಪ ಪ್ರಕಾಶನದ ಪ್ರಕಾಶಕ ಯು.ಎಸ್. ಮಹೇಶ್, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇ ಶಕ ಪ್ರೊ.ಎನ್.ಎಂ.ತಳವಾರ, ಹೊಳೆ ನರಸೀಪುರದ ಮಹಿಳಾ ಸರ್ಕಾರಿ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕ ಡಾ.ಚಿಕ್ಕ ಮಗಳೂರು ಗಣೇಶ್ ಉಪಸ್ಥಿತರಿದ್ದರು.

> ಇತ್ತೀಚಿನ ದಿನಗಳಲ್ಲಿ ಓದುಗರ ಸಂಖ್ಯೆ ಕಡಿಮೆ ಯಾಗುತ್ತಿದೆ. ಅದರಲ್ಲೂ ಪ್ರಾಧ್ಯಾ ಪಕರು, ಉಪನ್ಯಾಸಕರು, ಶಿಕ್ಷಕರ ವಲಯದಲ್ಲೇ ಪುಸ್ತಕ ಕೊಂಡು ಓದುವವರ ಸಂಖ್ಯೆ ಕಡಿಮೆಯಾಗು ತ್ತಿದೆ. ಇದರ ಪ್ರಭಾವ ವಿದ್ಯಾರ್ಥಿಗಳ ಮೇಲಾಗುತ್ತಿದೆ. ಇದರಿಂದಾಗಿ ಓದು ಗರಿಲ್ಲದೆ ಸಾರ್ವಜನಿಕ ಗ್ರಂಥಾಲಯ ಗಳೂ ಸೊರಗುತ್ತಿವೆ.
> **–ಪ್ರೊ. ರಾಜಪ್ಪ ದಳವಾಯಿ**

ಕಾಡುಕೋಣ ಹತ್ಯೆ ಮಾಡಿದ್ದ ಆರೋಪಿ ಬಂಧನ

▶ ಮತ್ತೋರ್ವ ಪರಾರಿ, 570ಕೆಜಿ ಮಾಂಸ ವಶ ▶ ಮಡಿಕೇರಿ ಅರಣ್ಯಾಧಿಕಾರಿಗಳ ಕಾರ್ಯಾಚರಣೆ



ಕಾಡುಕೋಣ ಹತ್ಯೆ ಮಾಡಿದ್ದ ಹ್ಯಾರಿಸ್‌ನನ್ನು ಮಡಿಕೇರಿ ವಿಭಾಗದ ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿರುವುದು.

ಮಡಿಕೇರಿ, ಮೇ 20– ಕಾಡುಕೋಣ ಹತ್ಯೆ ಮಾಡಿ ಮಾಂಸ ಸಾಗಿಸುತ್ತಿದ್ದ ಓರ್ವನನ್ನು ಬಂಧಿಸಿರುವ ಮಡಿಕೇರಿ ವಿಭಾಗದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ 570 ಕೆಜಿ ಕಾಡುಕೋಣ ಮಾಂಸವನ್ನು ಭಾನುವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ.

ಎಮ್ಮೆಮಾಡು ನಿವಾಸಿ ಹ್ಯಾರಿಸ್(42) ಬಂಧಿತ, ಮತ್ತೋರ್ವ ಮೂಸ ಎಂಬಾತ ಪರಾರಿಯಾಗಿದ್ದಾನೆ. ಸೋಮವಾರಪೇಟೆ ತಾಲೂಕಿನ ಗರ್ವಾಲೆ ಗ್ರಾಮದಲ್ಲಿ 8 ವರ್ಷದ ಕಾಡುಕೋಣವನ್ನು ಭಾನುವಾರ ರಾತ್ರಿ ಹತ್ಯೆ ಮಾಡಿ ಸಾಗಿಸಲಾಗುತ್ತಿತ್ತು. ಇದೇ ವೇಳೆ ಗಸ್ತಿನಲ್ಲಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಪಿಕ್ ಅಪ್ ವಾಹನವನ್ನು ಪರಿಶೀಲಿಸಲು ಮುಂದಾದಾಗ ಚಾಲಕ ವಾಹನ ನಿಲ್ಲಿಸದೇ ಪರಾರಿಯಾಗಲು ಯತ್ನಿಸಿದ್ದಾನೆ.

ವಾಹನವನ್ನು 25 ಕಿ.ಮೀ. ವರೆಗೆ ಬೆನ್ನಟ್ಟಿದ್ದ ಅರಣ್ಯ ಇಲಾಖೆ ಸಿಬ್ಬಂದಿಯ ವಾಹನಕ್ಕೆ ಡಿಕ್ಕಿಪಡಿಸಲು ಮುಂದಾಗಿದ್ದಾನೆ. ಬಳಿಕ ಮಡಿಕೇರಿ–ಭಾಗಮಂಡಲ ರಸ್ತೆ ಅಪ್ಪಂಗಳದಲ್ಲಿ ಪಿಕ್‌ಅಪ್ ವಾಹನವನ್ನು ಅಡ್ಡಗಟ್ಟಿದ್ದಾರೆ. ಈ ವೇಳೆ ಎಮ್ಮೆಮಾಡುವಿನ ಹ್ಯಾರಿಸ್ ಸೆರೆಯಾಗಿದ್ದು, ಓರ್ವ ಆರೋಪಿ ಮೂಸಾ ಪರಾರಿಯಾಗಿದ್ದಾನೆ. ನಂತರ ವಾಹನಲ್ಲಿದ್ದ 570 ಕೆಜಿ ಕಾಡುಕೋಣದ ಮಾಂಸ, ಎರಡು ಕತ್ತಿಗಳನ್ನು ವಶಕ್ಕೆ ಪಡೆದರು.

10 ಗುಂಡು ಪತ್ತೆ: ಕಾಡುಕೋಣವನ್ನು ಗುಂಡು ಹೊಡೆದು ಹತ್ಯೆ ಮಾಡಿರುವ ಹಿನ್ನೆಲೆಯಲ್ಲಿ ಅದರ ಮಾಂಸದಲ್ಲಿ ಗುಂಡಿನ ಚೂರುಗಳನ್ನು ಪತ್ತೆ ಮಾಡಲು ಪೊಲೀಸರ ಸಹಕಾರ ಪಡೆಯಲಾಯಿತು. ಮೆಟಲ್ ಡಿಟೆಕ್ಟರ್ ಮೂಲಕ ಪತ್ತೆ ಹಚ್ಚಿದಾಗ 8 ರಿಂದ 10 ಗುಂಡಿನ ಚೂರುಗಳು ಸಿಕ್ಕಿವೆ. ಅರಣ್ಯ ಇಲಾಖೆ ಮೂಲಕ ಮಾಂಸವನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು ಎಂದು ಕಾಡುಕೋಣದ ಕಳೇಬರ ಮಹಜರು ನಡೆಸಿದ ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಕೆ.ಎ.ಪ್ರಸನ್ನ ತಿಳಿಸಿದರು.

7 ಮಂದಿಯಿಂದ ಕೃತ್ಯ: ಮಡಿಕೇರಿ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ವನ್ಯಪ್ರಾಣಿ ಬೇಟೆ ಪ್ರಕರಣಗಳು ಕಂಡು ಬಂದಿದ್ದ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿಯ ಗಸ್ತು ಹೆಚ್ಚಿಸಲಾಗಿತ್ತು. ಅದರಂತೆ ಕಾರ್ಯಾಚರಣೆ ನಡೆಸುವಾಗ ಈ ಪ್ರಕರಣ ಬೆಳಕಿಗೆ ಬಂದಿದೆ ಎಂದು ಮಡಿಕೇರಿ ವಲಯ ಡಿಎಫ್‌ಓ ಭಾಸ್ಕರ್ ಹೇಳಿದರು.

ಕಾಡುಕೋಣ ಹತ್ಯೆ ಪ್ರಕರಣದಲ್ಲಿ ಬಂಧಿತನಾದ ಆರೋಪಿ ಸಹಿತ ಒಟ್ಟು 7 ಆರೋಪಿಗಳು ಕೃತ್ಯದಲ್ಲಿ ಶಾಮೀಲಾಗಿರುವುದು ತನಿಖೆಯಿಂದ ತಿಳಿದು ಬಂದಿದೆ. ಆರೋಪಿಗಳ ಮಾಹಿತಿ ಲಭ್ಯವಾಗಿದ್ದು, ಆರೋಪಿಗಳನ್ನು ಬಂಧಿಸಲಾಗುವುದು ಎಂದು ಹೇಳಿದರು.

ಕಾರ್ಯಾಚರಣೆಯಲ್ಲಿ ಡಿಎಫ್‌ಓ ಭಾಸ್ಕರ್, ಎಸಿಎಫ್ ಮೊಹಿಸಿನ್ ಭಾಷಾ, ಆರ್‌ಎಫ್‌ಓ ಪೂಜಾಶ್ರೀ, ಸಿಬ್ಬಂದಿ ಮಲ್ಲಯ್ಯ ಹಿರೇಮಠ್, ಸಂತೋಷ್, ವಾಸುದೇವ್, ಜೀವನ್, ಯಶವಂತ್, ಕುಶನ್, ಪ್ರವೀಣ್, ಮಹೇಶ್, ಸುನೀಲ್, ಮೋಹನ್, ಯತೀಶ್, ದರ್ಶಿನಿ, ಶರತ್, ವೆಂಕಟರಮಣ ಹಾಗೂ ಉಮೇಶ್ ಪಾಲ್ಗೊಂಡಿದ್ದರು.

ನೆರವಂಡ, ಮಣವಟ್ಟೀರ ತಂಡ ಚಾಂಪಿಯನ್ಸ್

● ಅಚ್ಚಪಂಡ, ಮುಕ್ಕಾಟೀರ ತಂಡ ರನ್ನರ್ ಅಪ್ ● ಕೊಡವ ಕೌಟುಂಬಿಕ ಅರಮಣಮಾಡ ಕ್ರಿಕೆಟ್ ನಮ್ಮೆ ಮುಕ್ತಾಯ





ಕೊಡವ ಕೌಟುಂಬಿಕ ಅರಮಣಮಾಡ ಕ್ರಿಕೆಟ್ ನಮ್ಮೆಯ ಚಾಂಪಿಯನ್ ಪಟ್ಟ ಅಲಂಕರಿಸಿದ ನೆರವಂಡ ತಂಡ.

ಗೋಣಿಕೊಪ್ಪ, ಮೇ 20–ಅರಮಣಮಾಡ ಒಕ್ಕ ಮತ್ತು ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ಗೋಣಿಕೊಪ್ಪಲು ಬಳಿಯ ಬಾಳೆಲೆ ವಿಜಯಲಕ್ಷ್ಮಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ನಡೆದ 22ನೇ ವರ್ಷದ ಕೊಡವ ಕೌಟುಂಬಿಕ ಅರಮಣಮಾಡ ಕ್ರಿಕೆಟ್ ನಮ್ಮೆಯಲ್ಲಿ ಪುರುಷರ ವಿಭಾಗದಲ್ಲಿ ನೆರವಂಡ ತಂಡ ಹಾಗೂ ಮಹಿಳೆಯರ ವಿಭಾಗದಲ್ಲಿ ಮಣವಟ್ಟೀರ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿವೆ.

ಪುರುಷರ ವಿಭಾಗದಲ್ಲಿ ಅಚ್ಚಪಂಡ ತಂಡ ಹಾಗೂ ಮಹಿಳೆಯರ ವಿಭಾಗದಲ್ಲಿ ಮುಕ್ಕಾಟೀರ (ಹರಿಹರ–ಬೆಳ್ಳೂರು) ತಂಡ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡವು. ನೆರವಂಡ ಮತ್ತು ಅಚ್ಚಪಂಡ ತಂಡಗಳ ನಡುವೆ ನಡೆದ ಫೈನಲ್‌ನಲ್ಲಿ ನೆರವಂಡ ತಂಡ 9 ವಿಕೆಟ್‌ಗಳಿಂದ ಜಯಗಳಿಸಿ ಚಾಂಪಿಯನ್ ಆಗಿ ಹೊರ ಹೊಮ್ಮಿತು. ಮೊದಲು ಬ್ಯಾಟಿಂಗ್ ಮಾಡಿದ ಅಚ್ಚಪಂಡ ತಂಡ 7 ವಿಕೆಟ್ ನಷ್ಟಕ್ಕೆ ಕೇವಲ 36 ರನ್ ಗಳಿಸಿತ್ತು. ಗೆಲುವಿನ ಗುರಿ ಬೆನ್ನತ್ತಿದ ನೆರವಂಡ ತಂಡ ಕೇವಲ 3.4 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು 37 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ನೆರವಂಡ ತಂಡದ ಪ್ರಶಾಂತ್ 22, ಪೆಮ್ಮಯ್ಯ 12, ವರುಣ್ 4 ರನ್ ಗಳಿಸಿದರೆ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ನೆರವಂಡ ಪ್ರಶಾಂತ್ 3 ವಿಕೆಟ್ ಪಡೆದರು. ಈ ಮೂಲಕ ಪ್ರಶಾಂತ್ ಪಂದ್ಯ ಪುರುಷಕ್ಕೆ ಪಾತ್ರರಾದರು.

ಮಹಿಳಾ ವಿಭಾಗದ ಫೈನಲ್‌ನಲ್ಲಿ ಮಣವಟ್ಟೀರ ತಂಡ ಮುಕ್ಕಾಟೀರ (ಹರಿಹರ–ಬೆಳ್ಳೂರು) ತಂಡದ ವಿರುದ್ಧ 25 ರನ್‌ಗಳಿಂದ ಜಯ ಗಳಿಸಿ ಪ್ರಥಮ ಮಹಿಳಾ ಕೊಡವ ಕೌಟುಂಬಿಕ ಕ್ರಿಕೆಟ್ ಟೂರ್ನಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಮೊದಲು ಬ್ಯಾಟಿಂಗ್ ನಡೆಸಿದ ಮಣವಟ್ಟೀರ ತಂಡ ನಿಗದಿತ 6 ಓವರ್‌ಗಳಲ್ಲಿ ಯಾವುದೇ ವಿಕೆಟ್ ಕಳೆದುಕೊಳ್ಳದೆ 60 ರನ್ ಗಳಿಸಿತು. ಇದನ್ನು ಬೆನ್ನತ್ತಿದ ಮುಕ್ಕಾಟೀರ ತಂಡ 3 ವಿಕೆಟ್ ಕಳೆದುಕೊಂಡು 34 ರನ್‌ಗಳನ್ನಷ್ಟೇ ಗಳಿಸಲು ಶಕ್ತವಾಯಿತು.

ಮಣವಟ್ಟೀರ ತಂಡದ ಸಂಗೀತಾ 30, ಅರ್ಪಿತಾ 20 ರನ್ ಗಳಿಸಿದರೆ, ಶೃತಿ 2 ವಿಕೆಟ್ ಪಡೆಯುವ ಮೂಲಕ ತಂಡದ ಗೆಲುವಿನ ರೂವಾರಿಯಾದರು. ಮಣವಟ್ಟೀರ ಸಂಗೀತಾ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

ಇದೇ ವೇಳೆ ರಿಪಬ್ಲಿಕ್ ಟಿವಿ ನೆಟ್‌ವರ್ಕ್ ಅಧ್ಯಕ್ಷ ಚೇರಂಡ ಕಿಶನ್ ಮಾದಪ್ಪ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಐಮುಡಿಯಂಡ ರಾಣಿ ಮಾಚಯ್ಯ, ಒಲಿಂಪಿಯನ್ ಅಶ್ವಿನಿ ನಾಚಪ್ಪ, ಚೆಕ್ಕೇರ ಕುಟುಂಬದ ಅಧ್ಯಕ್ಷ ಕಾಶಿ ಕಾಳಯ್ಯ, ಹಿರಿಯರಾದ ವಾಸು ಕುಟ್ಟಪ್ಪ, ಸೂರಿ ಅಯ್ಯಪ್ಪ, ಬಿಪಿನ್, ಚೆಕ್ಕೇರ ಕುಟುಂಬಸ್ಥರು ಇದ್ದರು. ಅರಮಣಮಾಡ ಕ್ರಿಕೆಟ್ ನಮ್ಮೆಯ ಸಮಾರೋಪದ ಅಂಗವಾಗಿ ಚೆಕ್ಕೇರ ಪಂಚಮ್ ಬೋಪಣ್ಣ ಮತ್ತು ತಂಡದ ಕೊಡವ ಸಂಗೀತ ನೈಟ್ಸ್ ಮತ್ತು ಡಿಜೆ ನೃತ್ಯ ಅರಮಣಮಾಡ ಕ್ರಿಕೆಟ್ ನಮ್ಮೆಯ ಅದ್ದೂರಿಯನ್ನು ಸಾಕ್ಷಿಕರಿಸಿತು. ಕೊಡವ ಸಂಗೀತ ನೈಟ್ಸ್ ನೆರೆದಿದ್ದವರ ಮನರಂಜಿಸಿತು.

ಚೆಕ್ಕೇರ ಮುಂದಿನ ಆತಿಥ್ಯ

ಕೊಡವ ಕೌಟುಂಬಿಕ ಕ್ರಿಕೆಟ್ ಟೂರ್ನಿಯ ಮುಂದಿನ ಬಾರಿಯ 23ನೇ ವರ್ಷದ ಆತಿಥ್ಯವನ್ನು ಚೆಕ್ಕೇರ ಒಕ್ಕ ಕೊಡವ ಕುಟುಂಬ ವಹಿಸಿ ಕೊಂಡಿತು. ಈ ಬಾರಿಯ ಟೂರ್ನಿಯನ್ನು ಯಶಸ್ವಿಯಾಗಿ ನಡೆಸಿದ ಅರಮಣ ಮಾಡ ಕುಟುಂಬಸ್ಥರಿಂದ ಚೆಕ್ಕೇರ ಕುಟುಂಬಸ್ಥರು ಧ್ವಜ ಸ್ವೀಕರಿಸಿದರು. ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಕೊಡವ ವಾಲಗದೊಂದಿಗೆ ಮೈದಾನಕ್ಕೆ ಶಿಸ್ತುಬದ್ಧವಾಗಿ ಆಗಮಿಸಿದ ಚೆಕ್ಕೇರ ಕುಟುಂಬದವರಿಗೆ ಧ್ವಜ ಹಸ್ತಾಂತರಿಸಲಾಯಿತು.

ಕುಶಾಲನಗರ ವ್ಯಾಪ್ತಿ ಭಾರಿ ಮಳೆ

ಮಡಿಕೇರಿ, ಮೇ 20–ಕೊಡಗು ಜಿಲ್ಲೆಯಾದ್ಯಂತ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಣೆ ಮಾಡಿರುವ ನಡುವೆಯೇ ಸೋಮವಾರ ಸಂಜೆ ವಿವಿಧ ಕಡೆಗಳಲ್ಲಿ ಭಾರಿ ಮಳೆಯಾದ ಬಗ್ಗೆ ವರದಿಯಾಗಿದೆ.



ಕುಶಾಲನಗರ ತಾಲೂಕು ವ್ಯಾಪ್ತಿಯಲ್ಲಿ ಭಾರಿ ಮಳೆಯಾಗಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಸಂಜೆ 5 ಗಂಟೆ ವೇಳೆಗೆ ಆರಂಭವಾದ ಮಳೆ ಅರ್ಧ ಗಂಟೆಗೂ ಅಧಿಕ ಕಾಲ ಎಡೆಬಿಡದೆ ಸುರಿಯಿತು. ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೇ ಗುಮ್ಮನಕೊಲ್ಲಿ ವ್ಯಾಪ್ತಿಯ ಚೌಡೇಶ್ವರಿ ಬಡಾವಣೆಯ ಕೆಲ ಮನೆಗಳ ಆವರಣಕ್ಕೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತು.

ಮಡಿಕೇರಿ ತಾಲೂಕಿನ ವಿವಿಧೆಡೆಯಲ್ಲೂ ಉತ್ತಮ ಮಳೆಯಾಗಿದೆ. ಸೋಮವಾರ ಬೆಳಗ್ಗೆಯಿಂದಲೇ ಮೋಡ ಕವಿದ ವಾತಾವರಣ ಕಂಡು ಬಂದಿದ್ದು, ಸಂಜೆ ವೇಳೆಗೆ ಮಳೆ ಸುರಿದು, ಚಳಿಯ ವಾತಾವರಣವಾಯಿತು.

ಕೊಡಗು ದಂತ ವೈದ್ಯಕೀಯ ಕಾಲೇಜಿನ ವಾರ್ಷಿಕೋತ್ಸವ



ಕೊಡಗು ದಂತ ವೈದ್ಯಕೀಯ ಕಾಲೇಜಿನ ವಾರ್ಷಿಕೋತ್ಸವದಲ್ಲಿ ನಡೆದ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ.

ವಿರಾಜಪೇಟೆ, ಮೇ 20–ವಿರಾಜಪೇಟೆ ಬಳಿಯ ಕೊಡಗು ದಂತ ವೈದ್ಯಕೀಯ ಕಾಲೇಜಿನ 25ನೇ ವಾರ್ಷಿಕೋತ್ಸವ ಅದ್ದೂರಿಯಾಗಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಮ್ಮತ್ತಿಯ ಆರ್‌ಐಹೆಚ್‌ಪಿ ಆಸ್ಪತ್ರೆಯ ಟ್ರಸ್ಟಿ ಡಾ.ಎಂ.ಎಂ.ಚೆಂಗಪ್ಪ ಭಾರತದಲ್ಲಿ ಆರಂಭದಿಂದಲೂ ದಂತ ವೈದ್ಯಕೀಯ ವೃತ್ತಿ ಬೆಳವಣಿಗೆಯಾಗಿದೆ. ಆದರೆ, ದಂತ ವೈದ್ಯಕೀಯ ವಿಜ್ಞಾನಿಗಳ ತರಬೇತಿ ಅತಿಮುಖ್ಯವಾಗಿದೆ. ಕೊಡಗು ದಂತ ವೈದ್ಯಕೀಯ ಕಾಲೇಜಿನ ಡೀನ್ ಮತ್ತು ವೈದ್ಯರು ಹಾಗೂ ವಿದ್ಯಾರ್ಥಿಗಳ ಕಾರ್ಯ ಸಾಧನೆ ಶ್ಲಾಘನೀಯ ಎಂದರು.

ಕಾಲೇಜಿನ ಡೀನ್ ಸುನೀಲ್ ಮುದ್ದಯ್ಯ ಮಾತನಾಡಿ, ಈ ದಂತ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ವಿವಿಧ ದೇಶಗಳಲ್ಲಿ ವೈದ್ಯ ವಿಜ್ಞಾನಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಾಂಶುಪಾಲ ಡಾ.ಕೆ.ಸಿ.ಪೊನ್ನಪ್ಪ ಕಾಲೇಜಿನ ವಾರ್ಷಿಕ ವರದಿ ಮಂಡಿಸಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಎ.ಸಿ.ಜಿಲನಾ ಸ್ವಾಗತಿಸಿದರು. ಕಾರ್ಯದರ್ಶಿ ಸೂಸನ್ನ ಪರಕ್ಕಟ್ಟು ವಂದಿಸಿದರು. 2023–24ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ವಿಜೇತರಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಇದೇ ವೇಳೆ ಕಾಲೇಜಿನ ಪ್ರಾಧ್ಯಾಪಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಲೆ.ಜ.ಡಾ.ಬಿಎನ್‌ಬಿಎಂ ಪ್ರಸಾದ್‌ಗೆ ಸನ್ಮಾನ



ಸುಂಟಿಕೊಪ್ಪ, ಮೇ 20– ಮೈಸೂರು ಮೆಡಿಕಲ್ ಕಾಲೇಜಿನ ಶತಮಾನೋತ್ಸವದಲ್ಲಿ ಕಾಲೇಜಿನ ಹಿರಿಯ ವಿದ್ಯಾರ್ಥಿಯಾದ ಮೂಲತಃ ಕೊಡಗಿನವರಾದ ಲೆ.ಜ.ಡಾ. ಬಿಎನ್‌ಬಿಎಂ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು.

ಡಾ.ಪ್ರಸಾದ್ ಈ ಕಾಲೇಜಿನಿಂದ 1977ರಲ್ಲಿ ವೈದ್ಯರಾಗಿ ಹೊರಹೊಮ್ಮಿ ಭಾರತೀಯ ಭೂಸೇನೆ ಸೇರಿದ್ದರು. ಬಳಿಕ ಸೇನೆಯಲ್ಲಿ ವಿವಿಧ ಜವಾಬ್ದಾರಿಗಳೊಂದಿಗೆ ಹಂತ ಹಂತವಾಗಿ ಪದೋನ್ನತಿ ಹೊಂದಿ ಭಾರತೀಯ ರಕ್ಷಣಾ ಪಡೆಗಳ ವೈದಕೀಯ ವಿಭಾಗದ ಮಹಾನಿರ್ದೇಶಕರಾಗಿ, ಮುಖ್ಯ ಸಮಾಲೋಚಕರಾಗಿ ಹಾಗೂ ರಾಷ್ಟ್ರಪತಿಗಳ ಗೌರವ ಸರ್ಜನ್ ಆಗಿ ಸೇವೆ ಸಲ್ಲಿಸಿದ್ದರು. ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ವಿವಿಧ ರಾಷ್ಟ್ರ ಮಟ್ಟದ ಪ್ರಶಸ್ತಿ ಮತ್ತು ಗೌರವ ಪದವಿಗಳಿಗೆ ಪಾತ್ರರಾಗಿರುವ ಲೆ.ಜ.ಡಾ.ಪ್ರಸಾದ್ ತಮ್ಮ ನಿವೃತ್ತಿಯ ನಂತರ ಉತ್ತರ ಪ್ರದೇಶದ ವೈದಕೀಯ ಶಿಕ್ಷಣ ಇಲಾಖೆಯ ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಬೆಂಗಳೂರಿನ ಚಿನ್ಮಯ ಮಿಷನ್ ಆಸ್ಪತ್ರೆಯಲ್ಲಿ ಹಿರಿಯ ತಜ್ಞ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಡಾ.ಪ್ರಸಾದ್ ಅವರು ಮಡಿಕೇರಿ ತಾಲೂಕಿನ ಬಿಳಿಗೇರಿ ಗ್ರಾಮದ ನಾರಾಯಣ್ ಭಟ್ ಮತ್ತು ಲಕ್ಷ್ಮಮ್ಮ ದಂಪತಿ ಪುತ್ರರಾಗಿದ್ದಾರೆ. ಇದೇ ವೇಳೆ ಕಾಲೇಜಿನ ನಿರ್ದೇಶಕರಾದ ಡಾ.ದಾಕ್ಷಾಯಿಣಿ ಮತ್ತಿತರರು ಇದ್ದರು.

ರಾಷ್ಟ್ರೀಯ ವ್ಯಕ್ತಿಯಾಗಿ ಬೆಳೆದ ಶ್ರೀನಿವಾಸಪ್ರಸಾದ್

ನುಡಿನಮನ ಕಾರ್ಯಕ್ರಮದಲ್ಲಿ ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿ



ವಿ.ಶ್ರೀನಿವಾಸಪ್ರಸಾದ್ ಅವರು ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಎಂದಿಗೂ ರಾಜಿ ಮಾಡಿಕೊಳ್ಳಲಿಲ್ಲ. ಜನರ ಸಂಕಷ್ಟಗಳಿಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದರು. ಅಸಮಾನತೆ ತೊರೆದು ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದರು. ಅಂಬೇಡ್ಕರ್ ಅವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಸ್ವಾಭಿಮಾನಿಯಾಗಿ ಬೆಳೆದರು.
-ಡಾ.ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಇಲಾಖೆ ಸಚಿವ

ಚಾಮರಾಜನಗರ, ಮೇ 20–ಸಂಸದ ವಿ.ಶ್ರೀನಿವಾಸಪ್ರಸಾದ್ ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಬಂದವರಲ್ಲ. ಸ್ವತಃ ವ್ಯಕ್ತಿತ್ವದಿಂದ ಪ್ರಬುದ್ಧ ರಾಜಕಾರಣಿಯಾಗಿ, ಸಾಮಾನ್ಯ ಕುಟುಂಬದಿಂದ ಬಂದು ರಾಷ್ಟ್ರೀಯ ಮಟ್ಟದ ವ್ಯಕ್ತಿಯಾಗಿ ಬೆಳೆದರು ಎಂದು ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವಿ.ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗದ ವತಿಯಿಂದ ನಡೆದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ನುಡಿನಮನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಸಚಿವರಾಗಿ ಒಳ್ಳೆಯ ಚಿಂತನೆ, ಅವಲೋಕನ ಮಾಡುತ್ತಿದ್ದರು. ಎಲ್ಲಾ ಪಕ್ಷದ ನಾಯಕರ ಒಡನಾಟ, ನಿಕಟವಾದ ಬಾಂಧವ್ಯ ಹೊಂದಿದ್ದರು. ಹಾಗಾಗಿ ಅವರು ರಾಜಕೀಯದಲ್ಲಿ ಪ್ರಭುತ್ವ ಸಂಪಾದಿಸಲು ಸಾಧ್ಯವಾಯಿತು ಎಂದರು.

ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ಸ್ಮರಿಸುತ್ತಿದ್ದ ಪ್ರಸಾದ್, ಅಂಬೇಡ್ಕರ್ ಅವರು, ಸಂವಿಧಾನವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ವಿಚಾರವಂತರಾಗಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಂಬೇಡ್ಕರ್ ಅವರ ಚಿಂತನೆಗಳನ್ನು ತಿಳಿಸುವ ಪ್ರಯತ್ನ ಮಾಡುತ್ತಿದ್ದರು ಎಂದು ತಿಳಿಸಿದರು.

ಪ್ರಸಾದ್ ಅವರು ನಮ್ಮನ್ನು ಭೌತಿಕವಾಗಿ ಅಗಲಿರಬಹುದು. ಆದರೆ, ಮೈಸೂರು ಸೇರಿದಂತೆ ರಾಜ್ಯ ಇತರೆ ಕಡೆಗಳಲ್ಲಿ ಅವರ ನುಡಿನಮನ, ಶ್ರದ್ಧಾಂಜಲಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಲೇ ಇವೆ. ಇದು ಅವರ ಸಾಧನೆಗಳನ್ನು ತೋರಿಸುತ್ತದೆ. ಅವರು ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅವರಲ್ಲಿ ಅಧ್ಯಯನ ಶೀಲತೆ ಬಹಳವಿತ್ತು. ಅವರು ಸಂಸದರು, ಸಚಿವರಾಗಿದ್ದರು ಕೂಡ ಬಹಳ ಕೃತಿಗಳಗಳ ಅಧ್ಯಯನ ಮಾಡುವ ಒಳ್ಳೆಯ ಹವ್ಯಾಸ ಇಟ್ಟುಕೊಂಡಿದ್ದರು. ಒಳ್ಳೆಯ ವಿಷಯ ಗ್ರಹಿಸುವ ವ್ಯಕ್ತಿತ್ವ ಹೊಂದಿದ್ದರು ಎಂದರು.

ಮೈಸೂರಿನ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶಸ್ವಾಮೀಜಿ ಮಾತನಾಡಿ, ವಿ.ಶ್ರೀನಿಪ್ರಸಾದ್ ಅವರ ಸ್ವಚ್ಛ ರಾಜಕಾರಣವನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕಿದೆ. ಕೆಲವರು ಮನೆಯಿಂದಲೇ ಶಾಸಕ, ಸಂಸದ ಆಗುತ್ತಾರೆ. ಆದರೆ, ಹೋರಾಟದ ಮೂಲಕ ಪ್ರಸಾದ್ ಅಧಿಕಾರ ಪಡೆದರು. ಅವರ ಸ್ವಾಭಿಮಾನದ ಕಿಚ್ಚನ್ನು ದೀಪದಂತೆ ಬೆಳಗಿಸಬೇಕಿದೆ ಎಂದು ತಿಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಮಾತನಾಡಿ, ವಿ.ಶ್ರೀನಿವಾಸಪ್ರಸಾದ್ ಅವರು ನಮ್ಮಿಂದ ಶಾರೀರಿಕವಾಗಿ ಇಲ್ಲದೆ ಇರಬಹುದು. ಆದರೆ, ಅವರ ಸಾಧನೆ ಸೈದ್ಧಾಂತಿಕವಾಗಿ ಅಮರವಾಗಿ ಉಳಿದಿದ್ದಾರೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕ ಎ.ಆರ್.ಕೃಷ್ಣಮೂರ್ತಿ ಜಿಪಂ ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್ ಮಾತನಾಡಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಭಾಗ್ಯಲಕ್ಷ್ಮೀ ವಿ.ಶ್ರೀನಿವಾಸಪ್ರಸಾದ್, ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಮಾಜಿ ಶಾಸಕ ಹರ್ಷವರ್ಧನ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ತಾಪಂ ಮಾಜಿ ಅಧ್ಯಕ್ಷರಾದ ಎಚ್.ವಿ.ಚಂದ್ರು, ಬಿ.ಕೆ.ರವಿಕುಮಾರ್, ಜಿಪಂ ಮಾಜಿ ಸದಸ್ಯರಾದ ಕೆ.ಪಿ.ಸದಾಶಿವಮೂರ್ತಿ, ಶಿವಕುಮಾರ್, ಪು.ಶ್ರೀನಿವಾಸ ನಾಯಕ, ಸಿ.ಎ.ಮಹದೇವಶೆಟ್ಟಿ, ಡಾ.ಮೋಹನ್, ವಿ.ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗದ ನಲ್ಲೂರು ಸೋಮೇಶ್ವರ್, ಶಿವಸ್ವಾಮಿ, ನಲ್ಲೂರು ಮಹದೇವಸ್ವಾಮಿ, ನಾಗಯ್ಯ, ಶಿವರಾಜ್, ಮೋಹನ್, ಪ್ರತಾಪ್ ಇತರರು ಹಾಜರಿದ್ದರು.

ರಾಜ್ಯ ಸರ್ಕಾರದಿಂದ ಶೂನ್ಯ ಅಭಿವೃದ್ಧಿ: ನಿರಂಜನ್‌ಕುಮಾರ್



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿದರು.

ಚಾಮರಾಜನಗರ, ಮೇ 20–ರಾಜ್ಯ ಕಾಂಗ್ರೆಸ್ ಅಸಮರ್ಥ ಸರ್ಕಾರವಾಗಿದ್ದು, ಶೂನ್ಯ ಅಭಿವೃದ್ಧಿ ಸರ್ಕಾರವಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 11 ತಿಂಗಳಲ್ಲಿ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ. ರಾಜ್ಯ ಸರ್ಕಾರ ಜನರನ್ನು ಭಯದ ವಾತಾವರಣದಲ್ಲಿ ಬದುಕುವ ದಾರುಣ ಸ್ಥಿತಿಗೆ ತಲುಪಿಸಿದೆ. ಪದೇ ಪದೆ ಮಹಿಳೆಯರ ಮೇಲೆ ದೌರ್ಜನ್ಯ, ಹಲ್ಲೆ, ಹತ್ಯೆ ಅವ್ಯಾಹತವಾಗಿ ನಡೆಯುತ್ತಿದೆ. ಸರ್ಕಾರದ ಅಸಮರ್ಥ ಆಡಳಿತ ಮತ್ತು ಕಾನೂನು ಸುವ್ಯವಸ್ಥೆಯನ್ನು ಹೇಗೆ ಹತೋಟಿಗೆ ತರಬೇಕೆಂಬ ಸಾಮರ್ಥ್ಯವೇ ಇಲ್ಲದ ಗೃಹ ಸಚಿವರು ಇದ್ದಾರೆ ಎಂದು ದೂರಿದರು.

ಪ್ರತಿಯೊಂದು ವಿಚಾರದಲ್ಲೂ ರಾಜಕೀಯ ಲಾಭದ ಹುನ್ನಾರ, ಮತಬ್ಯಾಂಕ್‌ನಿಂದ ಇಂದು ಗೂಂಡಾ ರಾಜ್ಯ ಮತ್ತು ಕೊಲೆಗಡುಕರ ರಾಜ್ಯವಾಗಿ ಪರಿವರ್ತನೆಗೊಂಡಿದೆ. ಅಂಕಿಅಂಶದ ಪ್ರಕಾರ, ಸಿಟಿ ಮತ್ತು ನ್ಯಾಷನಲ್ ಕ್ರೈಮ್ ಬ್ಯೂರೋ ಪ್ರಕಾರ ಕಳೆದ 11 ತಿಂಗಳಲ್ಲಿ ಶೇ.60ಕ್ಕಿಂತ ಹೆಚ್ಚು ಕ್ರಿಮಿನಲ್ ಚಟುವಟಿಕೆಗಳು ಹೆಚ್ಚಾಗಿವೆ. ಇನ್ನೂ ಮಹಿಳೆಯರ ಮೇಲಿನ ಕೃತ್ಯಗಳು ಜಾಸ್ತಿಯಾಗಿವೆ. ಇದಕ್ಕೆ ರಾಜ್ಯ ಸರ್ಕಾರದ ವೈಫಲ್ಯವಾಗಿದೆ ಎಂದರು.

ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ: ಗೃಹಲಕ್ಷ್ಮಿ ಸಮರ್ಪಕವಾಗಿ ನಿರೀಕ್ಷಿತ ಮಟ್ಟದಲ್ಲಿ ಮಹಿಳೆಯರಿಗೆ ತಲುಪಿಲ್ಲ. ಗೃಹಜ್ಯೋತಿ ಯೋಜನೆಯಡಿ 200 ಯೂನಿಟ್ ವರೆಗೂ ಉಚಿತ ವಿದ್ಯುತ್ ಎಂದು ಹೇಳಿ ಏಕಾಏಕಿ ವಿದ್ಯುತ್ ದರವನ್ನು ಹೆಚ್ಚಿಸಲಾಗಿದೆ. ರೈತರಿಗೆ ಯಾವುದೇ ಬ್ಯಾಂಕ್‌ಗಳಲ್ಲಿ ಕೃಷಿ ಸಾಲ ನೀಡದ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯಾರ್ಥಿಗಳ ವ್ಯಾಸಂಗಕ್ಕೂ ತೊಂದರೆ ಉಂಟಾಗಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಜಿಲ್ಲಾ ವಕ್ತಾರ ಕಾಡ ಹಳ್ಳಿ ಕುಮಾರ್, ಮಾಧ್ಯಮ ಪ್ರಮುಖ್ ವೀರೇಂದ್ರ, ವೇಣುಗೋಪಾಲ್ ಹಾಜರಿದ್ದರು.

ಮೆಂದಾರೆ ಗ್ರಾಮಸ್ಥರ ಸಮಸ್ಯೆ ಆಲಿಸಿದ ನರೇಂದ್ರ



ಮಹದೇಶ್ವರಬೆಟ್ಟದಲ್ಲಿ ಸೋಮವಾರ ಮೆಂದಾರೆ ಗ್ರಾಮಸ್ಥರನ್ನು ಭೇಟಿ ಮಾಡಿದ ಮಾಜಿ ಶಾಸಕ ಆರ್.ನರೇಂದ್ರ ಸಮಸ್ಯೆ ಆಲಿಸಿದರು.

ಹನೂರು, ಮೇ 20–ತಾಲೂಕಿನ ಮಲೆಮಹದೇಶ್ವರಬೆಟ್ಟದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೆಂದಾರೆ ಗ್ರಾಮಸ್ಥರನ್ನು ಮಾಜಿ ಶಾಸಕ ಆರ್.ನರೇಂದ್ರ ಸೋಮವಾರ ಭೇಟಿ ಮಾಡಿ, ಸಮಸ್ಯೆ ಆಲಿಸಿದರು.

ಮಹದೇಶ್ವರಬೆಟ್ಟದ ಜಿಪಂ ಮಾಜಿ ಸದಸ್ಯ ಈಶ್ವರ್ ಅವರ ಮನೆಯಲ್ಲಿ ಭೇಟಿ ಮಾಡಿ ಆರ್.ನರೇಂದ್ರ ಅವರಿಗೆ ಗ್ರಾಮಸ್ಥರು, ನಾವು ಸರ್ಕಾರದ ಮಕ್ಕಳು. ನಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಹೋದಾಗ ಇಂಡಿಗನತ್ತ ಗ್ರಾಮಸ್ಥರು ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. ಹಲ್ಲೆಗೊಳಗಾಗಿ ಸುಮಾರು ಐದು ದಿನ ಮಹದೇಶ್ವರಬೆಟ್ಟ ಹಾಗೂ ಗ್ರಾಮದಲ್ಲೇ ಚಿಕಿತ್ಸೆ ಪಡೆದಿದ್ದೇವೆ. ಇನ್ನೂ ನೋವು ಕಡಿಮೆಯಾಗಿಲ್ಲ ಎಂದು ನೋವು ತೋಡಿಕೊಂಡರು.

ನಮಗೆ ಭಯವಾಗುತ್ತಿದೆ. ನಮ್ಮ ಗ್ರಾಮದಲ್ಲಿ ನಮ್ಮ ಸಮಾಜದವರು ಕಡಿಮೆ ಜನರಿದ್ದೇವೆ. ಮತ್ತೆ ಗಲಾಟೆ ಆಗುವ ಭಯವಿದೆ. ಆದ್ದರಿಂದ ನಮಗೆ ಸೂಕ್ತ ರಕ್ಷಣೆ ನೀಡಬೇಕು. ನಮ್ಮ ಸಮಾಜದವರು ಇರುವ ಪಾಲಾರ್‌ಗೆ ಸ್ಥಳಾಂತರ ಮಾಡುವಂತೆ ಮನವಿ ಮಾಡಿದರು. ನಂತರ ಮಾಜಿ ಶಾಸಕ ಆರ್.ನರೇಂದ್ರ ಮಾತನಾಡಿ, ಇಂಡಿಗನತ್ತ ಗ್ರಾಮದ ಮತಗಟ್ಟೆ ಧ್ವಂಸ ಪ್ರಕರಣ ಆಕಸ್ಮಿಕವಾಗಿ ನಡೆದಿದೆ. ಅವರು ಮಾಡಿದ ತಪ್ಪಿಗೆ ಈಗಾಗಲೇ ಶಿಕ್ಷೆ ಅನುಭವಿಸಿದ್ದಾರೆ. ಮತ್ತೆ ನಿಮ್ಮ ಜೊತೆ ಗಲಾಟೆ ಮಾಡಲು ಬರುವುದಿಲ್ಲ. ನೀವು ಧೈರ್ಯದಿಂದ ಇರಿ. ನಿಮ್ಮ ಜೊತೆ ನಾನಿದ್ದೇನೆ. ನಿಮಗೆ ಸದಾ ಬೆಂಬಲವಾಗಿರುತ್ತೇನೆ. ಲೋಕಸಭಾ ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ಜಿಲ್ಲಾ ಉಸ್ತುವಾರಿ ಸಚಿವರನ್ನು ಕರೆತಂದು, ನಿಮ್ಮ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನೀವು ಸ್ಥಳಾಂತರವಾಗಲೇಬೇಕೆಂದರೆ, ನಿಮ್ಮ ಮನವಿಯನ್ನು ಸರ್ಕಾರಕ್ಕೆ ಕಳುಹಿಸಿ ಒಪ್ಪಿಗೆ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳೋಣ ಎಂದು ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಈಶ್ವರ್, ಮೆಂದಾರೆ ಗ್ರಾಮಸ್ಥರು ಹಾಜರಿದ್ದರು.

ಮೇ 23ರಂದು ಸ್ಕಂದಗಿರಿಯಲ್ಲಿ ರಥೋತ್ಸವ



ಗುಂಡ್ಲುಪೇಟೆ, ಮೇ 20– ತಾಲೂಕಿನ ಪುರಾಣ ಪ್ರಸಿದ್ಧ ಪಾರ್ವತಿ ಬೆಟ್ಟ ಎಂದೇ ಕರೆಯುವ ಸ್ಕಂದಗಿರಿಯಲ್ಲಿ ಪ್ರತಿವರ್ಷದಂತೆ ಬುದ್ಧ ಪೂರ್ಣಿಮೆಯ ದಿನವಾದ ಮೇ 23ರಂದು ಜಾತ್ರೆ ನಡೆಯಲಿದೆ.

ತಾಲೂಕಿನ ಕಂದೇಗಾಲ ಸಮೀಪದ ಬೆಟ್ಟದ ಮೇಲಿರುವ ಈ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದರೂ ಬೆಟ್ಟದ ಸುತ್ತಮುತ್ತಲಿನ ಗ್ರಾಮಸ್ಥರೇ ಭಕ್ತಿಯಿಂದ ರಥೋತ್ಸವವನ್ನು ನಡೆಸುತ್ತಾರೆ. ಜಾತ್ರೆಯ ಅಂಗವಾಗಿ ದೇವಾಲಯಕ್ಕೆ ಸುಣ್ಣ ಬಣ್ಣ ಬಳಿಯಲಾಗಿದೆ. ಮೇ 21ರಂದು ತ್ರಯೋದಶಿ, ವೈಶಾಖ ಮಾಸದಲ್ಲಿ ಅಂಕುರಾರ್ಪಣೆ, ಧ್ವಜಾರೋಹಣ ಪ್ರಕಾರೋತ್ಸವ, ಮೇ 22ರಂದು ಚತುರ್ದಶಿ ವೈಶಾಖ ಶುಕ್ಲ ದಿನ ಗಿರಿಜಾ ಕಲ್ಯಾಣ ಮಹೋತ್ಸವ ನಡೆಲಿದೆ. ವೈಶಾಖ ಶುಕ್ಲ ಪೂರ್ಣಿಮೆಯ ದಿನವಾದ ಮೇ 23ರಂದು ಶಿವಯಾಗ, ಪೂಜಾ ಬಲಿ, ಪ್ರದಾನ (ಸ್ವಾತಿ ನಕ್ಷತ್ರ) ಶಿವಾಗಮ, ಶಾಸ್ತ್ರ ರೀತ್ಯಾ ಪೂಜಾ ಕಾರ್ಯ ನಡೆಯಲಿದೆ. ಮಧ್ಯಾಹ್ನ 12.30 ರಿಂದ 1.30ರ ಒಳಗೆ ಪಾರ್ವತಾಂಬ ಮತ್ತು ಸೋಮೇಶ್ವರಸ್ವಾಮಿಯ ದಿವ್ಯ ರಥೋತ್ಸವ ಭಕ್ತರ ಸಮ್ಮುಖದಲ್ಲಿ ನೆರವೇರಿಸಲಾಗುವುದು.

ಇದೇ ವೇಳೆ ಹರಕೆ ಹೊತ್ತವರು ಹಾಗೂ ನವದಂಪತಿಗಳು ರಥಕ್ಕೆ ಹಣ್ಣು ಜವನ ಎಸೆದು ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಲಿದ್ದಾರೆ. ನಂತರ ಹಂಸ ವಾಹನೋತ್ಸವ, ದೀಪಾರಾಧನೆ, ಮಹಾಪ್ರಸಾದ ನಡೆಯಲಿದೆ.

ದಾಸೋಹ: ರಥೋತ್ಸವದ ದಿನ ಕಂದಗಾಲ, ಶಿಂಡನಪುರ, ಕಂದಗಾಲ ಹೊಸೂರು, ಬೆಟ್ಟಹಳ್ಳಿ ಗ್ರಾಮಸ್ಥರು ಸೇರಿ ದಾಸೋಹ ಏರ್ಪಡಿಸಿದ್ದಾರೆ. ಪ್ರಯಾಣಿಕರ ಅನುಕೂಲಕ್ಕಾಗಿ ರಾಜ್ಯ ರಸ್ತೆ ಸಾರಿಗೆಯ ಬಸ್ ಸೌಲಭ್ಯ ಒದಗಿಸಲಾಗುವುದು.

ಬಾಲ ಪುರಸ್ಕಾರ ಪ್ರಶಸ್ತಿಗೆ ಅರ್ಜಿ

ಚಾಮರಾಜನಗರ, ಮೇ 20– ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ 2025ನೇ ಸಾಲಿನ ರಾಷ್ಟ್ರೀಯ ಪ್ರಧಾನಮಂತ್ರಿ ಬಾಲ ಪುರಸ್ಕಾರ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಜಿಲ್ಲೆಯ ಧೈರ್ಯ ಮತ್ತು ಸಾಹಸದಿಂದ ಇತರರನ್ನು ರಕ್ಷಿಸಿದ ಹಾಗೂ ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಸಂರಕ್ಷಣೆ, ಕಲೆ ಮತ್ತು ಸಂಸ್ಕೃತಿ ಹಾಗೂ ನೂತನ ಆವಿಷ್ಕಾರಗಳೊಂದಿಗೆ ಉತ್ತಮ ಸಾಧನೆ ಮಾಡಿದ 5 ವರ್ಷ ಮೇಲ್ಪಟ್ಟ ಹಾಗೂ 18 ವರ್ಷದೊಳಗಿನ ಮಕ್ಕಳು ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ವೆಬ್‌ಸೈಟ್ https://awards.gov.in ಮೂಲಕ ಜುಲೈ 31ರೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ನಗರದ ಜಿಲ್ಲಾಡಳಿತ ಭವನದ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ದೂ.ಸಂ: 08226–222354 ಅನ್ನು ಸಂಪರ್ಕಿಸುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಚಲುವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಜಾತಿಗಣತಿ ಜಾರಿ

ಖರ್ಚು ಮಾಡಿದ್ದೇವೆ ಎಂದು ಅಂಕಿ-ಅಂಶಗಳ ಸಮೇತ ವಿವರಿಸಿದರು. ಹಿಂದುಳಿದವರ ಮೀಸಲಾತಿ ಕಿತ್ತು ಮುಸ್ಲಿಮರಿಗೆ ಕೊಡ್ತಾರೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತೊಂದು ಸುಳ್ಳು ಹೇಳುತ್ತಿದ್ದಾರೆ, ಇದು ಅಪ್ಪಟ ಸುಳ್ಳು. ಚುನಾವಣೆ ಯಲ್ಲಿ ಜನರನ್ನು ರೊಚ್ಚಿಗೆಬ್ಬಿಸಿ, ದಿಕ್ಕು ತಪ್ಪಿಸುವುದನ್ನು ಬಿಜೆಪಿ ಮತ್ತು ಮೋದಿ ನಿಲ್ಲಿಸಬೇಕು, ಜನ ಬಿಜೆಪಿಯ ಸುಳ್ಳುಗಳ ಬಗ್ಗೆ ಎಚ್ಚೆತ್ತುಕೊಂಡಿದ್ದಾರೆ ಎಂದರು. ಆರೋಗ್ಯ, ಶಿಕ್ಷಣ, ನೀರಾವರಿ, ಸಮಾಜ ಕಲ್ಯಾಣ, ಕೃಷಿ ಸೇರಿ ಎಲ್ಲಾ ಇಲಾಖೆಗಳಲ್ಲೂ ಅಭಿವೃದ್ಧಿ ಕೆಲಸಗಳು ಯಥೇಚ್ಛವಾಗಿ ನಡೆಯುತ್ತಿವೆ ಎಂದು ವಿವರಿಸಿದರು.

ಬಿಜೆಪಿಯ ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿ ನರಳುತ್ತಿದ್ದ ಮಧ್ಯಮ ವರ್ಗ ಮತ್ತು ಬಡವರ ಕೊಳ್ಳುವ ಶಕ್ತಿ ಹೆಚ್ಚಿಸಲು ಗ್ಯಾರಂಟಿಗಳನ್ನು ಜಾರಿ ಮಾಡಿದ್ವಿ. ಪ್ರಮಾಣವಚನ ಸ್ವೀಕರಿಸಿದ ದಿನದಿಂದಲೇ ಚುನಾವಣೆಯಲ್ಲಿ ಕೊಟ್ಟ ಆಶ್ವಾಸನೆ, ಗ್ಯಾರಂಟಿಗಳ ಜಾರಿಗೆ ಕ್ರಮ ತೆಗೆದುಕೊಂಡು ಐದಕ್ಕೆ ಐದೂ ಗ್ಯಾರಂಟಿ ಜಾರಿ ಮಾಡಿದ್ದೇವೆ ಎಂದ ಸಿದ್ದರಾಮಯ್ಯ ನಮ್ಮ ಕಾಲದಲ್ಲಿ ಭ್ರಷ್ಟಾಚಾರ ಸಂಪೂರ್ಣವಾಗಿ ನಿಂತಿದೆ ಎಂದು ಹೇಳೋದಿಲ್ಲ, ಆದರೆ, ಇದರ ಪ್ರಮಾಣ ಕಡಿಮೆ ಮಾಡಲು ನಿಷ್ಠುರವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ, 40% ಕಮಿಷನ್ ಆರೋಪ ಕುರಿತ ತನಿಖೆ ಶುರು ಮಾಡಿದ್ದೇವೆ ಎಂದರು.

ದೇವಸ್ಥಾನಗಳ ಹಣ ಕಿತ್ತುಕೊಳ್ಳುತ್ತಿದ್ದಾರೆ ಎಂದು ಸುಳ್ಳು ಪ್ರಚಾರ ಮಾಡಿದರು, ಆದರೆ ಗ್ರಾಮೀಣ ಭಾಗದ ದೇವಸ್ಥಾನಗಳ ಅಭಿವೃದ್ಧಿಗೆ ನಾವು ಮುಂದಾಗಿದ್ದೇವೆ ಎನ್ನುವ ಸತ್ಯ ಮರೆಮಾಚಿ ಅಪಪ್ರಚಾರ ಮಾಡುತ್ತಿದ್ದಾರೆ. ನೇಹಾ ಕೊಲೆ ಪ್ರಕರಣದ ಆರೋಪಿ ಬಂಧಿಸಲಾಗಿ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪನೆ ಆಗಿದೆ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಕೊಲೆಗಳ ಪ್ರಮಾಣ ಕಡಿಮೆ ಆಗಿದೆ, ಅಂಕಿ ಅಂಶಗಳಗಿಂತ ಸಮಾಜದ ಸ್ವಾಸ್ಥ್ಯ ಮುಖ್ಯ, ಈ ಹಿನ್ನೆಲೆಯಲ್ಲಿ ಅಪರಾಧ ತಡೆಗಟ್ಟಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ, ಕರ್ತವ್ಯಲೋಪ ಎಸಗಿದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಕ್ರಮ ಕೈಗೊಳ್ಳಲಾಗಿದೆ ಎಂದರು.

ರಾಜ್ಯ ಭೀಕರ ಬರಕ್ಕೆ ತುತ್ತಾದಾಗಲೂ ರಾಜ್ಯದ ಪಾಲಿನ ಬರ ಪರಿಹಾರವನ್ನು ಕೇಂದ್ರ ಕೊಡಲಿಲ್ಲ, ನಾವು ನಮ್ಮ ಪಾಲು ಕೇಳಲು ಹಲವು ಪದೇ ಕೇಂದ್ರಕ್ಕೆ ಹೋಗಿ ಮನವಿ ಮಾಡಿದರೂ ಕೊಡಲಿಲ್ಲ, ನಾನೇ ಪ್ರಧಾನಿ ಮತ್ತು ಅಮಿತ್ ಷಾ ಅವರಿಗೆ ಮನವಿ ಕೊಟ್ಟರೂ ಪ್ರಯೋಜನ ಆಗಲಿಲ್ಲ, ಅದ್ದರಿಂದ ಸುಪ್ರೀಂಕೋರ್ಟ್ ಮೊರೆ ಹೋಗಬೇಕಾಯಿತು. ಕೇಂದ್ರದ ಅಸಹಕಾರ ನಡುವೆಯೂ ನಾವು ರಾಜ್ಯದ ಜನತೆಯ ಕೈ ಬಿಡಲಿಲ್ಲ, ಪರಿಹಾರ ಕೊಟ್ಟಿವೆ ಎಂದರು. ಬಿಜೆಪಿಯ ದೇವರಾಜೇಗೌಡ ಅವರೇ ಮೊದಲಿಗೆ ಪತ್ರಿಕಾಗೋಷ್ಠಿ ನಡೆಸಿದ್ದರು, ಅತ್ಯಾಚಾರಕ್ಕೆ ಒಳಗಾದವರು ದೂರು ಕೊಟ್ಟರು, ಆರು ತಿಂಗಳ ಮೊದಲೇ ಬಿಜೆಪಿಗೆ ವಿಷಯ ಗೊತ್ತಿತ್ತು, ಆದರೂ ಪ್ರಜ್ವಲ್ ಗೆ ಎನ್‌ಡಿಎ ಟಿಕೆಟ್ ನೀಡಿತು, ಮೋದಿ ಬಂದು ಪ್ರಜ್ವಲ್ ಗೆಲ್ಲಿಸಲು ಭಾಷಣ ಮಾಡಿದರು ಎಂದು ಟೀಕಿಸಿದರು.

ಗೌರವವಿದ್ದರೆ ಎಸ್‌ಐಟಿಗೆ ಶರಣಾಗು

ಕಾರಣಕರ್ತರಾದವರು ಒಬ್ಬರು, ಇದನ್ನು ಜಗಜ್ಜಾಹೀರುಗೊಳಿಸಿ ಹೆಣ್ಣು ಮಕ್ಕಳು ನೋವನ್ನು ಅನುಭವಿಸುವಂತೆ ಮಾಡಿದ್ದು ಯಾರೋ. ಇದನ್ನು ಬಹಿರಂಗ ಪಡಿಸಿದ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಶಿವರಾಮೇಗೌಡ ಸೇರಿದಂತೆ ಕಾರಣಕರ್ತರ ವಿರುದ್ಧ ಎಸ್‌ಐಟಿ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಒತ್ತಾಯಿಸಿದರು.

ನಾನು ಗೌಡರ ಕುಟುಂಬದವನೇ ಆದರೂ ನಮ್ಮ ನಾಲ್ಕು ಸಹೋದರರು ಯಾರು ಏನು ಮಾಡುತ್ತಾರೆ ಎಂಬುದು ಇತರರಿಗೆ ಗೊತ್ತಿರುವುದಿಲ್ಲ, ಪ್ರಜ್ವಲ್‌ಗೂ ನಮಗೂ ಹೆಚ್ಚಿನ ಸಂಪರ್ಕವೂ ಇರಲಿಲ್ಲ. ಆದರೂ ಕುಟುಂಬದವನಾಗಿ ಎಸ್‌ಐಟಿ ಮುಂದೆ ಶರಣಾಗುವಂತೆ ಪ್ರಜ್ವಲ್‌ಗೆ ಕಿವಿಮಾತು ಹೇಳುತ್ತೇನೆ ಎಂದು ಅವರು ಹೇಳಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್, ಮಾಜಿ ಸಂಸದ ಶಿವರಾಮೇಗೌಡ ಹಾಗೂ ವಕೀಲ ದೇವರಾಜೇಗೌಡ ಅವರ ನಡುವೆ ನಡೆದಿರುವ ಸಂಭಾಷಣೆ ಬಹಿರಂಗಗೊಂಡ ನಂತರ ತುರ್ತು ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿದ ಕುಮಾರಸ್ವಾಮಿ, ಪ್ರಜ್ವಲ್ ಪ್ರಕರಣ ಕುಟುಂಬವನ್ನು ಇಕ್ಕಟ್ಟಿಗೆ ಸಿಲುಕಿಸಿದೆ ಎಂದು ಅಸಮಾಧಾನ ಹೊರಹಾಕಿದರು.

ದೊಡ್ಡಗೌಡರ ಕುಟುಂಬದಲ್ಲಿ ಆತಂಕದ ಛಾಯೆ ಆವರಿಸಿದೆ. ಇದರಿಂದ ನೊಂದ ದೇವೇಗೌಡರು ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದರು, ನಾನು ಅದನ್ನು ತಡೆದಿದ್ದೇನೆ ಉದ್ದೇಶ ಪೂರ್ವಕವಾಗಿ ನಮ್ಮ ಕುಟುಂಬವನ್ನು ಗುರಿ ಮಾಡಲಾಗುತ್ತಿದೆ, ರಾಜಕೀಯವಾಗಿ ಮುಗಿಸಲು ಷಡ್ಯಂತ್ರ ನಡೆದಿದೆ ಎಂದ ಅವರು ಅಷ್ಟೇ ಅಲ್ಲ, ನಮ್ಮ ಕುಟುಂಬದವರು ಹಾಗೂ ಸ್ನೇಹಿತರ 40 ಮಂದಿಯ ದೂರವಾಣಿಯನ್ನು ಆಲಿಸಲಾಗುತ್ತಿದೆ ಎಂದರು.

ದೇವರಾಜೇಗೌಡ ಪಾಪ, ಪೊಲೀಸ್ ವಾಹನದಲ್ಲಿ ಕುಳಿತು, ಮಾತನಾಡಿದ್ದಾರೆ, ನಮ್ಮ ಕುಟುಂಬದ ಹೆಸರು ಕೆಡಿಸಲು ಒಂದು ತಂಡವನ್ನೇ ರಚಿಸಿದ್ದಾರೆ ಎಂದು ಬಹಿರಂಗ ಪಡಿಸಿದ್ದಾರೆ. ನಿನ್ನೆ ಬಂತಲ್ಲ ಸಿಡಿ ಶಿವು, ನನ್ನನ್ನು ಬ್ರದರ್ ಅಂತಾರಲ್ಲಾ ಅವರದೇ ಎಂದು ಶಿವಕುಮಾರ್ ಹೆಸರೇಳದೆ ತರಾಟೆಗೆ ತೆಗೆದುಕೊಂಡ ಕುಮಾರಸ್ವಾಮಿ, ಸರ್ಕಾರಕ್ಕೆ ಜವಾಬ್ದಾರಿ ಇದ್ದರೆ, ಪೆನ್‌ಡ್ರೈವ್ ಪ್ರಕರಣ ಹೊರಬಂತಲ್ಲ ಆಗಲೇ ಹಿಡಿದು ಜೈಲಿಗೆ ಹಾಕಬೇಕಿತ್ತು ಎಂದರು. ನನ್ನ ಹೆಸರೇಳಲಿ ಎಂದು ಸವಾಲು ಹಾಕುತ್ತಿದ್ದರಲ್ಲ, ಡಿ.ಕೆ. ಶಿವಕುಮಾರ್ ಅವರೇ, ನಿನ್ನೆ ಆಡಿಯೊ ಬಂತಲ್ಲ, ನಂತರ ನಿಮ್ಮ ಉಸಿರೇ ಇಲ್ಲ ಎಂದು ವ್ಯಂಗ್ಯವಾಡಿದರು. ಶಿವಕುಮಾರ್ ವಿರುದ್ಧ ಯಾರೇ ಮಾತನಾಡಿದರೂ 376 ಸೆಕ್ಷನ್ ಹಾಕುತ್ತಾರೆ, ಅದನ್ನೇ ದೇವರಾಜೇ ಗೌಡರ ಮೇಲೂ ಮಾಡಿದ್ದಾರೆ, ರೇವಣ್ಣ ಅವರ ಮೇಲೂ ಸೆಕ್ಷನ್ 376(ಅತ್ಯಾಚಾರ) ಕೇಸ್ ಹಾಕಿದ್ದಾರೆ. ಇನ್ನು ಮುಂದೆ ಸರ್ಕಾರದ ವಿರುದ್ಧ ಯಾರೇ ಮಾತನಾಡಿದರೂ ಈ ಸೆಕ್ಷನ್ ಗ್ಯಾರಂಟಿ ಇದು ಸೆಕ್ಷನ್ 376 ಸರ್ಕಾರ ಎಂದರು. ಯಾರೂ ವಿಡಿಯೊ ಕತ್ತ ಇದ್ದಾರೆ, ಅವರನ್ನು ಕರೆತಂದು ನೇಣಿಗೆ ಹಾಕಿ ಎಂದು ಈಗಲೂ ಹೇಳುತ್ತೇನೆ. ಸರ್ಕಾರ ಆತನನ್ನು ಹಿಡಿಯುವ ಬದಲು ನನ್ನನ್ನು ಪ್ರಕರಣಕ್ಕೆ ಅಂಟು ಹಾಕಿ ನನಗೆ ಮಸಿ ಬಳಿಯಲು ಇನ್ನಿಲ್ಲದ ಕಸರತ್ತು ನಡೆಸಿ ತಾನೇ ಸಿಕ್ಕಿಹಾಕಿಕೊಂಡಿದೆ ಎಂದರು.

ಹೆಚ್‌ಡಿಕೆಗೆ ಡಿಕೆಶಿ ತಿರುಗೇಟು

ಏನೂ ಕೊಟ್ಟಿಲ್ಲ. ನಾನು ರಾಜಕಾರಣಿ ನನ್ನ ಭೇಟಿ ಮಾಡಲು ಬಿಜೆಪಿಯವರು ಸೇರಿ ನೂರಾರು ಜನ ಬರುತ್ತಾರೆ. ಬರುವ ಮೊದಲು ಸಮಯ ಕೇಳುತ್ತಾರೆ. ದೇವರಾಜೇಗೌಡ ಬಿಜೆಪಿಯವರೇ. ಅವರು ನನ್ನನ್ನು ಭೇಟಿ ಮಾಡಬೇಕು ಎಂದು ಕೇಳಿದ್ದರು. ಆದರೆ ನಾನು ಸಮಯ ಕೊಟ್ಟಿಲ್ಲ. ಅರ್ಧ ನಿಮಿಷವೂ ನಾನು ಮಾತನಾಡಿಲ್ಲ ಎಂದು ತಿಳಿಸಿದರು.

ಪೆನ್‌ಡ್ರೈವ್‌ಗೂ ಸಂಬಂಧವಿಲ್ಲ: ಪೆನ್ ಡ್ರೈವ್ ಪ್ರಕರಣದಲ್ಲಿ ಕುಮಾರಸ್ವಾಮಿ ಅವರು ಡಿ.ಕೆ. ಶಿವಕುಮಾರ್ ಅವರ ಪಾತ್ರದ ಬಗ್ಗೆ ಆರೋಪ ಮಾಡಿರುವ ಕುರಿತು ಕೇಳಿದಾಗ, ನನಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ನನ್ನ ಹೆಸರನ್ನು ಪ್ರಸ್ತಾಪ ಮಾಡದಿದ್ದರೆ ಅವರಿಗೆಲ್ಲ ನಿದ್ದೆ ಬರುವುದಿಲ್ಲ. ಮಾಧ್ಯಮಗಳು ಸಹ ಈ ವಿಚಾರದಲ್ಲಿ ನೈತಿಕತೆಯ ಗಡಿ ಮೀರಬಾರದು. ಉಪ್ಪು ತಿಂದವನು ನೀರು ಕುಡಿಯಬೇಕು ಎಂದು ಕುಮಾರಸ್ವಾಮಿ ಅವರೇ ಹೇಳಿದ್ದಾರೆ. ಕಾನೂನು ತನ್ನ ಕ್ರಮ ತೆಗೆದುಕೊಳ್ಳುತ್ತದೆ. ಈ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ ಎಂದರು.

ಯಾರ ಜೊತೆಯೂ ಮಾತನಾಡಿಲ್ಲ: ಡಿ.ಕೆ.ಶಿವಕುಮಾರ್, ದೇವರಾಜೇಗೌಡ ಮತ್ತು ಶಿವರಾಮೇಗೌಡ ಅವರ ನಡುವಿನ ಸಂಭಾಷಣೆ ಆಡಿಯೋ ಬಿಡುಗಡೆ ಬಗ್ಗೆ ಕೇಳಿದ ಪ್ರಶ್ನೆಗೆ, ನಾನು ಯಾರ ಜೊತೆಯೂ ಮಾತನಾಡಬಾರದ್ದು ಮಾತನಾಡಿಲ್ಲ. ಯಾರಿಗೂ ನಾನು ಜಿಪಿಎ ಕೊಟ್ಟಿಲ್ಲ. ನಾನೊಬ್ಬ ರಾಜಕಾರಣಿ, ನನ್ನನ್ನು ಭೇಟಿ ಮಾಡಲು ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ಪಕ್ಷದ ಕಾರ್ಯಕರ್ತರೂ ಬರುತ್ತಾರೆ. ಅವರು ಬಿಜೆಪಿಯವರು, ನನ್ನ ಭೇಟಿಗೆ ಸಮಯ ಕೇಳಿದ್ದರು. ನಾನು ಕೊಡಲಿಲ್ಲ. ಅರ್ಧ ನಿಮಿಷವೂ ನಾನು ಯಾರ ಬಳಿಯೂ ಮಾತನಾಡಿಲ್ಲ. ನನಗೂ ರಾಜಕೀಯ, ವ್ಯವಹಾರ ಪ್ರಜ್ಞೆ ಇದೆ. ಈ ವಿಚಾರದ ಗಂಭೀರತೆಯೂ ನನಗೆ ಅರ್ಥವಾಗುತ್ತದೆ ಎಂದು ತಿಳಿಸಿದರು. ಡಿ.ಕೆ.ಶಿವಕುಮಾರ್ ಜೈಲಿಗೆ ಹೋದಾಗ ನಾನು ಅವರ ತಾಯಿಯನ್ನು ಸಾಂತ್ವನ ಮಾಡಿದ್ದೆ, ಆದರೆ ಅವರು ನನ್ನ ತಂದೆಗೆ ನೋವು ನೀಡುವುದು ಸರಿಯೇ ಎಂದು ಕುಮಾರಸ್ವಾಮಿ ಹೇಳಿಕೆಗೆ, ನನಗೆ ಅವರ ಪರಿಸ್ಥಿತಿ ಬಗ್ಗೆ ಅನುಕಂಪವಿದೆ. ನಾನು ಈ ವಿಚಾರದಲ್ಲಿ ಯಾರ ಬಗ್ಗೆಯೂ ಅಂದೂ ಮಾತನಾಡಿಲ್ಲ, ಇಂದೂ ಮಾತನಾಡುವುದಿಲ್ಲ ಎಂದರು.

ಅಂತಿಮವಾಗಿ ಕಣದಲ್ಲಿ 78 ಮಂದಿ

ಎಂ.ನಾಗೇಂದ್ರಬಾಬು, ಕನ್ನಡ ಚಳುವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ಪಕ್ಷೇತರ ಅಭ್ಯರ್ಥಿಗಳಾದ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಡಾ.ಎಸ್.ಅನಿಲ್ ಕುಮಾರ್, ಎನ್.ಅಂಬರೀಶ್, ನಾಗಮಲ್ಲೇಶ್, ಎಸ್.ನಿಂಗರಾಜು, ಆರ್.ಮಹೇಶ್, ಕೆ.ರಾಜು ಸೇರಿದಂತೆ ಅಂತಿಮವಾಗಿ ಒಟ್ಟು 11 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ನೈಋತ್ಯ ಶಿಕ್ಷಕರ ಕ್ಷೇತ್ರ: ಈ ಕ್ಷೇತ್ರದಿಂದ ಸ್ಪರ್ಧೆಗಿಳಿದಿದ್ದ ಪಕ್ಷೇತರ ಅಭ್ಯರ್ಥಿ ಶಿವಮೊಗ್ಗದ ಎಂ.ರಮೇಶ್ ನಾಮಪತ್ರ ಹಿಂಪಡೆದಿದ್ದು, ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಎಸ್.ಎಲ್.ಭೋಜೇಗೌಡ, ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ.ಮಂಜುನಾಥ ಕುಮಾರ್, ಪಕ್ಷೇತರ ಅಭ್ಯರ್ಥಿಗಳಾಗಿ ಹೆಚ್.ಟಿ.ಅರುಣ್, ನರೇಶ ಹೆಗ್ಡೆ, ನಂಜೇಶ್.ಬಿ.ಆರ್., ಭಾಸ್ಕರ್ ಶೆಟ್ಟಿ.ಟಿ., ಕೆ.ಕೆ.ಮಂಜುನಾಥ್, ಡಾ.ಎಸ್.ಆರ್.ಹರೀಶ್ ಆಚಾರ್ಯ ಸೇರಿದಂತೆ 8 ಅಭ್ಯರ್ಥಿಗಳು ಕಣದಲ್ಲುಳಿದಿದ್ದಾರೆ.

ನೈರುತ್ಯ ಪದವೀಧರರ ಕ್ಷೇತ್ರ: ಈ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಬೆಂಗಳೂರಿನ ಎಂ.ರಂಗಸ್ವಾಮಿ ತಮ್ಮ ಉಮೇದುವಾರಿಕೆಯನ್ನು ವಾಪಸ್ ಪಡೆದಿದ್ದು, ಬಿಜೆಪಿ ಅಭ್ಯರ್ಥಿ ಧನಂಜಯ್ ಸರ್ಜಿ, ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್, ಸರ್ವ ಜನತಾ ಪಕ್ಷದ ಜಿ.ಸಿ.ಪಟೇಲ್, ಪಕ್ಷೇತರ ಅಭ್ಯರ್ಥಿಗಳಾದ ರಘುಪತಿ ಭಟ್, ದಿನಕರ್ ಉಳ್ಳಾಲ್, ಎಸ್.ಪಿ.ದಿನೇಶ್, ಬಿ.ಮಹಮ್ಮದ್, ಶೇಖ್ ಬಾವಾ ಮಂಗಳೂರು, ಜಿ.ಆರ್.ಷಡಾಕ್ಷರಪ್ಪ, ಷಹರಾಜ್ ಮಜಾಹಿದ್ ಸಿದ್ದಕ್ಕಿ ಸೇರಿದಂತೆ 10 ಮಂದಿ ಅಂತಿಮವಾಗಿ ಸ್ಪರ್ಧೆಯಲ್ಲುಳಿದಿದ್ದಾರೆ.

ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ ಅವರಿಗೆ ಟಿಕೆಟ್ ನೀಡಿರುವುದನ್ನು ವಿರೋಧಿಸಿ ನಾಮಪತ್ರ ಸಲ್ಲಿಸಿದ್ದ ಎಸ್.ಪಿ. ದಿನೇಶ್ ಕಣದಲ್ಲಿ ಮುಂದುವರಿದಿದ್ದಾರೆ. ಬಿಜೆಪಿ ಡಾ. ಧನಂಜಯ ಸರ್ಜಿ ಅವರಿಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿ ಕಣಕ್ಕಿಳಿದಿದ್ದ ಮಾಜಿ ಶಾಸಕ ಕೆ. ರಘುಪತಿ ಭಟ್ ಕೂಡ ಸ್ಪರ್ಧೆಯಲ್ಲಿ ಉಳಿದಿದ್ದಾರೆ.

ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಒಟ್ಟು 19 ಅಭ್ಯರ್ಥಿಗಳು, ಬೆಂಗಳೂರು ಪದವೀಧರ ಮತ್ತು ಆಗ್ನೇಯ ಶಿಕ್ಷಕರ ಕ್ಷೇತ್ರಗಳಲ್ಲಿ ತಲಾ 15, ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 11, ನೈರುತ್ಯ ಪದವೀಧರರ ಕ್ಷೇತ್ರದಲ್ಲಿ 10, ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಎಂಟು ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಮಾವಿನ ಹಣ್ಣು ಮಾಗಿಸಲು ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ ನಿಷೇಧ



● ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಆದೇಶ ● ಭತ್ತದ ಹುಲ್ಲಿನಲ್ಲಿಟ್ಟು ಮಾಗಿಸುವ ವಿಧಾನ ಬಿಟ್ಟ ವ್ಯಾಪಾರಸ್ಥರು ● ಹಣ್ಣು ಮಾಗಿಸಲು ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ ● ಒಂದೇ ದಿನದಲ್ಲಿ ಹಣ್ಣು ಮಾಗಿಸಿ ಮಾರಾಟ ಮಾಡುವ ಧಾವಂತ ● ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ರಾಸಾಯನಿಕ

● ಬಾಪುಲಿಂಗರಾಜ್ ಅರಸ್

ಮೈಸೂರು, ಮೇ 20- ಹಣ್ಣುಗಳ ರಾಜ ಮಾವಿನ ಹಣ್ಣಿನ ರುಚಿ ವಿವರಿಸಲು ಪದಗಳೇ ಸಿಗುವುದಿಲ್ಲ. ರುಚಿಯ ಜೊತೆಗೆ ಸ್ವಾದ, ಪೌಷ್ಟಿಕತೆ ನೀಡುವ ಮಾವಿನ ಹಣ್ಣು ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಆದರೆ ಮೈಸೂರು ಸೇರಿದಂತೆ ಕೆಲವು ಕಡೆ ಮಾವಿನ ಹಣ್ಣನ್ನು ಕೃತಕವಾಗಿ ಮಾಗಿಸಲು ಮಾರಾಟಗಾರರು ಕ್ಯಾಲ್ಸಿಯಂ ಕಾರ್ಬೈಡ್ ಬಳಸುತ್ತಿರುವುದು ಆತಂಕಕಾರಿ ವಿಚಾರವಾಗಿದೆ ಈ ಹಿನ್ನೆಲೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಹಾನಿಕಾರಕ ಕ್ಯಾಲ್ಸಿಯಂ ಕಾರ್ಬೈಡ್ ಬಳಸದಂತೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಕಟ್ಟಾಜ್ಞೆ ಮಾಡಿದೆ.

ಮಾರುಕಟ್ಟೆಯಲ್ಲಿ ರಸಪುರಿ, ಮಲ್ಲಿಕಾ, ತೋತಾಪುರಿ, ಅಲ್ಫೋನ್ಸೊ ನೀಲಂ, ಮಲ್ಗೋವಾ ಸೇರಿದಂತೆ ವಿವಿಧ ತಳಿಯ ಮಾವಿನ ಹಣ್ಣುಗಳದೇ ಭರಾಟೆ. ಒಂದಕ್ಕಿಂತ ಒಂದು ರುಚಿ, ಸ್ವಾದ ನೀಡುವ ಮಾವಿನ ಹಣ್ಣುಗಳನ್ನು ಜನರು ಖರೀದಿಸುತ್ತಿದ್ದಾರೆ. ಪುಷ್ಕಳವಾಗಿ ಫಲ ನೀಡುವ ಮಾವಿನ ಹಣ್ಣುಗಳ ರಾಶಿಯೆ ಮಾರುಕಟ್ಟೆಯಲ್ಲಿದೆ.

ಈ ಮೊದಲು ಮಾವಿನ ಹಣ್ಣನ್ನು ಭತ್ತದ ಹುಲ್ಲಿನಲ್ಲಿಟ್ಟು ಮಾಗಿಸುತ್ತಿದ್ದರು. ಹುಲ್ಲಿನಲ್ಲಿ ಮಾವಿನ ಹಣ್ಣು ನೈಸರ್ಗಿಕವಾಗಿ ಮಾಗುತ್ತಿತ್ತು, ಇದರಿಂದ ಮಾವಿನ ಹಣ್ಣಿನ ರುಚಿ ಮತ್ತು ಸ್ವಾದ ಕೂಡ ಇಮ್ಮಡಿಯಾಗಿರುತ್ತಿತ್ತು. ಆಗಿನ ಮಾವಿನ ಹಣ್ಣಿನ ರುಚಿ ಹೇಳತೀರದಾಗಿದೆ.

ಭತ್ತದ ಹುಲ್ಲಿನಲ್ಲಿಟ್ಟು ಮಾವಿನ ಹಣ್ಣು ಮಾಗಿಸಲು ಕನಿಷ್ಠ ನಾಲ್ಕೈದು ದಿನವಾದರೂ ಬೇಕಿರುತ್ತಿತ್ತು. ಆದರೆ ಈಗಿನ ವ್ಯಾಪಾರಸ್ಥರಿಗೆ ನಾಲ್ಕೈದು ದಿನ ಕಾಯುವಷ್ಟು ವ್ಯವಧಾನವಿಲ್ಲ. ತೋಟದಿಂದ ಮಾವಿನ ಹಣ್ಣು ಕಟಾವು ಮಾಡಬೇಕು, ತಂದ ಮಾರನೆ ದಿನಕ್ಕೆ ಕಾಯಿಯನ್ನು ಹಣ್ಣು ಮಾಡಿ ಮಾರಾಟ ಮಾಡುವ ಧಾವಂತವಿದೆ.

ಭತ್ತದ ಹುಲ್ಲಿನಲ್ಲಿಟ್ಟು ಮಾವಿನ ಹಣ್ಣು ಮಾಗಿಸುವ ವಿಧಾನದಿಂದ ವಿಮುಕ್ತವಾಗಿರುವ ಕೆಲವು ಮಾರಾಟಗಾರರು ಈಗ ಕ್ಯಾಲ್ಸಿಯಂ ಕಾರ್ಬೈಡ್ ಎಂಬ ರಾಸಾಯನಿಕದ ಮೊರೆ ಹೋಗಿದ್ದಾರೆ. ಕ್ಯಾಲ್ಸಿಯಂ ಕಾರ್ಬೈಡ್ ಎಂಬ ಅಪಾಯಕಾರಿ ರಾಸಾಯನಿಕ ಬಳಸಿ ಒಂದೇ ದಿನದಲ್ಲಿ ಮಾವಿನ ಹಣ್ಣು ಮಾಗಿಸುತ್ತಿದ್ದಾರೆ.

ಕ್ಯಾಲ್ಸಿಯಂ ಕಾರ್ಬೈಡ್ ತೇವಾಂಶದೊಂದಿಗೆ ಪ್ರತಿಕ್ರಿಯಿಸಿದಾಗ ಅಸಿಟಿಲೀನ್ ಎಂಬ ಅನಿಲ ಉತ್ಪಾದಿಸಲಿದ್ದು, ಇದು ಎಥಿಲೀನ್ ಕ್ರಿಯೆ ಉಂಟು ಮಾಡುತ್ತದೆ. ಇದರಿಂದ ಕಾಯಿ ಬೇಗ ಹಣ್ಣಾಗುತ್ತದೆ.

ಕ್ಯಾಲ್ಸಿಯಂ ಕಾರ್ಬೈಡ್‌ನಿಂದ ಮಾಗಿರುವ ಮಾವಿನ ಹಣ್ಣು ಸೇವಿಸುವುದರಿಂದ ಬಾಯಿ ಹುಣ್ಣು, ಮೂಗು ತುರಿಕೆ, ವಾಂತಿ, ವಾಕರಿಕೆ, ತಲೆ ತಿರುಗುವಿಕೆ, ಆಯಾಸ, ಚರ್ಮದ ಖಾಯಿಲೆ, ಮೂತ್ರಪಿಂಡ ವೈಫಲ್ಯದಂತಹ ಅನಾರೋಗ್ಯ ಸಮಸ್ಯೆಗಳು ಎದುರಾಗುತ್ತದೆ.

ಚರ್ಮದಲ್ಲಿ ಉರಿಯೂತದಂತಹ ತೀವ್ರ ರೀತಿಯ ಅನಾರೋಗ್ಯ ಉಂಟಾಗುತ್ತದೆ. ವಿಷಕಾರಿ ಕಲ್ಮಶವಿರುವ ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ ಇಷ್ಟೆಲ್ಲಾ ದುಷ್ಪರಿಣಾಮ ಬೀರಿದರೂ ಕೆಲವು ವ್ಯಾಪಾರಸ್ಥರು ಇದನ್ನೆ ಬಳಸುತ್ತಿದ್ದಾರೆ.

ಈ ಹಿನ್ನೆಲೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಮಾವಿನ ಹಣ್ಣು ಸೇರಿದಂತೆ ಎಲ್ಲಾ ರೀತಿಯ ಹಣ್ಣುಗಳನ್ನು ಮಾಗಿಸಲು ಕ್ಯಾಲ್ಸಿಯಂ ಕಾರ್ಬೈಡ್ ಬಳಸದಂತೆ ಆದೇಶ ನೀಡಿದೆ.

2011 ರ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ನಿಯಂತ್ರಣ (ನಿಷೇಧ ಮತ್ತು ಮಾರಾಟದ ಮೇಲಿನ ನಿರ್ಬಂಧಗಳು) ನಿಯಮಗಳ ಪ್ರಕಾರ ಕ್ಯಾಲ್ಸಿಯಂ ಕಾರ್ಬೈಡ್ ನಿಷೇಧಿಸಲಾಗಿದೆ ಎಂದು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ತಿಳಿಸಿದೆ.

ಈ ಹಿನ್ನೆಲೆ 2006 ರ ಎಫ್‌ಎಸ್‌ಎಸ್‌ಐ ಆಕ್ಟ್ (ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ) ಪ್ರಕಾರ ಕ್ಯಾಲ್ಸಿಯಂ ಕಾರ್ಬೈಡ್ ಬಳಸುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

ಕ್ಯಾಲ್ಸಿಯಂ ಕಾರ್ಬೈಡ್ ನಿಯಂತ್ರಣಕ್ಕೆ ಇಂದಿನಿಂದ ಕಾರ್ಯಾಚರಣೆ

ಮಾವಿನ ಹಣ್ಣು ಸೇರಿದಂತೆ ಇತರೆ ಹಣ್ಣುಗಳನ್ನು ಮಾಗಿಸಲು ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ ನಿಯಂತ್ರಿಸಲು ನಾಳೆ (ಮೇ 21) ಯಿಂದ ಕಾರ್ಯಾಚರಣೆ ಆರಂಭಿಸಲಾಗುವುದು.

ಕ್ಯಾಲ್ಸಿಯಂ ಕಾರ್ಬೈಡ್ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬ ಕಾರಣದಿಂದ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ನಿಷೇಧ ಮಾಡಿದೆ.

ಈ ಹಿನ್ನೆಲೆ ನಾಳೆ ಮೈಸೂರಿನ ದೇವರಾಜ ಮಾರುಕಟ್ಟೆ ಸೇರಿದಂತೆ ಇತರೆ ಮಂಡಿಗಳಿಗೆ ಭೇಟಿ ಮಾಡಲಾಗುವುದು. ಕಾರ್ಯಾಚರಣೆಗಾಗಿ 4 ತಂಡಗಳನ್ನು ರಚನೆ ಮಾಡಲಾಗಿದ್ದು, ತಂಡಗಳು ಮಂಡಿಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಲಿದೆ. ಭೇಟಿ ವೇಳೆ ಪ್ರತಿಯೊಂದು ಮಂಡಿಯಲ್ಲೂ ಹಣ್ಣಿನ ಮಾದರಿಗಳನ್ನು ಸಂಗ್ರಹಿಸಲಾಗುವುದು.

ಕ್ಯಾಲ್ಸಿಯಂ ಕಾರ್ಬೈಡ್ ಬಳಸಿರುವುದು ಕಂಡು ಬಂದರೆ ಅಂತಹ ಹಣ್ಣಿನ ಮಾದರಿಗಳನ್ನು ಪ್ರಾಧಿಕಾರದ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ ಮಾಡಿರುವುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟರೆ ಹಿರಿಯ ಅಧಿಕಾರಿಗಳ ಸೂಚನೆಯಂತೆ ಕ್ರಮ ಕೈಗೊಳ್ಳಲಾಗುವುದು.

-ರವೀಂದ್ರ, ಮುಖ್ಯಸ್ಥರು, ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಮೈಸೂರು ಕಚೇರಿ

ಹಣ್ಣು ಮಾಗಿಸಲು ಎಥಿಲಿನ್ ಬಳಸಲು ಸಲಹೆ

ಭತ್ತದ ಹುಲ್ಲಿನಲ್ಲಿಟ್ಟು ಮಾವಿನ ಹಣ್ಣು ಸೇರಿದಂತೆ ಇತರೆ ಹಣ್ಣು ಮಾಗಿಸಲು ಸಾಧ್ಯವಾಗದಿದ್ದರೆ ಸುರಕ್ಷಿತ ಪರ್ಯಾಯ ವಿಧಾನ ಎಥಿಲಿನ್ ಬಳಸುವಂತೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಸಲಹೆ ನೀಡಿದೆ.


ಈ ಹಿನ್ನೆಲೆ ಬಹಳಷ್ಟು ವ್ಯಾಪಾರಸ್ಥರು ಮಾವಿನ ಹಣ್ಣು ಸೇರಿದಂತೆ ಇತರೆ ಹಣ್ಣುಗಳನ್ನು ಮಾಗಿಸಲು ಎಥಿಲಿನ್ ಬಳಸುತ್ತಿದ್ದಾರೆ. ಆದರೆ ಇದರ ಪ್ರಮುಖ ವಿಚಾರವೆಂದರೆ ಎಥಿಲಿನ್ ಚೈನಾ ದೇಶದ ರಾಸಾಯನಿಕ ವಸ್ತುವಾಗಿದೆ.

ಭಾರತದಲ್ಲಿ ಉತ್ಪಾದಿಸುವ ಎಥಿಲಿನ್ ಬೆಲೆ ದುಬಾರಿಯಾಗಿರುವ ಕಾರಣ ಮಾರಾಟಗಾರರು ಚೈನಾ ದೇಶದ ಎಥಿಲಿನ್ ಬಳಸುತ್ತಿದ್ದಾರೆ. ಆದರೆ ಚೈನಾ ದೇಶದ ವಸ್ತುಗಳು ಗುಣಮಟ್ಟವಲ್ಲದ, ಬಳಕೆಗೆ ಯೋಗ್ಯವಲ್ಲದ ವಸ್ತುಗಳು ಎಂಬ ಅಪವಾದವಿದೆ.

ಇಂತಹ ಪರಿಸ್ಥಿತಿಯಲ್ಲಿ ಹಣ್ಣುಗಳನ್ನು ಮಾಗಿಸಲು ವ್ಯಾಪಾರಸ್ಥರು ಚೈನಾ ದೇಶದ ಎಥಿಲಿನ್ ರಾಸಾಯನಿಕ ಬಳಸುತ್ತಿರುವುದು ಮತ್ತಷ್ಟು ಸಂಶಯಗಳನ್ನು ಹುಟ್ಟು ಹಾಕಿದೆ.

ಜನರು ಈ ವಿಚಾರವನ್ನು ಸೂಕ್ಷ್ಮವಾಗಿ ಗಮನಿಸಿ, ಇನ್ನು ಮುಂದೆ ಮಾವಿನ ಕಾಯಿಯನ್ನು ಖರೀದಿಸಿ ಮನೆಯಲ್ಲೆ ಭತ್ತದ ಹುಲ್ಲಿನಲ್ಲಿಟ್ಟು ನೈಸರ್ಗಿಕವಾಗಿ ಮಾಗಿಸುವುದು ಉತ್ತಮ. ಇದರಿಂದ ಹಣ್ಣಿನ ರುಚಿ, ಸ್ವಾದ ಕೂಡ ಹೆಚ್ಚಾಗಿರುತ್ತದೆ.

ಜೀವನದ ಸತ್ಯ ಅರಿಯಲು ಬುದ್ಧನ ತತ್ವಾದರ್ಶ ತಿಳಿಯಿರಿ: ಭಿಕ್ಕು ಆನಂದ ಭಂತೇಜಿ ಸಲಹೆ



ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಇಂದು ನಡೆದ ಬೋಧಿ ಸಪ್ತಾಹ ಕಾರ್ಯಕ್ರಮದಲ್ಲಿ ಬೆಂಗಳೂರಿನ ಮಹಾಬೋಧಿ ಸೊಸೈಟಿ ಪ್ರಧಾನ ಕಾರ್ಯದರ್ಶಿ ಭಿಕ್ಕು ಆನಂದ ಭಂತೇಜಿ ಮಾತನಾಡಿದರು.

ಮೈಸೂರು, ಮೇ20(ಬಿಎಲ್‌ಯು)- ಜೀವನದ ಸತ್ಯ ಅರಿಯಲು ಗೌತಮ ಬುದ್ಧನ ತತ್ವಾದರ್ಶ ತಿಳಿಯಬೇಕು ಎಂದು ಬೆಂಗಳೂರಿನ ಮಹಾಬೋಧಿ ಸೊಸೈಟಿ ಪ್ರಧಾನ ಕಾರ್ಯದರ್ಶಿ ಭಿಕ್ಕು ಆನಂದ ಭಂತೇಜಿ ಸಲಹೆ ನೀಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದಲ್ಲಿ ಇಂದು ನಡೆದ ಬೋಧಿ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬುದ್ಧನ ಮಾರ್ಗದಲ್ಲಿ ಅದ್ಭುತ ಯೋಚನಾ ಕ್ರಮಗಳಿದ್ದು, ಅದನ್ನು ತಿಳಿಯಬೇಕು ಎಂದು ಹೇಳಿದರು.

ಜೀವನದಲ್ಲಿ ಭಯ, ನೋವು ಇಲ್ಲದೆ ಬದುಕಬೇಕು. ಇದಕ್ಕಾಗಿ ಪ್ರತಿದಿನ ಮನಸ್ಸನ್ನು ಅರಿಯುವ ಜಾಗೃತ ಭಾವ ಹೊಂದಬೇಕು. ಧ್ಯಾನದಲ್ಲಿ ತಲ್ಲೀನರಾಗಬೇಕು ಎಂದು ಕಿವಿಮಾತು ಹೇಳಿದರು.

ದೇವರು ಹಾಗೂ ಸೃಷ್ಟಿ ಹುಡುಕುತ್ತಾ ಬದುಕಿನ ಆಯಸ್ಸನ್ನು ವ್ಯರ್ಥ ಮಾಡಿಕೊಳ್ಳಬಾರದು. ಬದುಕಿನ ಅದ್ಭುತ ಘಳಿಗೆಯನ್ನು ಸಾಕಾರಗೊಳಿಸಿಕೊಳ್ಳಬೇಕು ಹೇಳಿದರು.

ಮನುಷ್ಯನನ್ನು ಯೋಗ್ಯನಾಗಿ ಮಾಡುವುದು ಬುದ್ಧ ತತ್ವ, ನನ್ನನ್ನು ನಂಬು ಎನ್ನುವುದಕ್ಕಿಂತ, ಜೀವನದಲ್ಲಿ ಸತ್ಯ ಹುಡುಕು ಎಂಬುವುದು ಬುದ್ಧ ತತ್ವ ಎಂದು ತಿಳಿಸಿದ ಭಿಕ್ಕು ಆನಂದ ಭಂತೇಜಿ, ನಾನು ನಿನ್ನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತೇನೆ ಎಂದು ಹೇಳುವುದರಿಂದ ಬೌದ್ಧ ಧರ್ಮ ಮುಕ್ತವಾಗಿದೆ. ಆದ ಕಾರಣ ಬದುಕಿನ ಸತ್ಯ ತಿಳಿಯಲು ಬುದ್ಧನ ತತ್ವಾದರ್ಶ ಅರಿಯಬೇಕು ಎಂದು ಸಲಹೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ. ಸೋಮಶೇಖರ್, ಪ್ರಾಧ್ಯಾಪಕ ಡಾ.ನರೇಂದ್ರ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇಂದು ಗೀತ ಗಾಯನ ಕಾರ್ಯಕ್ರಮ

ಮೈಸೂರು, ಮೇ 20-ಮೈಸೂರಿನ ಅಭಿರುಚಿ ಬಳಗ, ಎನ್.ವಿ.ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗದ ವತಿಯಿಂದ ನಾಳೆ (ಮೇ 21) ಬೆಳಗ್ಗೆ 11 ಗಂಟೆಗೆ ಅಭಿರುಚಿ ಬಳಗದ ಕಚೇರಿಯಲ್ಲಿ ನರಸಿಂಹ ಜಯಂತಿ, ವೇದವ್ಯಾಸ ಜಯಂತಿ ಹಾಗೂ ಬುದ್ಧ ಪೂರ್ಣಿಮೆಗಳ ಸಂದರ್ಭದಲ್ಲಿ ಉಪನ್ಯಾಸ, ಗೀತ ಗಾಯನ ಕಾರ್ಯಕ್ರಮ ಹಾಗೂ ಕವಿಗೋಷ್ಠಿ ಜರುಗಲಿದೆ. ಆಕಾಶವಾಣಿ ನಿವೃತ್ತ ಕಾರ್ಯಕ್ರಮ ಅಧಿಕಾರಿ ಎನ್.ವಿ.ರಮೇಶ್ ಅಧ್ಯಕ್ಷತೆ ವಹಿಸಲಿದ್ದು, ಆಧ್ಯಾತ್ಮಿಕ ಚಿಂತಕರಾದ ಸುಶೀಲಾ ಶ್ಯಾಮಸುಂದರ್ ಗೀತಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಹೆಚ್ಚಿನ ಮಾಹಿತಿಗೆ 9845565238 ಸಂಪರ್ಕಿಸಲು ಕೋರಲಾಗಿದೆ.

ಛಾಯಾಗ್ರಾಹಕ ಎಸ್.ಆರ್. ಮಧುಸೂದನ್‌ಗೆ ವೈಪಿಎಸ್ ಪ್ರಶಸ್ತಿ



ವೈಪಿಎಸ್ ಪ್ರಶಸ್ತಿ ಪಡೆದ ಬಾರ್ನ್ ಔಲ್



ವಿವಿಧ ಪ್ರಶಸ್ತಿ ಪಡೆದ ಕಾಡಾನೆ ಹಿಮ್ಮೆಟ್ಟಿಸುವ ಅಭಿಮನ್ಯು



ಮರಿಯೊಂದಿಗೆ ಸಾಗುತ್ತಿರುವ ತಾಯಿ ಕರಡಿ.



ಜಿಗಿಯುತ್ತಿರುವ ಕೃಷ್ಣಮೃಗ.



ಮಧುಸೂದನ್


ಮೈಸೂರು, ಮೇ 20(ಎಂಟಿವೈ)-ಮೈಸೂರಿನ ಪತ್ರಿಕಾ ಹಾಗೂ ವನ್ಯಜೀವಿ ಛಾಯಾಗ್ರಾಹಕ ಎಸ್.ಆರ್.ಮಧುಸೂದನ್ ತೆಗೆದಿರುವ ಗೂಬೆ(ಬಾರ್ನ್ ಔಲ್) ಚಿತ್ರಕ್ಕೆ ನ್ಯಾಷನಲ್ ಫೋಟೋಗ್ರಫಿ ಸಲೂನ್ 2024 ಪ್ರಶಸ್ತಿ ಲಭಿಸಿದ್ದು, ಇನ್ನಷ್ಟು ವನ್ಯಜೀವಿ ಚಿತ್ರಗಳಿಗೆ ವಿವಿಧ ಪ್ರಶಸ್ತಿ ದೊರೆತಿವೆ.

ಬೆಂಗಳೂರಿನ ಯೂಥ್ ಫೋಟೋಗ್ರಾಫಿಕ್ ಸೊಸೈಟಿ ವತಿಯಿಂದ ಇತ್ತೀಚೆಗೆ ನಡೆದ ನ್ಯಾಷನಲ್ ಫೋಟೋಗ್ರಫಿ ಸಲೂನ್ 2024(ವೈಪಿಎಸ್) ಸ್ಪರ್ಧೆಯ ನಾಲ್ಕು ವಿಭಾಗಗಳಲ್ಲಿ 206 ಮಂದಿ ಛಾಯಾಗ್ರಾಹಕರು 2753 ಛಾಯಾ ಚಿತ್ರಗಳನ್ನು ಕಳುಹಿಸಿದ್ದರು. ಅದರಲ್ಲಿ ಎಸ್.ಆರ್.ಮಧುಸೂದನ್ ಅವರ ಬಾರ್ನ್ ಔಲ್ ಛಾಯಾಚಿತ್ರಕ್ಕೆ ವೈಪಿಎಸ್ ಹಾನರರಿ ಮೆಂಷನ್ ದೊರೆತಿದ್ದು, ಇನ್ನೆರಡು ಛಾಯಾಚಿತ್ರಗಳು ಸ್ವೀಕೃತಗೊಂಡಿವೆ.

2024ರ ಜನವರಿಯಿಂದ ಇದುವರೆಗೆ ವಿವಿಧ ಸಂಸ್ಥೆಗಳು ನಡೆಸಿದ ಹಲವು ಇಂಟರ್ನ್ಯಾಷನಲ್ ಸಲೂನ್ ಫೋಟೋಗ್ರಫಿ ಸ್ಪರ್ಧೆಗಳಲ್ಲಿ ಮಧುಸೂದನ್ ಅವರ ವಿವಿಧ ಛಾಯಾಚಿತ್ರಗಳಿಗೆ ಪ್ರಶಸ್ತಿ ಲಭಿಸಿದೆ. ಅವುಗಳಲ್ಲಿ ಫೆಡರೇಶನ್ ಆಫ್ ಇಂಡಿಯನ್ ಫೋಟೋಗ್ರಾಫಿಯ ಚಿನ್ನದ ಪದಕ, ಹಾಗೂ 20ಕ್ಕೂ ಹೆಚ್ಚು ಹಾನರರಿ ಪದಕಗಳು ದೊರೆತಿವೆ. ಈ ಪ್ರಶಸ್ತಿಗಳಿಂದಾಗಿ ಎಸ್.ಆರ್. ಮಧುಸೂದನ್ ಫೋಟೋಗ್ರಾಫಿ ಸೊಸೈಟಿ ಆಫ್ ಇಂಡಿಯಾದ 2023ನೇ ಸಾಲಿನ ಟಾಪ್ 100 ಇಂಡಿಯನ್ ಎಕ್ಸಿಬಿಟರ್ ವಿಭಾಗದಲ್ಲಿ 74ನೇ ಸ್ಥಾನ ಪಡೆದಿದ್ದಾರೆ.

ದೇಶಕ್ಕೆ ಮಾದರಿ ಕಾಂಗ್ರೆಸ್ ಸರ್ಕಾರ

ಮುಡಾ ಅಧ್ಯಕ್ಷ ಕೆ. ಮರೀಗೌಡ



ಮೈಸೂರು, ಮೇ 20- ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ದೇಶಕ್ಕೆ ಮಾದರಿ ಸರ್ಕಾರವಾಗಿದೆ ಎಂದು ಮುಡಾ ಅಧ್ಯಕ್ಷ ಕೆ. ಮರೀಗೌಡ ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಯಶಸ್ವಿಯಾಗಿ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರಿಗೆ ಯಶಸ್ವಿಯಾಗಿ 1 ವರ್ಷ ಪೂರೈಸಿದ್ದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಸಿದ್ದರಾಮಯ್ಯ ಚುನಾವಣಾ ಪೂರ್ವದಲ್ಲಿ ಜನರಿಗೆ ಭರವಸೆ ನೀಡಿದ್ದ, 5 ಗ್ಯಾರಂಟಿಗಳನ್ನು ನಂಬಿದ್ದ ಜನರು 135 ಕಾಂಗ್ರೆಸ್ ಶಾಸಕರು ಗೆಲ್ಲಲು ಕಾರಣರಾಗಿದ್ದಾರೆ. ಸರ್ಕಾರ ಬಂದ 9 ತಿಂಗಳಲ್ಲಿಯೇ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ 4.5 ಕೋಟಿ ಬಡ ಕುಟುಂಬಗಳು ನೆಮ್ಮದಿಯಿಂದ ಬದುಕುವಂತೆ ಮಾಡಿ, ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ. ಮಹಿಳೆಯರು ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದು ಲೋಕಸಭಾ ಚುನಾವಣೆಯಲ್ಲಿಯೂ ರಾಜ್ಯದಲ್ಲಿ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದ್ದೇವೆ. ನುಡಿದಂತೆ ನಡೆದ ಕಾಂಗ್ರೆಸ್ ಸರ್ಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ 5 ವರ್ಷಗಳನ್ನು ಪೂರೈಸಲಿದೆ ಎಂದ ಅವರು, ಸುಳ್ಳು ಭರವಸೆಗಳನ್ನು ಜನರಿಗೆ ನೀಡಿ ಕೋಮು ಭಾವನೆ ಬಿತ್ತಿ ಹಿಂದು, ಮುಸ್ಲಿಂ ಎಂದು ಜಾತಿಯ ವಿಷಬೀಜ ಬಿತ್ತುವ ಬಿಜೆಪಿ ಪಕ್ಷದ ಆಟ ರಾಜ್ಯದಲ್ಲಿ ನಡೆಯುವುದಿಲ್ಲ. ರಾಜ್ಯದ ಅಭಿವೃದ್ಧಿಯ ಜೊತೆಗೆ 5 ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ ಕೀರ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಸಂಪುಟದ ಎಲ್ಲಾ ಸದಸ್ಯರು ಹಾಗೂ ಕಾಂಗ್ರೆಸ್ ಶಾಸಕರಿಗೂ ಸಲ್ಲಬೇಕು ಎಂದರು.

ಅಪರಾಧ ತಡೆಗಟ್ಟಲು ಸಕ್ರಿಯವಾಗಿ ಕರ್ತವ್ಯ ನಿರ್ವಹಿಸಿ

ಅಧಿಕಾರಿಗಳಿಗೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ತಾಕೀತು



ಮೈಸೂರು, ಮೇ 20(ಆರ್‌ಕೆ)- ಲೋಕಸಭಾ ಸಾರ್ವತ್ರಿಕ ಚುನಾವಣೆ ಮುಗಿದು ಮತ ಎಣಿಕೆ ಮತ್ತು ಫಲಿತಾಂಶ ಪ್ರಕಟಣೆಗೆ ದಿನಗಣನೆ ಆರಂಭವಾಗಿರುವುದರಿಂದ ಮೈಸೂರು ನಗರದಾದ್ಯಂತ ಅಪರಾಧ ಪ್ರಕರಣಗಳು, ಸಮಾಜಘಾತುಕ ಚಟುವಟಿಕೆಗಳನ್ನು ನಿಗ್ರಹಿಸಲು ಹಾಗೂ ಕಾನೂನು-ಸುವ್ಯವಸ್ಥೆ ಕಾಪಾಡಲು ಸಕ್ರಿಯವಾಗಿ ಕರ್ತವ್ಯ ನಿರ್ವಹಿಸಿ ಎಂದು ಅಧೀನಾಧಿಕಾರಿಗಳಿಗೆ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಇಂದಿಲ್ಲಿ ತಾಕೀತು ಮಾಡಿದ್ದಾರೆ.

ಹುಬ್ಬಳ್ಳಿ ಅಂಜಲಿ ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಪೊಲೀಸ್ ಅಧಿಕಾರಿಗಳ ಕರ್ತವ್ಯದ ಬಗ್ಗೆ ನಿರ್ದೇಶನ ನೀಡಿರುವುದರಿಂದ ಇಂದು ನಜರ್‌ಬಾದ್‌ನಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆವರೆಗೆ ಇನ್ಸ್‌ಪೆಕ್ಟರ್ ಮೇಲ್ಪಟ್ಟ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ತಮ್ಮ ಅಧೀನಾಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನಿಯಂತ್ರಣದಲ್ಲಿರಿಸಿಕೊಂಡು ಕರ್ತವ್ಯ ನಿರ್ವಹಿಸಬೇಕೆಂದು ಸೂಚನೆ ನೀಡಿದರು.

ಎಲ್ಲಾ ಅಧಿಕಾರಿಗಳು ರಾತ್ರಿ ಮತ್ತು ಹಗಲು ಗಸ್ತಿನಲ್ಲಿದ್ದು ನಗರದಾದ್ಯಂತ ಸಂಭವಿಸಬಹುದಾದ ಅಪರಾಧ ಕೃತ್ಯ, ಅಹಿತಕರ ಘಟನೆಗಳು, ಸಮಾಜಘಾತುಕ ಚಟುವಟಿಕೆಗಳ ಮೇಲೆ ನಿಗಾ ಇರಿಸಿ ಕಟ್ಟೆಚ್ಚರ ವಹಿಸುವ ಜೊತೆಗೆ ಶಾಂತಿಗೆ ಭಂಗ ತರುವ ಸಭೆ, ಸಂಚು, ಯೋಜನೆ ಸಂಬಂಧ ಎಸ್‌ಬಿ ಕಾನ್ಸ್‌ಟೇಬಲ್‌ಗಳು, ಗುಪ್ತಚರ ವಿಭಾಗದ ಸಿಬ್ಬಂದಿಗಳ ಮೂಲಕ ಮಾಹಿತಿ ಸಂಗ್ರಹಿಸಿ ತಕ್ಷಣ ಕಾರ್ಯ ಪ್ರವೃತ್ತರಾಗುವಂತೆಯೂ ಪೊಲೀಸ್ ಆಯುಕ್ತರು ಇದೇ ಸಂದರ್ಭ ನಿರ್ದೇಶನ ನೀಡಿದರು.

ಗಲಾಟೆ, ಘರ್ಷಣೆ, ಹಲ್ಲೆ, ಕೊಲೆ, ಸುಲಿಗೆ, ಮನೆ ಕಳವುಗಳಂತಹ ಅಪರಾಧ ಕೃತ್ಯಗಳು ನಡೆಯದಂತೆ ಎಚ್ಚರ ವಹಿಸಿ. ತಡರಾತ್ರಿ ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಕ್ಲಬ್‌ಗಳು, ರೆಸಾರ್ಟ್‌ಗಳ ಬಳಿ ಗಸ್ತು ನಡೆಸಿ ಗಲಾಟೆಗಳಾಗದಂತೆ ನಿಗಾ ವಹಿಸಬೇಕೆಂದು ಬಿ. ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಪ್ರವಾಸಿ ತಾಣವಾಗಿರುವ ಮೈಸೂರಿಗೆ ಹೊರ ರಾಜ್ಯ, ವಿದೇಶಗಳಿಂದ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಬರುತ್ತಿರುವುದರಿಂದ ವಾಹನ ದಟ್ಟಣೆ ನಿಯಂತ್ರಿಸಿ, ಸುಗಮ ಸಂಚಾರ ವ್ಯವಸ್ಥೆ ಮಾಡಬೇಕು, ಪ್ರವಾಸಿಗರಿಗೆ ಮಾಹಿತಿ, ಅನುಕೂಲ ಕಲ್ಪಿಸಲು ಪೊಲೀಸರು ಸಹಕರಿಸಬೇಕು, ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿಸಬೇಕೆಂದು ಅವರು ನಿರ್ದೇಶನ ನೀಡಿದರು.

ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ, ಎಸಿಪಿಗಳಾದ ಶಾಂತಮಲ್ಲಪ್ಪ, ಎಸ್.ಜಿ. ಗಜೇಂದ್ರಪ್ರಸಾದ್, ರಮೇಶ್‌ಕುಮಾರ್, ಸುಧಾಕರ, ಸಂದೇಶ್ ಕುಮಾರ್, ಸಂಚಾರ ಎಸಿಪಿ ಪರಶುರಾಮಪ್ಪ ಹಾಗೂ ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಸಭೆಯಲ್ಲಿ ಹಾಜರಿದ್ದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ



ಮೈಸೂರು, ಮೇ 20(ಎಂಕೆ)– ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖಾ ಕಾರ್ಯ ನಿರ್ವಾಹಕ ನೌಕರರ ಸಂಘ ಮೈಸೂರು ಜಿಲ್ಲೆ ವತಿಯಿಂದ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಅಧಿಕ ಅಂಕಗಳಿಸಿದ ಇಲಾಖಾ ಅಧಿಕಾರಿ ಮತ್ತು ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಪ್ರೋತ್ಸಾಹಿಸಲಾಯಿತು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಮಾಪನಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95.84 ರಷ್ಟು ಅಂಕ ಪಡೆದ ಎಸ್.ಕೃಪಾ, ಶೇ.94.20 ರಷ್ಟು ಅಂಕ ಪಡೆದ ಪ್ರತೀಕ್ಷಾ ಶೇಖರ್, ಪಿಯುಸಿಯಲ್ಲಿ ಶೇ.98 ರಷ್ಟು ಅಂಕ ಪಡೆದ ಡಿ.ಎಸ್.ವಿಜಯಲಕ್ಷ್ಮಿ, ಶೇ.96.16 ರಷ್ಟು ಅಂಕ ಪಡೆದ ಆರ್.ಚೇತನ, ಶೇ.96.8 ರಷ್ಟು ಅಂಕ ಪಡೆದ ಹೆಚ್.ಜಿ.ನೀತುಶ್ರೀ, ಶೇ.95.16 ರಷ್ಟು ಅಂಕ ಪಡೆದ ಕೆ.ಸುಪ್ರೀತ್, ಶೇ.93.7 ರಷ್ಟು ಅಂಕ ಪಡೆದ ಎಂ.ಎನ್.ದಿನಪ್ ಹಾಗೂ ಶೇ.93 ರಷ್ಟು ಅಂಕ ಪಡೆದ ಕೆ.ಎಸ್.ಪೂರ್ವ ಅವರನ್ನು ಸನ್ಮಾನಿಸಲಾಯಿತು.

ಬಳಿಕ ಮೈಸೂರು ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕಿ ರಮ್ಯ ಮಾತನಾಡಿ, ಯಾವುದೇ ಸಾಧನೆಗಳ ಹಿಂದೆ ಗುರಿ ಮತ್ತು ಗುರುಗಳು ಇದ್ದೇ ಇರುತ್ತಾರೆ. ಎಲ್ಲಾ ರೀತಿಯ ಅಡೆ–ತಡೆಗಳನ್ನು ದಾಟಿ ಉನ್ನತ ಶ್ರೇಣಿಯಲ್ಲಿ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳು ತಮ್ಮ ಮುಂದಿನ ಉನ್ನತ ವಿದ್ಯಾಭ್ಯಾಸದಲ್ಲಿಯೂ ಇದೇ ರೀತಿಯಾಗಿ ಪ್ರಶ್ರಮದಿಂದ ಅಧ್ಯಯನ ನಡೆಸಬೇಕು. ವಿದ್ಯೆಯಿಂದ ವಿನಯ ದೊರೆಯಲಿದ್ದು, ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಿ ಎಂದು ಕಿವಿಮಾತು ಹೇಳಿದರು.

ಮೈಸೂರು ವಿಭಾಗದ ಭೂದಾಖಲೆಗಳ ಜಂಟಿ ನಿರ್ದೇಶಕ ಪ್ರಸಾದ್ ವಿ.ಕುಲಕರ್ಣಿ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಯಿಂದ ಪೋಷಕರಲ್ಲಿ ಧನ್ಯತೆ ಭಾವ ಮೂಡಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳು ಬಹಳ ಧೈರ್ಯಶಾಲಿಗಳಾಗಿದ್ದು, ಉನ್ನತ ಹುದ್ದೆಗಳನ್ನು ಪಡೆಯುವಂತಹ ಹಂತಕ್ಕೆ ಬೆಳೆಯಬೇಕು ಎಂದು ತಿಳಿಸಿದರು. ಜಿಲ್ಲಾ ಭೂಮಾಪನ ಮತ್ತು ಕಂದಾಯ ನಿರ್ಣಯ ತರಬೇತಿ ಸಂಸ್ಥೆ ಪ್ರಾಂಶುಪಾಲ ರಮೇಶ್, ಸಹಾಯಕ ನಿರ್ದೇಶಕರಾದ ವೈ.ಆರ್.ಶಿವಕುಮಾರ್, ಚಿಕ್ಕಣ್ಣ, ಜಗನ್ನಾಥ್, ಹುಸೇನ್, ಸಂಘದ ಜಿಲ್ಲಾಧ್ಯಕ್ಷ ಜಯಪ್ಪ ಮತ್ತಿತರರು ಉಪಸ್ಥಿತರಿದ್ದರು.

ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಹೂಟಗಳ್ಳಿ ನಗರಸಭೆ ಸಜ್ಜು

10 ಎಕರೆ ಜಾಗ ಕೋರಿ ಕೆಐಎಡಿಬಿಗೆ ಹೂಟಗಳ್ಳಿ ನಗರಸಭೆ ಪ್ರಸ್ತಾವನೆ

●28 ಚ.ಕಿ.ಮೀ. ವಿಸ್ತೀರ್ಣದ ವ್ಯಾಪ್ತಿಯಲ್ಲಿ ನಿತ್ಯ 250 ಟನ್ ತ್ಯಾಜ್ಯ ಉತ್ಪತ್ತಿ ●ಕೂರ್ಗಳ್ಳಿಯ ಎಕ್ಸೆಲ್ ಪಬ್ಲಿಕ್ ಶಾಲೆ ಬಳಿಯ ಎರಡು ಎಕರೆ ಜಾಗದಲ್ಲಿ ಕಸ ವಿಲೇವಾರಿ ಕಷ್ಟಸಾಧ್ಯ ●70,000 ಜನಸಂಖ್ಯೆ, 25,000 ಮನೆ, 1,250 ಕೈಗಾರಿಕೆಗಳಿರುವ ನಗರಸಭೆ ವ್ಯಾಪ್ತಿ ●ಎಲ್ಲೆಂದರಲ್ಲಿ 'ಸಿ' ಅಂಡ್ 'ಡಿ' ವೇಸ್ಟ್ ಸುರಿಯುತ್ತಿರುವುದರಿಂದ ಪರಿಸರ ಮಾಲಿನ್ಯ

●ಎಸ್.ಟಿ. ರವಿಕುಮಾರ್

ಮೈಸೂರು, ಮೇ 20– ವಸತಿ ಬಡಾವಣೆ, ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ಭಾರಿ ಪ್ರಮಾಣದ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಮೂಲಕ ಸ್ವಚ್ಛತೆ, ನೈರ್ಮಲ್ಯ ಮತ್ತು ಜನ, ಜಾನುವಾರುಗಳ ಆರೋಗ್ಯ ಕಾಪಾಡಲು ಹೂಟಗಳ್ಳಿ ನಗರಸಭೆ ಮುಂದಾಗಿದೆ.

ಸ್ವಚ್ಛ ಭಾರತ ಅಭಿಯಾನದಡಿ ಪ್ರತೀ ವರ್ಷ ನಗರಾಭಿವೃದ್ಧಿ ಸಚಿವಾಲಯದಿಂದ ಕೈಗೊಳ್ಳುವ ಸ್ವಚ್ಛ ಸರ್ವೇಕ್ಷಣಾ ಸಮೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಲು ಕಸ ಸಂಗ್ರಹ ಮತ್ತು ವಿಲೇವಾರಿ ಪರಿಸ್ಥಿತಿ ಪ್ರಮುಖ ಕಾರಣವಾಗಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಹೂಟಗಳ್ಳಿ ನಗರಸಭೆಯು, ತನ್ನ ವ್ಯಾಪ್ತಿಯ ಕೈಗಾರಿಕಾ ಪ್ರದೇಶದಲ್ಲಿ ಬೃಹತ್ ಪ್ರಮಾಣದ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ಪೂರ್ವ ತಯಾರಿ ನಡೆಸುತ್ತಿದೆ.

10 ಎಕರೆ ಜಾಗಕ್ಕೆ ಮನವಿ: ಕೈಗಾರಿಕೆಗಳು ಹಾಗೂ ಜನವಸತಿ ಬಡಾವಣೆಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ನಿರ್ವಹಣೆಗಾಗಿ ವಿಲೇವಾರಿ ಘಟಕ ನಿರ್ಮಿಸಲು ಕೈಗಾರಿಕಾ ಪ್ರದೇಶದಲ್ಲಿ 10 ಎಕರೆ ಜಾಗ ಮಂಜೂರು ಮಾಡಿಕೊಡುವಂತೆ ಹೂಟಗಳ್ಳಿ ನಗರಸಭೆ ಪೌರಾಯುಕ್ತ ಚಂದ್ರಶೇಖರ ಅವರು ಮೇ 15ರಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ.



ಹೂಟಗಳ್ಳಿ ನಗರಸಭೆಯು 2021ರಲ್ಲಿ ಮೇಲ್ದರ್ಜೆಗೇರಿದ್ದು, ವ್ಯಾಪ್ತಿಯ ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಪ್ರದೇಶದಲ್ಲಿ ನಿತ್ಯ ಉತ್ಪತ್ತಿಯಾಗುವ ತ್ಯಾಜ್ಯ ವಸ್ತು ನಿರ್ವಹಣೆ ಮಾಡಲು ಈಗಾಗಲೇ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ 29–ಪಿ3ಯಲ್ಲಿ 2 ಎಕರೆ ಜಾಗವನ್ನು ರಿಯಾಯಿತಿ ದರದಲ್ಲಿ ಖರೀದಿಸಲಾಗಿದೆಯಾದರೂ, ಉತ್ಪತ್ತಿಯಾಗುತ್ತಿರುವ ಭಾರಿ ಪ್ರಮಾಣದ ತ್ಯಾಜ್ಯ ಸಂಸ್ಕರಣೆ, ವಿಲೇವಾರಿಗೆ ಈ ಜಾಗ ಸಾಲದಾಗಿದೆ ಎಂದು ಪೌರಾಯುಕ್ತರು ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

ಸಾರ್ವಜನಿಕರು ತ್ಯಾಜ್ಯವನ್ನು ಎಲ್ಲೆಂದರಲ್ಲಿ ಸುರಿದು ಮೈಸೂರು ನಗರದ ನೈರ್ಮಲ್ಯಕ್ಕೆ ತೊಂದರೆಯಾಗುತ್ತಿದೆಯಲ್ಲದೆ, ಅಶುಚಿತ್ವವಾಗುತ್ತಿದೆಯಾದ್ದರಿಂದ ನಗರಸಭಾ ವ್ಯಾಪ್ತಿಯ ಕೈಗಾರಿಕಾ ಪ್ರದೇಶದಲ್ಲಿ ಅಥವಾ ಸುತ್ತಮುತ್ತಲಿನ ಪ್ರದೇಶದಲ್ಲಿ ಲಭ್ಯವಿರುವ ಕನಿಷ್ಠ 10 ಎಕರೆ ಜಾಗವನ್ನು ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲು ರಿಯಾಯಿತಿ ದರದಲ್ಲಿ ಮಂಜೂರು ಮಾಡಿಕೊಡುವಂತೆ ಚಂದ್ರಶೇಖರ ಕೆಐಎಡಿಬಿಯನ್ನು ಕೋರಿಕೊಂಡಿದ್ದಾರೆ.

ಸಿ ಅಂಡ್ ಡಿ ತ್ಯಾಜ್ಯ: ಘನತ್ಯಾಜ್ಯದ ಜೊತೆಗೆ ಕಟ್ಟಡ ನಿರ್ಮಾಣ ಮತ್ತು ನೆಲಸಮಗೊಳಿಸುವುದರಿಂದ ಉತ್ಪತ್ತಿಯಾಗುವ ಸಿ ಅಂಡ್ ಡಿ ತ್ಯಾಜ್ಯದ ಪ್ರಮಾಣವೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ವಿಲೇವಾರಿ, ಸಂಸ್ಕರಣೆ, ಮರು ಬಳಕೆ ಪ್ರಕ್ರಿಯೆ ಘಟಕಕ್ಕೆ ಸ್ಥಳದ ಕೊರತೆಯಿಂದಾಗಿ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ಸಾಧ್ಯವಾಗುತ್ತಿಲ್ಲ. ಪರಿಣಾಮ ಜನರು ಎಲ್ಲೆಂದರಲ್ಲಿ ಸಿ ಅಂಡ್ ಡಿ ವೇಸ್ಟ್ ಅನ್ನು ರಾತ್ರೋರಾತ್ರಿ ಸುರಿಯುತ್ತಿರುವುದರಿಂದ ಅಶುಚಿತ್ವ, ಪರಿಸರ ಹಾನಿ ಉಂಟಾಗುತ್ತಿದೆ.

ಕೆಐಎಡಿಬಿಯು 10 ಎಕರೆ ಜಾಗ ನೀಡಿದಲ್ಲಿ ಅಲ್ಲಿ ವಸತಿ, ಕೈಗಾರಿಕಾ ಘನತ್ಯಾಜ್ಯದ ಜೊತೆಗೆ ಸಿ ಅಂಡ್ ಡಿ ವೇಸ್ಟ್ ಅನ್ನೂ ವೈಜ್ಞಾನಿಕವಾಗಿ ವಿಲೇವಾರಿ ಮಾಡಬಹುದಾಗಿದ್ದು, ಸ್ವಚ್ಛತೆ ಕಾಪಾಡಲು ಸಾಧ್ಯವಾಗುತ್ತದೆ ಎಂಬುದು ಹೂಟಗಳ್ಳಿ ನಗರಸಭೆಯ ಅಭಿಪ್ರಾಯವಾಗಿದೆ.

ನಿತ್ಯ 25 ಟನ್ ತ್ಯಾಜ್ಯ ಉತ್ಪತ್ತಿ

ಹೂಟಗಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಹೂಟಗಳ್ಳಿ, ಕೂರ್ಗಳ್ಳಿ, ಬೆಳವಾಡಿ, ಹಿನಕಲ್ ವಸತಿ ಪ್ರದೇಶ, ಹೆಬ್ಬಾಳು, ಹೂಟಗಳ್ಳಿ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳು ಬರುತ್ತವೆ. 28 ಚದರ ಕಿ.ಮೀ. ವಿಸ್ತಾರವಿರುವ ಇಲ್ಲಿ 25,000 ಮನೆಗಳು, 1,250 ಕೈಗಾರಿಕೆಗಳಿದ್ದು, ಸುಮಾರು 70,000 ಜನಸಂಖ್ಯೆ ಹೊಂದಿದೆ. ವ್ಯಾಪ್ತಿಯಲ್ಲಿ ವಸತಿ ಮತ್ತು ಕೈಗಾರಿಕಾ ಪ್ರದೇಶಗಳಿಂದ ನಿತ್ಯ 25 ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದೆ.

ಪ್ರವಾಸಿ ತಾಣಗಳ ರಾಜ್ಯಮಟ್ಟದ ಛಾಯಾಚಿತ್ರ, ಕಿರು ವಿಡಿಯೋ ಸ್ಪರ್ಧೆ, ಪೋಸ್ಟರ್ ಬಿಡುಗಡೆ

ಮೈಸೂರು, ಮೇ 20(ಎಸ್‌ಬಿಡಿ)– 'ಮೈಸೂರಿನ ಅನ್ವೇಷಿಸದ ತಾಣಗಳು (Unexplored Places of Mysuru)' ಶೀರ್ಷಿಕೆಯಡಿಯಲ್ಲಿ ಜಿಲ್ಲಾಡಳಿತದ ಸಹಯೋಗದೊಂದಿಗೆ ಪ್ರವಾಸೋದ್ಯಮ ಇಲಾಖೆ ರಾಜ್ಯ ಮಟ್ಟದ ಛಾಯಾಚಿತ್ರ ಹಾಗೂ ಕಿರು ವಿಡಿಯೋ ಸ್ಪರ್ಧೆ ಆಯೋಜಿಸಿದ್ದು, ಈ ಸ್ಪರ್ಧೆ ಬಗ್ಗೆ ಮಾಹಿತಿಯುಳ್ಳ ಪೋಸ್ಟರ್ ಅನ್ನು ಸೋಮವಾರ ಬಿಡುಗಡೆಗೊಳಿಸಲಾಯಿತು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸ್ಪರ್ಧೆಯ ಪೋಸ್ಟರ್ ಅನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಬಿಡುಗಡೆ ಮಾಡಿದರು. ಈ ವೇಳೆ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಏನಿದು ಸ್ಪರ್ಧೆ?: ಮೈಸೂರೆಂದರೆ ಚಾಮುಂಡಿ ಬೆಟ್ಟ, ಅರಮನೆ, ಮೃಗಾಲಯ, ಸೋಮನಾಥಪುರ, ನಂಜನಗೂಡು, ಹೀಗೆ ಕೆಲವು ಪ್ರವಾಸಿ ತಾಣಗಳು, ಧಾರ್ಮಿಕ ಕೇಂದ್ರಗಳು ಪ್ರಸಿದ್ಧಿಯಾಗಿವೆ. ಆದರೆ ಪ್ರಚಾರಕ್ಕೆ ಬಾರದ, ಸ್ಥಳೀಯರಿಗಷ್ಟೇ ತಿಳಿದಿರುವ ಅದೆಷ್ಟೋ ತಾಣಗಳು, ದೇವಸ್ಥಾನಗಳು, ಕಲೆ, ಸಂಪ್ರದಾಯ, ಆಚರಣೆಗಳು ಸಾಕ್ಷಿವೆ. ಹೀಗೆ ಜಿಲ್ಲೆಯಲ್ಲಿ ಸುಪ್ತವಾಗಿರುವ ಸೊಬಗನ್ನು ಸಾರ್ವಜನಿಕರ ಮೂಲಕವೇ ಸಂಗ್ರಹಿಸಿ, ಪ್ರಚುರಪಡಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಜಿಲ್ಲಾ ವ್ಯಾಪ್ತಿಯ ಸುಂದರ ನದಿಗಳು, ಪ್ರಕೃತಿಯ ರಮಣೀಯ ತಾಣಗಳು, ಜಲಪಾತಗಳು, ವಸ್ತು ಸಂಗ್ರಹಾಲಯಗಳು, ಜಾನಪದ ಹಾಗೂ ಇತರೆ ಕಲಾ ಪ್ರಕಾರಗಳು, ಸಾಂಪ್ರದಾಯಿಕ ಸ್ಥಳೀಯ ಹಬ್ಬಗಳು, ಪಾರಂಪರಿಕ ಕಟ್ಟಡಗಳು ಮತ್ತು ಸ್ಮಾರಕಗಳು, ಧಾರ್ಮಿಕ ಕ್ಷೇತ್ರಗಳು, ಸಾಹಸ ಚಟುವಟಿಕೆಗಳು ಹೀಗೆ ಪ್ರವಾಸೋದ್ಯಮಕ್ಕೆ ಪೂರಕವಾಗುವಂತಹ ಸುಂದರ ದೃಶ್ಯಗಳ ಛಾಯಾಚಿತ್ರಗಳು ಹಾಗೂ ಕಿರು ವಿಡಿಯೋವನ್ನು ಈ ರಾಜ್ಯ ಮಟ್ಟದ ಸ್ಪರ್ಧೆಗಿಡಬಹುದು. ಆಯ್ಕೆಯಾದ ಅತ್ಯುತ್ತಮ ಛಾಯಾಚಿತ್ರ/ವಿಡಿಯೋಗಳಿಗೆ ಪ್ರಥಮ ಬಹುಮಾನವಾಗಿ 25 ಸಾವಿರ ರೂ., ದ್ವಿತೀಯ ಬಹುಮಾನ 15 ಸಾವಿರ ಹಾಗೂ ತೃತೀಯ ಬಹುಮಾನ 10 ಸಾವಿರ ರೂ. ನೀಡಲಾಗುವುದು.

ತಿಂಗಳು ಸಮಯ: ಛಾಯಾಚಿತ್ರ ಹಾಗೂ ಕಿರು ವಿಡಿಯೋವನ್ನು ಸ್ಪರ್ಧೆಗೆ ಸಲ್ಲಿಸಲು ಜೂ.20 ಕಡೇ ದಿನವಾಗಿದೆ. ಹೆಚ್ಚಿನ ಮಾಹಿತಿಗೆ https://mysore.nic.inen/competitions/ ಅಥವಾ ಮೊ.ಸಂ.7411564510 ಅಥವಾ 9008693409 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



'ಮೈಸೂರಿನ ಅನ್ವೇಷಿಸದ ತಾಣಗಳು' ರಾಜ್ಯ ಮಟ್ಟದ ಛಾಯಾಚಿತ್ರ ಹಾಗೂ ಕಿರು ವಿಡಿಯೋ ಸ್ಪರ್ಧೆಯ ಪೋಸ್ಟರ್ ಅನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೋಮವಾರ ಬಿಡುಗಡೆ ಮಾಡಿದರು. ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ ಮತ್ತಿತರರಿದ್ದರು.

ಗಾಂಜಾ ಸಾಗಿಸುತ್ತಿದ್ದವನಿಗೆ 5 ವರ್ಷ ಜೈಲು

ಮೈಸೂರು, ಮೇ 20(ಎಸ್‌ಪಿಎನ್)– ಮೈಸೂರಿನ ಮಂಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಗಾಂಜಾ ಪ್ರಕರಣದ ಆರೋಪಿಗೆ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಐದು ವರ್ಷ ಸಾದಾ ಶಿಕ್ಷೆ ಮತ್ತು 25 ಸಾವಿರ ದಂಡ ವಿಧಿಸಿ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್ ತೀರ್ಪು ಪ್ರಕಟಿಸಿದ್ದಾರೆ.

ಮೈಸೂರು ಮಂಡಿ ಮೊಹಲ್ಲಾದ ಲೇಟ್ ಮಕ್ಬೂಲ್ ಅಹಮದ್ ಪುತ್ರ ಮೊಹಮದ್ ಯಾಸಿನ್(25) ಎಂಬಾತನೆ ಅಪರಾಧಿ. ಈತನನ್ನು ಮಂಡಿ ಪೊಲೀಸರು ಬಂಧಿಸಿ, 1.335 ಕೆಜಿ ಗಾಂಜಾವನ್ನು ವಶಪಡಿಸಿಕೊಂಡಿದ್ದು, ಪೊಲೀಸರು ಈತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಪ್ರಕರಣ ವಿಚಾರಣೆ ನಡೆಸಿದ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರನ್ಯಾಯಾಲಯದ ನ್ಯಾ.ಪ್ರಭಾವತಿ ಎಂ.ಹಿರೇಮಠ್ ಅವರು, ಯಾಸಿನ್ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಈ ಮೇಲಿನ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ರಂಜನರಾವ್ ವಾದ ಮಾಡಿದ್ದರು. ಈ ಪ್ರಕರಣದ ಮಂಡಿ ಠಾಣೆಯ ಅಂದಿನ ತನಿಖಾಧಿಕಾರಿ ವಿ.ನಾರಾಯಣಸ್ವಾಮಿ, ಸಿಬ್ಬಂದಿ ವರ್ಗದವರಿಗೆ ನಗರ ಪೊಲೀಸ್ ಆಯುಕ್ತ ರಮೇಶ್ ಬಿ.ಬಾನೋತ್ ಅಭಿನಂದನೆ ಸಲ್ಲಿಸಿದ್ದಾರೆ.

ಬೆಂಗಳೂರಿನಲ್ಲಿ ತಡರಾತ್ರಿವರೆಗೆ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಸಿಸಿಬಿ ದಾಳಿ

ಮಾದಕ ವಸ್ತು ವಶ, ನಟ-ನಟಿ, ಉದ್ಯಮಿಗಳು ಭಾಗಿ

ಬೆಂಗಳೂರು,ಮೇ20.– ಉದ್ಯಾನ ನಗರಿಯ ಎಲೆಕ್ಟ್ರಾನಿಕ್ ಸಿಟಿ ಬಳಿಯಿರುವ ಫಾರ್ಮ್ ಹೌಸ್ ಒಂದರಲ್ಲಿ ಮೇ 19ರ ತಡರಾತ್ರಿಯವರೆಗೂ ನಡೆದಿದ್ದ ರೇವ್ ಪಾರ್ಟಿಯೊಂದರ ಮೇಲೆ ಬೆಂಗಳೂರಿನ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದು ಆ ದಾಳಿಯಲ್ಲಿ ಡ್ರಗ್ಸ್ ಪತ್ತೆಯಾಗಿರುವ ವಿಚಾರ ಬೆಳಕಿಗೆ ಬಂದಿದೆ. ಬೆಳಗಿನ ಜಾವ 3 ಗಂಟೆಯ ಸುಮಾರಿಗೆ ಈ ಪಾರ್ಟಿ ಮೇಲೆ ರೈಡ್ ನಡೆಸಲಾಗಿದೆ.


ಎಂಡಿಎಂಎನ್ ಮಾತ್ರೆಗಳು, ಕೊಕೇನ್ ರೀತಿಯ ಡ್ರಗ್ಸ್ ಪತ್ತೆಯಾಗಿದೆ. ಜೊತೆಗೆ, ದಾಳಿಯ ಹಿನ್ನೆಲೆಯಲ್ಲಿ ಪಾರ್ಟಿ ಆಯೋಜಕ ಹಾಗೂ ಮೂವರು ಡ್ರಗ್ ಪೆಡ್ಲರ್ ಸೇರಿ ಐವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆಂದು ಹೇಳಲಾಗಿದೆ.

ಈ ಪಾರ್ಟಿಯನ್ನು ಹುಟ್ಟುಹಬ್ಬದ ಹೆಸರಿನಲ್ಲಿ ನಡೆಸಲಾಗಿತ್ತು. ಸಂಜೆ 5 ಗಂಟೆಯಿಂದ 6 ಗಂಟೆಯವರೆಗೆ ಪಾರ್ಟಿಯನ್ನು ಆಯೋಜಿಸಲಾಗಿತ್ತು. ಆದರೆ, ತಡರಾತ್ರಿಯಾದರೂ ಪಾರ್ಟಿ ಮುಗಿದಿರಲಿಲ್ಲ. ಮುಂಜಾನೆಯವರೆಗೂ ಪಾರ್ಟಿ ಮುಂದುವರಿದಿರುವ ಬಗ್ಗೆ ಮಾಹಿತಿ ಸಿಕ್ಕ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸ್‌ನ ಮಾದಕ ವಸ್ತು ನಿಗ್ರಹ ದಳದ ಪೊಲೀಸರು ಪಾರ್ಟಿಯ ಮೇಲೆ ರೈಡ್ ಮಾಡಿದ್ದಾರೆ. ಪಾರ್ಟಿಯಲ್ಲಿ ಕರ್ನಾಟಕದಲ್ಲಿರುವ ಆಂಧ್ರಪ್ರದೇಶ ಮೂಲದ ವ್ಯಕ್ತಿಗಳು ಹಾಗೂ ಆಂಧ್ರಪ್ರದೇಶದ ನಟ – ನಟಿಯರು, ಮಾಡೆಲ್‌ಗಳು ಪಾಲ್ಗೊಂಡಿದ್ದರು ಎಂದು ಹೇಳಲಾಗಿದೆ.

ಮೂಲಗಳ ಪ್ರಕಾರ, ಈ ಫಾರ್ಮ್ ಹೌಸ್, ಖಾಸಗಿ ಕಂಪನಿಯೊಂದರ ಮಾಲೀಕರಾದ ಗೋಪಾಲ್ ಎಂಬುವರಿಗೆ ಸೇರಿದ್ದು. ಹೈದರಾಬಾದ್ ಮೂಲದ ವಾಸು ಎಂಬಾತ ಪಾರ್ಟಿ ಆಯೋಜನೆ ಮಾಡಿದ್ದ. ಈ ಪಾರ್ಟಿಯು ಅದ್ದೂರಿಯಾಗಿ ಆಯೋಜನೆಗೊಂಡಿತ್ತು ಹಾಗೂ ಐಷಾರಾಮಿ ವ್ಯಕ್ತಿಗಳು ಈ ಪಾರ್ಟಿಯಲ್ಲಿ ಭಾಗವಹಿಸಿದ್ದರು ಎಂಬುದಕ್ಕೆ ಪ್ರಾಥಮಿಕ ತನಿಖೆಯಲ್ಲಿ ಕೆಲವಾರು ಮಾಹಿತಿಗಳು ಸಿಕ್ಕಿವೆ.


ಈ ಪಾರ್ಟಿಯನ್ನು ಆಯೋಜಿಸಿದ್ದ ಗೋಪಾಲ್ ವಾಸು ಎಂಬುವರು, ತಮ್ಮ ಪಾರ್ಟಿಗೆ ಬರುವ ಅತಿಥಿಗಳನ್ನು ಹೈದರಾಬಾದ್ ನಿಂದ ಬೆಂಗಳೂರಿಗೆ ಕರೆ ತರಲು ವಿಶೇಷ ವಿಮಾನಗಳನ್ನು ಬುಕ್ ಮಾಡಿದ್ದರೆಂಬ ವಿಚಾರ ತಿಳಿದುಬಂದಿದೆ.

ಪೈ.ಚಂದ್ರಶೇಖರ್ ಹುಟ್ಟುಹಬ್ಬ ಆಚರಣೆ.....



ಮೈಸೂರು ಜಿಲ್ಲಾ ಕುಸ್ತಿ ಸಂಘದ ಅಧ್ಯಕ್ಷ ಇಟ್ಟಿಗೆಗೂಡಿನ ಪೈ. ಎನ್.ಚಂದ್ರಶೇಖರ್ ಅವರ ಹುಟ್ಟುಹಬ್ಬವನ್ನು ಸಂಘದ ಕಚೇರಿಯಲ್ಲಿ ಆಚರಿಸಲಾಯಿತು. ಚಿತ್ರದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಪೈ.ಸ್ಟಾರ್ ವೆಂಕಟೇಶ್(ಹಿನಕಲ್), ಖಜಾಂಚಿ ಪೈ. ರಾಜೇಶ್, ಪೈ.ಗಿರೀಶ್ ನಕ್ಷತ್ರ ಪೈ. ಗೋಲ್ಡ್‌ಮನ್ ಮಹೇಶ್, ಪೈ. ರಮೇಶ್ ದ್ರೋಣ, ಪೈ. ಪ್ರಸನ್ನ ರಾಕ್, ಪೈ. ಬಸವರಾಜು (ಹಿನಕಲ್), ಪೈ ಲೋಕೇಶ್, ಪೈ ಬಸಂತ್ ನಾಯಕ್, ಪೈ ಅಮೃತ್ ಕುಮಾರ್, ಚಂದ್ರೇಗೌಡ, ಪೈ. ದೇವರಾಜ್, ಪೈ. ಆಟೋ ಶಿವಣ್ಣ ಇತರರನ್ನು ಕಾಣಬಹುದು.

ಎಂಆರ್‌ಸಿಗೆ ಸ್ಟೀವರ್ಡ್ ನೇಮಕ



ಮೈಸೂರು, ಮೇ 20– ಮೈಸೂರು ರೇಸ್ ಕ್ಲಬ್(ಎಂಆರ್‌ಸಿ) ಲಿಮಿಟೆಡ್‌ನ ಸ್ಟೀವರ್ಡ್ ಆಗಿ ನಗರದ ಹೋಟೆಲ್ ಎಸ್‌ಸಿವಿಡಿಎಸ್ ಮಾಲೀಕ ವೈ.ಪಿ.ಉದಯಶಂಕರ್ ನೇಮಕಗೊಂಡಿದ್ದಾರೆ. ಸ್ಟೀವರ್ಡ್ ಆಗಿದ್ದ ಕೆ.ಜಿ.ಅನಂತರಾಜ್ ಅರಸ್ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ವೈ.ಪಿ.ಉದಯಶಂಕರ್ ಅವರನ್ನು ಕ್ಲಬ್‌ನ ವ್ಯವಸ್ಥಾಪಕ ಸಮಿತಿ ನೇಮಿಸಿದೆ. ಇದು ಮೇ 18ರಿಂದ ಕ್ಲಬ್‌ನ ಮುಂದಿನ ವಾರ್ಷಿಕ ಸಾಮಾನ್ಯ ಸಭೆಯವರೆಗೆ ಚಾಲ್ತಿಯಲ್ಲಿರಲಿದೆ ಎಂದು ಎಂಆರ್‌ಸಿ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ ತಿಳಿಸಿದ್ದಾರೆ.

ಇಂದಿನ ಪೀಳಿಗೆ ಶಾಸ್ತ್ರೀಯ ಸಂಗೀತ ಪರಂಪರೆ ಮುಂದುವರೆಸಿಕೊಂಡು ಹೋಗಬೇಕು

ವಿದುಷಿ ಜಯಂತಿ ಕುಮರೇಶ್ ಸಲಹೆ

ಮೈಸೂರು, ಮೇ 20(ಎಸ್‌ಪಿಎನ್)– ಶಾಸ್ತ್ರೀಯ ಸಂಗೀತ ಪರಂಪರೆಯನ್ನು ಇಂದಿನ ಯುವ ಪೀಳಿಗೆ ಮುಂದುವರೆಸಿಕೊಂಡು ಹೋಗಬೇಕು ಎಂದು ವಿದುಷಿ ಜಯಂತಿ ಕುಮರೇಶ್ ಸಲಹೆ ನೀಡಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಲಕ್ಷ್ಮೀಪುರಂನ ನಾದಬ್ರಹ್ಮ ಸಭಾಂಗಣದಲ್ಲಿ ಗಾನಕಲಾ ಭೂಷಣ ವಿದ್ವಾನ್ ಎಂ.ಜೆ.ಶ್ರೀನಿವಾಸ ಅಯ್ಯಂಗಾರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಭಾರತೀಯ ಸಂಗೀತ ಪರಂಪರೆಯಲ್ಲಿ ವೀಣೆಯ ಸ್ಥಾನ ತೀರಾ ಮಹತ್ವದ್ದು, ಜೊತೆಗೆ ವೀಣೆ ಅತ್ಯಂತ ಪುರಾತನ ಕಲೆ. ವೇದ, ಉಪನಿಷತ್ ಹಾಗೂ ಪುರಾಣಗಳಲ್ಲಿ ಇದರ ಬಗ್ಗೆ ಉಲ್ಲೇಖವಿದೆ.

ವೀಣಾ ಮಾಂತ್ರಿಕ ಎಂ.ಜೆ.ಶ್ರೀನಿವಾಸ ಅಯ್ಯಂಗಾರರು 1924ರ ಮೇ 20ರಂದು ಜನಾರ್ಧನ ಅಯ್ಯಂಗಾರ್ ಮತ್ತು ಜಾನಕಮ್ಮ ದಂಪತಿ ಪುತ್ರರಾಗಿ ಜನಿಸಿದರು. ಇವರು ಹಾಸನ ಜಿಲ್ಲೆಯ ದೊಡ್ಡಮಗ್ಗೆ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಕೃಷಿಕರಾಗಿದ್ದರು. ಅಲ್ಲದೆ ಇವರ ತಂದೆ ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರ ಶಿಷ್ಯರು. ಸ್ವತಃ ಹಾಡುಗಾರಿಕೆಯಲ್ಲಿ ವೀಣೆ ನುಡಿಸುವುದರಲ್ಲಿ ಪರಿಣತಿ ಹೊಂದಿದ್ದರು. ಎಂ.ಜೆ.ಶ್ರೀನಿವಾಸ ಅಯ್ಯಂಗಾರ್ ಅವರಿಗೆ ವೀಣೆ ಕಲಿಕೆಗೆ ಮನೆಯೇ ಮೊದಲ ಪಾಠಶಾಲೆಯಾಗಿತ್ತು ಎಂದರು.

ಎಂಜೆಎಸ್ ಅವರಿಗೆ ಗಮಕ ಮತ್ತು ಹಾಡುಗಾರಿಕೆ ಅಲ್ಲದೆ, ವೀಣಾ ವಾದನಕ್ಕೆ ಹೊಸ ಸ್ವರೂಪ ತಂದುಕೊಟ್ಟರು. ಮೈಸೂರಿಗೆ ಆಗಮಿಸಿ, ಅನೇಕ ಶಿಷ್ಯರಿಗೆ ವೀಣಾವಾದನ ಕಲಿಸಿಕೊಟ್ಟು ಈ ಪರಂಪರೆಯನ್ನು ಉಳಿಸುವಲ್ಲಿ ಇವರ ಪಾತ್ರ ಅಮೂಲ್ಯ ಎಂದರು. ವೇದಿಕೆ ಕಾರ್ಯಕ್ರಮದ ನಂತರದ ವಿದುಷಿ ಜಯಂತಿ ಕುಮರೇಶ್ ವೀಣೆ ನುಡಿಸಿದರು. ಇವರಿಗೆ ವಿದ್ವಾನ್ ತುಮಕೂರು ಬಿ.ರವಿಶಂಕರ್ (ಮೃದಂಗ), ವಿದ್ವಾನ್ ಟ್ರಿಚಿ ಎಸ್.ಕೃಷ್ಣಸ್ವಾಮಿ (ಘಟಂ) ನುಡಿಸಿ ಸಾಥ್ ನೀಡಿದರು.



ಹೆಚ್.ಡಿ.ರೇವಣ್ಣಗೆ ಬಿಗ್ ರಿಲೀಫ್

ಮನೆ ಕೆಲಸದಾಕೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಜಾಮೀನು ಮಂಜೂರು



ಬೆಂಗಳೂರು, ಮೇ 20(ಕೆಎಂಶಿ)– ಮನೆ ಕೆಲಸದಾಕೆ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರಿಗೆ ನ್ಯಾಯಾಲಯ ಷರತ್ತು ಬದ್ಧ ಜಾಮೀನು ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 42ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರಾದ ಜೆ.ಪ್ರೀತ್, ತಾವು ಕಾಯ್ದಿರಿಸಿದ್ದ ತೀರ್ಪನ್ನು ಇಂದು ಪ್ರಕಟಿಸಿದರು. ಐದು ಲಕ್ಷ ರೂ. ಮೊತ್ತದ ಬಾಂಡ್ ಹಾಗೂ ಇಷ್ಟೇ ಮೊತ್ತದ ಭದ್ರತೆ ನೀಡುವುದೂ ಸೇರಿದಂತೆ ಷರತ್ತುಗಳನ್ನು ವಿಧಿಸಿ ಜಾಮೀನು ಮಂಜೂರು ಮಾಡಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ ಮೇ 17 ರಂದು ತೀರ್ಪು ಕಾಯ್ದಿರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಇನ್ನೊಂದು ಪ್ರಕರಣದಲ್ಲಿ ಈಗಾಗಲೇ ಜಾಮೀನು ದೊರೆತಿರುವುದರಿಂದ ರೇವಣ್ಣಗೆ ಬಿಗ್ ರಿಲೀಫ್ ದೊರೆತಂತಾಗಿದೆ. ಇಂದು ವಿಚಾರಣೆಗೆ ರೇವಣ್ಣ ಬರಿಗಾಲಲ್ಲೇ ಹಾಜರಾಗಿದ್ದರು. ಜಾಮೀನು ದೊರೆತ ಬಳಿಕ ಅವರ ಮುಖದಲ್ಲಿ ನಿರಾಳತೆ ಕಂಡುಬಂತು. ನಂತರ ಹಾಸನಕ್ಕೆ ತೆರಳಿದರು. ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ರೇವಣ್ಣ ವಿರುದ್ಧ ಅತ್ಯಾಚಾರ ಆರೋಪ ಪ್ರಕರಣ ದಾಖಲಾಗಿತ್ತು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	80.72 ಅಡಿ
ಒಳಹರಿವು	1416 ಕ್ಯೂಸೆಕ್
ಹೊರಹರಿವು	270 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2823.09 ಅಡಿ
ಒಳ ಹರಿವು	287 ಕ್ಯೂಸೆಕ್
ಹೊರ ಹರಿವು	200 ಕ್ಯೂಸೆಕ್

ಎಸ್‌ಎಸ್‌ಎಲ್‌ಸಿ : ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 20– ಮೈಸೂರಿನ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ವಿದ್ಯಾಶಾಲೆ ವಿದ್ಯಾರ್ಥಿನಿ ಎಂ. ಮಾನಸ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 560 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಈಕೆ ಪತ್ರಿಕಾ ವಿತರಕ ಎ. ಮಹೇಶ್ ಮತ್ತು ಕೆ. ವಸಂತ ದಂಪತಿ ಪುತ್ರಿ.

ಲೋಕಸಭಾ ಚುನಾವಣೆಯಲ್ಲಿ ಕಾರ್ಯಕರ್ತರು ಸೇನಾನಿಗಳಂತೆ ದುಡಿದಿದ್ದಾರೆ

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಪ್ರಶಂಸೆ

ಮೈಸೂರು, ಮೇ 20(ಎಸ್‌ಬಿಡಿ)– ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾರ್ಯಕರ್ತರು ಸೇನಾನಿಗಳಂತೆ ದುಡಿದಿದ್ದಾರೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಪ್ರಶಂಸಿಸಿದರು.


ಮೈಸೂರು ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಜಿಲ್ಲಾ ಗ್ರಾಮಾಂತರ ಪದಾಧಿಕಾರಿಗಳ ಮಾಸಿಕ ಸಭೆಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಶಿಸ್ತಿನ ಸಿಪಾಯಿಗಳಂತೆ ಕೆಲಸ ಮಾಡಿದ್ದೀರಿ. ಹಗಲಿರುಳು ಪ್ರಾಮಾಣಿಕವಾಗಿ ದುಡಿದಿದ್ದೀರಿ. ನಿಮ್ಮ ಶ್ರಮಕ್ಕೆ ಖಂಡಿತ ಉತ್ತಮ ಪ್ರತಿಫಲ ಸಿಗಲಿದೆ. ಮುಂದಿನ ದಿನಗಳಲ್ಲೂ ಪಕ್ಷಕ್ಕಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಪಕ್ಷದ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರ ಸೂಚನೆಯಂತೆ ನಾವೆಲ್ಲರೂ ನಿರೀಕ್ಷೆಗೂ ಮೀರಿ ಲೋಕಸಭಾ ಚುನಾವಣೆಯಲ್ಲಿ ಕೆಲಸ ಮಾಡಿದ್ದೇವೆಂಬ ಸಮಾಧಾನವಿದೆ. ಮೈಸೂರು ಸೇರಿದಂತೆ ರಾಜ್ಯದಲ್ಲಿ ಕನಿಷ್ಠ 25 ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದೆ. ಮುಂದೆಯೂ ರಾಜ್ಯಾಧ್ಯಕ್ಷರ ಮಾರ್ಗದರ್ಶನದಲ್ಲಿ ಶ್ರಮಿಸುವ ಮೂಲಕ ಪಕ್ಷವನ್ನು ಮತ್ತಷ್ಟು ಬಲಪಡಿಸೋಣ. ಮತ್ತೆ ಮೋದಿ ಅವರು ಭವ್ಯ ಭಾರತದ ಪ್ರಧಾನಿಗಳಾಗಿ ದೇಶವನ್ನು ಮುನ್ನಡೆಸಲಿದ್ದಾರೆ. ನಾವೂ ಕೂಡ ನಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಿ, ಮೋದಿ ಅವರ ಕೈಬಲಪಡಿಸೋಣ ಎಂದರು.

ಬಿ.ವೈ.ವಿಜಯೇಂದ್ರ ಅವರು ಪಕ್ಷದ ರಾಜ್ಯಾಧ್ಯಕ್ಷರಾದ ಬಳಿಕ ಪಕ್ಷದ ಶಕ್ತಿ ಹೆಚ್ಚಿದೆ. ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಯುವಕರು ತುಂಬಾ ಉತ್ಸಾಹದಿಂದ ಕೆಲಸ ಮಾಡಿದ್ದರಿಂದ ಮತದಾನ ಪ್ರಮಾಣ ಹೆಚ್ಚಾಗಿದೆ. ಜನರು ಯುವ ನಾಯಕತ್ವವನ್ನು ಬೆಂಬಲಿಸುತ್ತಿದ್ದಾರೆ. ವಿಜಯೇಂದ್ರ ಅವರು ಅಧ್ಯಕ್ಷರಾದ ಬಳಿಕ ಅವಿಶ್ರಾಂತವಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ, ಪಕ್ಷವನ್ನು ಸಂಘಟಿಸುತ್ತಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಉತ್ಸಾಹ ಹೆಚ್ಚಿಸಿದ್ದಾರೆ ಎಂದು ತಿಳಿಸಿದರು.

ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಗೆಲುವಿಗೂ ಶ್ರಮಿಸುವಂತೆ ರಾಜ್ಯಾಧ್ಯಕ್ಷರು ಕರೆ ನೀಡಿದ್ದಾರೆ. ಎನ್‌ಡಿಎ ಅಭ್ಯರ್ಥಿಯಾದ ಕೆ.ವಿವೇಕಾನಂದ ಅವರನ್ನು ಗೆಲ್ಲಿಸುವ ನಿಟ್ಟಿನಲ್ಲಿ ಸಂಘಟನಾತ್ಮಕವಾಗಿ ದುಡಿಯಬೇಕು. ಗ್ರಾಮಾಂತರ ವಿಭಾಗದಲ್ಲಿ 11 ಬೂತ್‌ಗಳಿರಲಿದ್ದು, ಎಲ್ಲಾ ಕೇಂದ್ರಗಳಲ್ಲೂ ನಮ್ಮ ಅಭ್ಯರ್ಥಿಗೆ ಹೆಚ್ಚು ಮತ ದೊರಕುವ ನಿಟ್ಟಿನಲ್ಲಿ ಎಲ್ಲಾ ತಾಲೂಕು ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳು ಚುನಾವಣಾ ಸಿದ್ಧತೆಯನ್ನು ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಬಾಲಕೃಷ್ಣ, ಕಿರಣ್ ಜಯರಾಮೇಗೌಡ, ಜಿಲ್ಲಾ ಪದಾಧಿಕಾರಿಗಳು, ತಾಲೂಕು ಘಟಕದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮೋರ್ಚಾ ಸೇರಿದಂತೆ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅಧ್ಯಕ್ಷತೆಯಲ್ಲಿ ಸೋಮವಾರ ಸಭೆ ನಡೆದ ಸಂದರ್ಭದಲ್ಲಿ ಪಕ್ಷದ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಅವರನ್ನು ಅಭಿನಂದಿಸಲಾಯಿತು.

ಮೈಸೂರು ಮಿತ್ರ ಮಂಗಳವಾರ 21 ಮೇ 2024

ಮರಿತಿಬ್ಬೇಗೌಡರ ಪರ 'ಕೈ' ಮುಖಂಡರಿಂದ ಮತಯಾಚನೆ

ತಿ.ನರಸೀಪುರ, ಮೇ 20– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡರ ಪರ ತಾಪಂ ಮಾಜಿ ಅಧ್ಯಕ್ಷ ನೆರಗ್ಯಾತನಹಳ್ಳಿ ಕುಮಾರಸ್ವಾಮಿ ನೇತೃತ್ವದಲ್ಲಿ ಪಟ್ಟಣದ ವಿವಿಧ ಶಾಲಾ ಮತ್ತು ಕಾಲೇಜುಗಳಲ್ಲಿ ಕಾಂಗ್ರೆಸ್ ಮುಖಂಡರು ಮತಯಾಚಿಸಿದರು.

ಪಟ್ಟಣದ ವಿದ್ಯೋದಯ ಪ್ರಥಮ ದರ್ಜೆ ಕಾಲೇಜು, ಬಾಲಕ ಮತ್ತು ಬಾಲಕಿಯರ ಶಾಲೆ, ಪಿಆರ್‌ಎಂ ಪ್ರಥಮ ದರ್ಜೆ ಕಾಲೇಜು, ಐಟಿಐ ಕಾಲೇಜು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ತೆರಳಿದ ಕಾಂಗ್ರೆಸ್ ಮುಖಂಡರು, ಮರಿತಿಬ್ಬೇಗೌಡರ ಪರ ಮತಯಾಚನೆ ಮಾಡಿದರು. ವಿದ್ಯೋದಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ



ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡರ ಪರ ವಿದ್ಯೋದಯ ಶಿಕ್ಷಣ ಸಂಸ್ಥೆಯಲ್ಲಿ ಕಾಂಗ್ರೆಸ್ ಮುಖಂಡರು ಮತಯಾಚಿಸಿದರು.

ಅವರನ್ನು ಭೇಟಿ ಮಾಡಿದ ಕಾಂಗ್ರೆಸ್ ಮುಖಂಡರು, ಮರಿತಿಬ್ಬೇಗೌಡರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ತಾಪಂ ಮಾಜಿ ಅಧ್ಯಕ್ಷ ನೆರಗ್ಯಾತನ ಹಳ್ಳಿ ಕುಮಾರಸ್ವಾಮಿ ಮಾತನಾಡಿ, ಶಿಕ್ಷಕರ ಶ್ರೇಯೋಭಿವೃದ್ಧಿ, ಹೋರಾಟ ಹಾಗೂ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಶಿಕ್ಷಕರ ಪರ ನಿರಂತರ ಹೋರಾಟ ಮಾಡುತ್ತಾ ಬಂದಿರುವ ಮರಿತಿಬ್ಬೇಗೌಡರು ಮತ್ತೊಂದು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಬೇಕಿದೆ. ಶಿಕ್ಷಣ ರಂಗವನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಭಾವಿಸಿರುವ ತಿಬ್ಬೇಗೌಡರು ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಶೈಕ್ಷಣಿಕ ರಂಗದ ಪ್ರಗತಿಗಾಗಿ ದುಡಿಯುತ್ತಿದ್ದಾರೆ. ಹಾಗಾಗಿ ಮತ್ತೊಂದು ಅವಧಿಗೆ ಅವಕಾಶ ಸಿಕ್ಕಲ್ಲಿ ನೆನೆಗುದಿಗೆ ಬಿದ್ದಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಲು ಮುಂದಾಗಿದ್ದಾರೆ. ವಿಧಾನಪರಿಷತ್ ಉಪ ಸಭಾಪತಿಯಾಗಿ ಸೇವೆ ಸಲ್ಲಿಸಿ, ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ 4ನೇ ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿರುವ ಇವರಿಗೆ ಮತ್ತೊಂದು ಅವಧಿಗೆ ಅವಕಾಶ ಕಲ್ಪಿಸಿಕೊಡುವಂತೆ ಕುಮಾರಸ್ವಾಮಿ ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ಧಾರ್ಥ, ವಿದ್ಯೋದಯ ಶಿಕ್ಷಣ ಸಂಸ್ಥೆ ಪ್ರಾಚಾರ್ಯ ಬಸವಣ್ಣ ಸ್ವಾಮಿ, ಎಂ.ಸುರೇಶ್, ಮಾನಸ, ಎನ್.ಕಲ್ಪನ, ಉಪನ್ಯಾಸಕರಾದ ಮೂಗೂರು ಕುಮಾರಸ್ವಾಮಿ, ರವಿ, ನಾಗೇಂದ್ರ, ರವೀಶ್ ಕುಮಾರ್, ಶಿವಶಂಕರ್, ಕೆಜಿ.ಸವಿತಾ, ಆರ್.ಎಸ್.ಮಹದೇವ ಸ್ವಾಮಿ, ಸಹಾಯಕ ಆಡಳಿತ ಅಧಿಕಾರಿ ಶಿವ ನಂಜಪ್ಪ ಮರಿತಿಬ್ಬೇಗೌಡರ ಆಪ್ತ ಸಹಾಯಕ ಕಂಚುಗನಹಳ್ಳಿ ಷಡಕ್ಷರಿ ಹಾಜರಿದ್ದರು.

ಶ್ರೀಲಕ್ಷ್ಮೀನರಸಿಂಹಸ್ವಾಮಿ ವಿಜೃಂಭಣೆಯ ರಥೋತ್ಸವ




ಸರಗೂರು, ಮೇ 20– ಪಟ್ಟಣದ 7ನೇ ವಾರ್ಡ್‌ನಲ್ಲಿ ಶ್ರೀಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ಪಟ್ಟಣದ ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಾಲಯವನ್ನು ಬಣ್ಣ ಬಣ್ಣದ ರಂಗೋಲಿ, ವಿದ್ಯುತ್ ದೀಪ ಹಾಗೂ ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು ಮುಂಜಾನೆಯಿಂದಲೇ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆದವು. ಬಳಿಕ ದೇವರ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ನದಿಗೆ ತಂದು ಗಂಗೆ ಪೂಜೆ ನೆರವೇರಿಸಲಾಯಿತು. ಬಳಿಕ ಹೋಮ–ಹವನ ನಡೆಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ಉತ್ಸವ ಮೂರ್ತಿಯನ್ನು ದೇವಾಲಯಕ್ಕೆ ತರಲಾಯಿತು. ಈ ವೇಳೆ ವಿವಿಧ ಹೂಗಳಿಂದ ಅಲಂಕೃತಗೊಂಡ ರಥದಲ್ಲಿ ಶ್ರೀದೇವಿ ಭೂದೇವಿ ಸಮೇತ ವಾಸುದೇವ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು. ಬಳಿಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಭಕ್ತರು ರಥವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಎಳೆದು ಪುನೀತರಾದರು. ಅಲ್ಲದೇ ತೆಂಗಿನಕಾಯಿ ಹೊಡೆದು ಹರಕೆ ತೀರಿಸಿದರು. ಭಕ್ತರಿಗಾಗಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ದೇವಸ್ಥಾನದ ಪ್ರಧಾನ ಅರ್ಚಕ ಕಸ್ತೂರಿ ರಂಗನ್, ಕೇಶವ, ಆಗಮಿಕರಾದ ಭರತ್ ಭಟ್ಟರ್, ಕೃಷ್ಣ ಭಟ್ಟರ್, ನಿಖಿಲ್ ಭಟ್ಟರ್, ಗಂಧರ್ವ, ಪಪಂ ಸದಸ್ಯ ವಿರೇಶ್, ದೇವಾಲಯದ ಸಮಿತಿ ಸದಸ್ಯರಾದ ಜಿ.ಕೆ. ಶ್ರೀಧರ್, ರಾಜಣ್ಣ, ರವಿಂದ್ರನ್, ಪರಿಚಾರಕರಾದ ಶೇಷನಾರಾಯಣ್, ಎಲ್ಲಾ ಸಮಾಜದ ಮುಖಂಡರು ಸೇರಿದಂತೆ ಸಾರ್ವಜನಿಕರಿದ್ದರು.

ಮುಂದುವರೆದ ಮಳೆ: ತಂಬಾಕು ಬ್ಯಾರನ್, ಮನೆ ಕುಸಿತ

ಮಳೆ ಅಬ್ಬರಕ್ಕೆ ಹಾರಿ ಹೋದ ಮೇಲ್ಛಾವಣಿ, ಬೆಳೆನಾಶ





ಹುಣಸೂರು, ಮೇ 20– ತಾಲೂಕಿನಲ್ಲಿ ಸೋಮವಾರವೂ ಮಳೆ ಮುಂದುವರೆದಿದ್ದು, ತಂಬಾಕು ಹದ ಮಾಡುವ 2 ಬ್ಯಾರನ್ ಹಾಗೂ ಮನೆ ಕುಸಿದು ಬಿದ್ದಿದೆ. ಮಳೆ ಅಬ್ಬರಕ್ಕೆ ಕೆರೆ ಕೋಡಿ ಒಡೆದು ಹೋಗಿದೆ. ತಂಬಾಕು ಹಾಗೂ ಶುಂಠಿ ಜಮೀನುಗಳಲ್ಲಿ ಅಪಾರ ಪ್ರಮಾಣದ ನೀರು ನಿಂತಿದ್ದು, ಬೆಳೆಗಳು ಕೊಳೆಯುವ ಭೀತಿ ಎದುರಾಗಿದೆ.

ಹನಗೋಡು ಹೋಬಳಿ ಕಚುವಿನಹಳ್ಳಿ ಗ್ರಾಮದ ಲೇ.ಜವರೇಗೌಡರ ಪತ್ನಿ ಜಯಮ್ಮ ಮತ್ತು ಹರೀನಹಳ್ಳಿಯ ರುದ್ರಾರಾಧ್ಯರ ಪತ್ನಿ ಲಲಿತಮ್ಮರಿಗೆ ಸೇರಿದ ತಂಬಾಕು ಹದಗೊಳಿಸುವ ಬ್ಯಾರನ್ ಕಟ್ಟಡದ ಗೋಡೆ ಕುಸಿದು ಬಿದ್ದು ಸಂಪೂರ್ಣ ಹಾನಿಯಾಗಿದೆ. ಅರಸು ಕಲ್ಲಹಳ್ಳಿಯ ಕುಮಾರ್‌ರಿಗೆ ಸೇರಿದ ಮನೆ ಬಿದ್ದು ಹೋಗಿದೆ.

ಹಾರಿ ಹೋದ ಮೇಲ್ಛಾವಣಿ: ಚಿಲ್ಕುಂದದಲ್ಲಿ ಸೋಮವಾರ ಸಂಜೆ ಬೀಸಿದ ಬಿರುಗಾಳಿಗೆ ರಾಮಶೆಟ್ಟರ ಮನೆ ಮೇಲ್ಛಾವಣಿ ಹಾಗೂ ಚಂದ್ರು ಅವರ ಕೊಟ್ಟಿಗೆಗೆ ಹಾಕಿದ್ದ ಕಲ್ನಾರ್ ಶೀಟ್ ಹಾರಿ ಹೋಗಿದ್ದು ಮನೆಯೊಳಗಿದ್ದ ದವಸ, ಧಾನ್ಯ, ಬಟ್ಟೆ ಮತ್ತಿತರ ಪದಾರ್ಥಗಳು ನೀರಿನಲ್ಲಿ ತೋಯ್ದು ಹಾಳಾಗಿದೆ.

ಜೋಳದ ಬಿತ್ತನೆ ನಾಶ: ಗುರುಪುರ ಗ್ರಾಪಂ ವ್ಯಾಪ್ತಿಯ ಕಾಳೇನಹಳ್ಳಿಯ ತಗ್ಗುಪ್ರದೇಶದ ಜಮೀನುಗಳಲ್ಲಿ ಅಪಾರ ಪ್ರಮಾಣದ ಮಳೆ ನೀರು ನಿಂತಿದ್ದು, ಇತ್ತೀಚೆಗೆ ಬಿತ್ತನೆ ಮಾಡಿದ್ದ ನಟೇಶ್, ಶ್ರೀನಿವಾಸ್, ಆನಂದ, ಕಲೀಂ ಮತ್ತಿತರ ರೈತರಿಗೆ ಸೇರಿದ ಮುಸುಕಿನ ಜೋಳ ಹಾಗೂ ರಸಗೊಬ್ಬರ ಸಹಿತ ನೀರುಪಾಲಾಗಿದೆ.

ಕೋಡಿ ಒಡೆದ ಅತ್ತಿಕುಪ್ಪೆ ಕೆರೆ: ಅತ್ತಿಕುಪ್ಪೆಯ 7 ಎಕರೆ ವಿಸ್ತೀರ್ಣದ ಸರ್ಕಾರಿ ಕೆರೆ ಕೋಡಿ ಒಡೆದು ಅಪಾರ ಪ್ರಮಾಣದ ನೀರು ಜಮೀನಿನ ಮೇಲೆ ಹರಿದಿದ್ದು, ಕೆರೆ ಕೆಳಭಾಗದ ಅಡಕೆ, ತೆಂಗಿನ ತೋಟ, ಶುಂಠಿ, ತಂಬಾಕು ಜಮೀನು ಜಲಾವೃತವಾಗಿದ್ದು, ಕಣ್ಣು ಹಾಯಿಸಿದೆಲ್ಲೆಡೆ ಜಮೀನು ಕೆರೆಗಳಂತೆ ಗೋಚರಿಸುತ್ತಿವೆ.

ಕಂದಾಯಾಧಿಕಾರಿಗಳ ಭೇಟಿ: ಹನಗೋಡು ನಾಡ ಕಚೇರಿ ರಾಜಸ್ವ ನಿರೀಕ್ಷಕ ಪ್ರಶಾಂತರಾಜೇ ಅರಸ್, ಗ್ರಾಮ ಆಡಳಿತಾಧಿಕಾರಿಗಳಾದ ಸುನೀಲ್ ಅಂತೋಣಿರಾಜ್, ಮಲ್ಲೇಶ್, ಸುಮಂತ್ ಅತ್ತಿಕುಪ್ಪೆ ಕೆರೆ ಕೋಡಿ ಒಡೆದು ಹಾನಿಗೊಳಗಾಗಿರುವ ಪ್ರದೇಶ ಹಾಗೂ ಕಲ್ಲಹಳ್ಳಿ, ತಟ್ಟೆಕೆರೆ, ಹೊಸಕೋಟೆ, ಕಚುವಿನಹಳ್ಳಿಗೆ ಭೇಟಿ ನೀಡಿ ಬೆಳೆ, ಮನೆ, ಬ್ಯಾರನ್ ಹಾನಿ ಪರಿಶೀಲಿಸಿದರು. ಇಷ್ಟೊಂದು ಬೆಳೆ ನಷ್ಟವಾಗಿದ್ದರೂ ಯಾವುದೇ ಜನಪ್ರತಿ ನಿಧಿಗಳಾಗಲಿ, ಹಿರಿಯ ಅಧಿಕಾರಿಗಳಾಗಲಿ ಹಾನಿ ಪ್ರದೇಶಕ್ಕೆ ಭೇಟಿ ನೀಡದಿರುವುದು ರೈತರಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಬೆಟ್ಟದಪುರದಲ್ಲಿ ಅದ್ಧೂರಿ ಬಸವ, ಶಿವಕುಮಾರಶ್ರೀ ಜಯಂತಿ



ಬೆಟ್ಟದಪುರದಲ್ಲಿ ಬಸವೇಶ್ವರ, ಶಿವಕುಮಾರ ಸ್ವಾಮೀಜಿಗಳ ಜಯಂತಿ ಆಚರಿಸಲಾಯಿತು.

ಬೆಟ್ಟದಪುರ, ಮೇ 20– ಗ್ರಾಮದ ವೀರಶೈವ ಲಿಂಗಾಯತ ಸಮಾಜದಿಂದ ಜಗಜ್ಯೋತಿ ಬಸವೇಶ್ವರರು ಹಾಗೂ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಗಳ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಗ್ರಾಮದ ಪವಾಡ ಬಸವೇಶ್ವರ ದೇವಾಲಯದ ಆವರಣದಲ್ಲಿ ಬಸವಣ್ಣ ಹಾಗೂ ಶಿವಕುಮಾರಸ್ವಾಮಿಗಳ ಭಾವಚಿತ್ರವನ್ನು ವಿವಿಧ ಹೂಗಳಿಂದ ಅಲಂಕೃತಗೊಂಡ ಟ್ರ್ಯಾಕ್ಟರ್‌ನಲ್ಲಿಟ್ಟು ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಾವಚಿತ್ರಗಳ ಮೆರವಣಿಗೆ ಸಾಗಿತು. ಈ ವೇಳೆ ಯುವಕರು ಓಕುಳಿ ಆಡುವ ಮೂಲಕ ಮೆರವಣಿಗೆಗೆ ಮೆರಗು ನೀಡಿದರು. ಬಳಿಕ ಗ್ರಾಮದ ಪವಾಡ ಬಸವೇಶ್ವರ ದೇವಾಲಯದ ಆವರಣದಲ್ಲಿ ಕೋಸಂಬರಿ ಹಾಗೂ ಪಾನಕವನ್ನು ವಿತರಿಸಲಾಯಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ವೀರಶೈವ ಲಿಂಗಾಯತ ಸಮಾಜದ ಗೌರವಾಧ್ಯಕ್ಷ ನಾಗಣ್ಣ, ಅಧ್ಯಕ್ಷ ಶಿವದೇವಪ್ಪ, ಕಾರ್ಯದರ್ಶಿ ಶಿವು, ಹಿರಿಯರಾದ ಬಿ.ಜಿ. ಜಗದೀಶ್ ಪಟೇಲ್, ನಟೇಶ್, ಮಾದಪ್ಪ, ತೋಟಪ್ಪಶೆಟ್ಟಿ, ಸುರೇಶ್, ಡಿ.ಟಿ.ನಟೇಶ್, ವಿಎಸ್‌ಎಸ್‌ಎನ್ ಕಾರ್ಯದರ್ಶಿ ವಿಜಯ್, ವೀರಶೈವ ಲಿಂಗಾಯತ ನೌಕರರ ತಾಲೂಕು ಅಧ್ಯಕ್ಷ ಬಿ.ಸಿ.ಮಹದೇವಪ್ಪ, ಮಂಜುನಾಥ್, ಗ್ರಾಪಂ ಸದಸ್ಯ ರಜನಿಕಾಂತ್, ಸೋಮಶೇಖರ್, ಮಹದೇವಪ್ಪ, ರಮೇಶ್, ಕೂರ್ಗಲ್ ಶಿವಕುಮಾರಸ್ವಾಮಿ, ಕೊಣಸೂರು ಗ್ರಾಮದ ಆನಂದ್, ವೀರಪ್ಪ, ಬಸವೇಶ್ವರ ಯುವಕ ಸಂಘದ ವಿಕಾಸ್, ಪುನೀತ್, ಎಸ್.ಮಲ್ಲೇಶ್, ಗಗನ್, ಸಂಜಯ್, ಮಂಜುನಾಥ್, ಮಾದೇಶ್, ನಂದೀಶ್ ಹಾಗೂ ಅರ್ಚಕ ಶಿವಮೂರ್ತಿ ಸೇರಿದಂತೆ ಇತರರಿದ್ದರು.

ತಿ.ನರಸೀಪುರದಲ್ಲಿ ಭಾರಿ ಮಳೆ: ಜನಜೀವನ ಅಸ್ತವ್ಯಸ್ತ



ತಿ.ನರಸೀಪುರ, ಮೇ 20– ಪಟ್ಟಣದಲ್ಲಿ ಸೋಮವಾರ ಸುರಿದ ಭಾರಿ ಮಳೆಯಿಂದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿದೆ.

ಪಟ್ಟಣದ ಸುಶೀಲಮ್ಮ ಕಾಲೋನಿ, ತುರುಕನಕಟ್ಟೆ, ಮಾಧವರಾವ್ ಬೀದಿ ಅಕ್ಕಪಕ್ಕದ ಬಡಾವಣೆಗಳ ಮನೆಗಳಿಗೆ ಮಳೆ ನೀರು ನುಗ್ಗಿ ದಿನಬಳಕೆಯ ವಸ್ತುಗಳು ನೀರು ಪಾಲಾಗಿದೆ.

ಜೋರು ಮಳೆಯಿಂದಾಗಿ ತಗ್ಗು ಪ್ರದೇಶದ ಬಡಾವಣೆಗೆ ನೀರು ತುಂಬಿ ಕೆರೆಯಂತಾಗಿತ್ತು. ಮಳೆ ನೀರು ತುಂಬಿರುವುದರಿಂದ ರಾತ್ರಿ ಇಡೀ ಎಚ್ಚರಿದಿಂದ ಇರಬೇಕಿದೆ ಮತ್ತು ಮನೆಯಲ್ಲಿದ್ದ ದಿನಸಿ ಪದಾರ್ಥಗಳೆಲ್ಲ ನೀರು ಪಾಲಾಗಿದ್ದು, ನಮ್ಮ ಗೋಳು ಕೇಳುವರಿಲ್ಲ ಎಂದು ಇಲ್ಲಿನ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

ಮಳೆ ಬಂದರೆ ಈ ಬಡಾವಣೆಗಳಲ್ಲಿ ವಾಸಿಸುವ ನಿವಾಸಿಗಳ ಮನೆಗಳಿಗೆ ನೀರು ನುಗ್ಗುತ್ತದೆ. ರಸ್ತೆ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಎರಡೂ ಕಡೆ ಚರಂಡಿ ನಿರ್ಮಾಣ ಮಾಡದಿರುವುದರಿಂದ ಮಳೆ ಬಂದರೆ ನೀರೆಲ್ಲವೂ ಮನೆಗಳಿಗೆ ನುಗ್ಗುತ್ತದೆ. ಇನ್ನು ಸ್ಥಳೀಯ ಪುರಸಭೆ ಗಮನಕ್ಕೆ ತಂದು ಚರಂಡಿ ನಿರ್ಮಾಣಕ್ಕೆ ಮನವಿ ಮಾಡಿದರೂ ಇಲ್ಲಿಯವರೆಗೆ ಚರಂಡಿ ನಿರ್ಮಾಣ ಮಾಡಿಲ್ಲ. ನೀವು ತಗ್ಗು ಪ್ರದೇಶದಲ್ಲಿ ಮನೆ ಕಟ್ಟಿದ್ದೀರಾ, ನಾವು ಏನು ಮಾಡುವುದಕ್ಕೆ ಆಗುವುದಿಲ್ಲ ಎಂದು ಉಡಾಫೆ ಉತ್ತರ ನೀಡುತ್ತಾರೆ ಎಂದು ನಿವಾಸಿಗಳು ಪುರಸಭೆ ಅಧಿಕಾರಿಗಳಿಗೆ ವಿರುದ್ಧ ಆಕ್ರೋಶ ಹೊರಹಾಕಿದರು.

ಚುನಾವಣೆ ಬಂದಾಗ ಮಾತ್ರ ಮತ ಕೇಳಲು ಬರುವ ಅಭ್ಯರ್ಥಿಗಳು ಸಮಸ್ಯೆ ಬಗೆಹರಿಸುವ ಭರವಸೆ ನೀಡುತ್ತಾರೆ. ನಂತರ ನಮ್ಮ ಅಳಲು ಕೇಳುವವರಿಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ತವರು ಕ್ಷೇತ್ರವೇ ಆಗಿದ್ದರೂ, ಇಲ್ಲಿನ ನಿವಾಸಿಗಳ ಸಮಸ್ಯೆ ಇಲ್ಲಿವರೆಗೂ ಬಗೆಹರಿದಿಲ್ಲ. ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವರಿಗೆ ಮನವಿ ಮಾಡಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ ಎನ್ನುತ್ತಾರೆ ನಿವಾಸಿಗಳು.

ಒಟ್ಟಾರೆ ಮಳೆಯಿಂದಾಗಿ ಪುರಸಭಾ ವ್ಯಾಪ್ತಿಯ ತಗ್ಗು ಪ್ರದೇಶದ ಬಡಾವಣೆ ನಿವಾಸಿಗಳು ತೀವ್ರತೊಂದರೆಗೆ ಒಳಗಾಗಿದ್ದಾರೆ. ಈ ನಿಟ್ಟಿನಲ್ಲಿ ಜನರ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ತಾಲೂಕು ಆಡಳಿತ ಕಾರ್ಯ ನಿರ್ವಹಿಸಬೇಕಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅರಮನೆ 4 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಗಧೀರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಗ ನಾನ್ ಥಾನ್ ಕಿಂಗು (ತ)	4 ಪ್ರದರ್ಶನಗಳು
ಸಂಗಂ	
ಕೃಷ್ಣ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಯುವ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಇಫ್ 2024 (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಮ.1.45ಕ್ಕೆ, ದಿ ಬಾಯ್ ಅಂಡ್ ದಿ ಹೆರಾನ್ (ಜ): ಸಂ.4.45ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.7.20ಕ್ಕೆ,
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.55ಕ್ಕೆ, A (ಕ): ಮ.1.20ಕ್ಕೆ, ಶ್ರೀಕಾಂತ್ (ಹಿಂ): ಸಂ.4.25ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಸುರೇಶಿಂತೆಯುಂ ಸುಮಲತಾಯುದೆಯುಂ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಸ್ವಿಚ್ ಕೇಸ್ ಎನ್ (ಕ): ಬೆ.10.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.1.15ಕ್ಕೆ, ರಾ.7.20ಕ್ಕೆ, ಕೃಷ್ಣ ನೀ ಬೇಗನೆ ಬಾರೋ (ಕ): ಸಂ.4.15ಕ್ಕೆ, ಅಪರಿಚಿತುಡು (ತೆ): ರಾ.10ಕ್ಕೆ.
ಸ್ಕ್ರೀನ್ 4	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.50ಕ್ಕೆ, ಮ.12.55ಕ್ಕೆ, ಮ.3ಕ್ಕೆ, ಸಂ.5.05ಕ್ಕೆ, ರಾ.10.05ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಾಮನ ಅವತಾರ (ಕ): ಮ.1.30ಕ್ಕೆ, ಸಂ.4.20ಕ್ಕೆ, ರಣಹದ್ದು (ಕ): ರಾ.7.10ಕ್ಕೆ.
ಸ್ಕ್ರೀನ್ 2	ಅರಮನೈ 4 (ತ): ರಾ.7ಕ್ಕೆ.
ಸ್ಕ್ರೀನ್ 3	ಗುರುವಾಯೂರಂಬಲ ನಡಾಯಿಲ್ (ಮ): ರಾ.7ಕ್ಕೆ.
ಸ್ಕ್ರೀನ್ 4	ಅರಮನೈ 4 (ತ): ಮ.1.30ಕ್ಕೆ, ಕಿರಾತಕ 2 (ಕ): ಸಂ.4.25ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.7.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಲಿ ಹೆಜ್ಜೆ ಗುರುತು ಪತ್ತೆ: ಆತಂಕ

ಮಲ್ಕುಂಡಿ, ಮೇ 20– ಗ್ರಾಮದ ಹೊರವಲಯದ ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದೆ.



ಗ್ರಾಮದ ಗುರುಮಲ್ಲಪ್ಪ ಎಂಬುವರ ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು, ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ. ಈಗಾಗಲೇ ಮಳೆ ಪ್ರಾರಂಭವಾಗಿದ್ದು, ರೈತರು ಜಮೀನಿಗೆ ತೆರಳಿ ಕೃಷಿ ಚಟುವಟಿಕೆ ಕೈಗೊಳ್ಳಲು ಭಯಭೀತಗೊಂಡಿದ್ದಾರೆ. ಹುಲಿ ಹೆಜ್ಜೆ ಗುರುತು ಪತ್ತೆಯಾದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅರಣ್ಯಾಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದು, ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಹುಲಿ ಪತ್ತೆಗಾಗಿ ಸಿಸಿ ಕ್ಯಾಮರಾವನ್ನು ಅಳವಡಿಸಿದ್ದು, ತಕ್ಷಣ ಹುಲಿ ಸೆರೆ ಹಿಡಿಯಬೇಕೆಂದು ಒತ್ತಾಯಿಸಿದ್ದಾರೆ.

ಬದುಕನ್ನು ಅರ್ಥೈಸಿಕೊಳ್ಳುವುದೇ ನಿಜವಾದ ಶಿಕ್ಷಣ

ಆಧ್ಯಾತ್ಮ ಚಿಂತಕ ಶಂಕರ್ ದೇವನೂರು

ನಂಜನಗೂಡು, ಮೇ 20– ಮಕ್ಕಳಿಗೆ ಪಠ್ಯ, ಪಠ್ಯೇತರ ವಿಷಯಗಳನ್ನು ಕಲಿಸುವುದಷ್ಟೇ ಶಿಕ್ಷಣವಲ್ಲ. ಬದುಕುವುದನ್ನು ಕಲಿಸುವುದು ನಿಜವಾದ ಮೌಲ್ಯಯುತ ಶಿಕ್ಷಣ ಎಂದು ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ಹೇಳಿದರು.

ನಗರದ ಹೌಸಿಂಗ್‌ಬೋರ್ಡ್ ಕಾಲೋನಿಯಲ್ಲಿರುವ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ ಯೋಗ ಮಹಾಮನೆಯಲ್ಲಿ ಭಾನುವಾರ ನಡೆದ ಮಕ್ಕಳ ಉಚಿತ ಯೋಗ ಮತ್ತು ಬೌದ್ಧಿಕ್ ವಸಂತ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಮಾತು, ಮನಸ್ಸು, ಮಣ್ಣನ್ನು ಶುದ್ಧವಾಗಿಟ್ಟುಕೊಂಡಾಗ ಮಾತ್ರ ಬದುಕು ಸುಂದರವಾಗಲು ಸಾಧ್ಯ. ಮಣ್ಣು ರಾಷ್ಟ್ರಾಭಿಮಾನದ ಪ್ರತೀಕ. ಪ್ರಸ್ತುತ ಶಿಕ್ಷಣ ಮತ್ತು ಬದುಕಿನ ನಡುವೆ ಅಂತರವಿದೆ. ಹಾಗಾಗಿ ನಮ್ಮ ಮಕ್ಕಳು ಬದುಕನ್ನು ಅರ್ಥೈಸಿಕೊಳ್ಳುವಲ್ಲಿ ಸೋತಿದ್ದಾರೆ. ಬದುಕನ್ನು ಅರ್ಥೈಸಿಕೊಳ್ಳುವುದೇ ನಿಜವಾದ ಶಿಕ್ಷಣ. ಮಕ್ಕಳಿಗೆ ನಾವು ಶಾಲಾ ಕಾಲೇಜುಗಳಲ್ಲಿ ನೀಡುತ್ತಿರುವ ಶಿಕ್ಷಣ ನೈತಿಕ ಬದುಕನ್ನು ಕಲಿಸಿಕೊಡುತ್ತಿಲ್ಲ. ಬುದ್ಧಿವಂತರೆಲ್ಲರೂ ಒಳ್ಳೆಯವರಾಗಿರುವುದಿಲ್ಲ. ಒಳ್ಳೆಯವರೆಲ್ಲರೂ ಬುದ್ಧಿವಂತರಾಗಿರುವುದಿಲ್ಲ. ಬುದ್ಧಿವಂತರಾಗಿ ಒಳ್ಳೆಯವರಾಗಬೇಕಿದೆ. ಬಾಗುವಿಕೆಯಲ್ಲಿ ಬದುಕಿದೆ, ಬೀಗುವಿಕೆಯಲ್ಲಿ ಬದುಕಿಲ್ಲ ಎಂಬುದನ್ನು ಮಕ್ಕಳಿಗೆ ಹೇಳಿಕೊಡಬೇಕಿದೆ. ನಮ್ಮ ಬದುಕು ನದಿಯಂತೆ ಮೂಲಸ್ವರೂಪ ಕಳೆದುಕೊಳ್ಳಬಾರದು. ನಮ್ಮ ಪರಂಪರೆ, ಸಂಸ್ಕೃತಿ, ಆಚರಣೆಗಳು ನಮ್ಮನ್ನು ಕಾಯಬೇಕು ಹಾಗೂ ಒಟ್ಟುಗೂಡಿಸಬೇಕೇ ಹೊರತು ಬೇರ್ಪಡಿಸಬಾರದು ಎಂದರು.



ನಂಜನಗೂಡಿನ ಯೋಗ ಮಹಾಮನೆಯಲ್ಲಿ ನಡೆದ ಮಕ್ಕಳ ಉಚಿತ ಯೋಗ ಮತ್ತು ಬೌದ್ಧಿಕ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ ಮಕ್ಕಳನ್ನು ಸನ್ಮಾನಿಸಲಾಯಿತು.

ನಾವು ಬದುಕಿನ ಧಾವಂತದಲ್ಲಿ ವೇಗವಾಗಿ ಚಲಿಸುತ್ತಿದ್ದು ಜೀವಪರ ಚಿಂತನೆಯಿಂದ ದೂರ ಸರಿದಿದ್ದೇವೆ. ಸಂಸ್ಕಾರ ಎಂಬುದು ಹೋಳಿಗೆಯ ಹೂರಣ ಇದ್ದ ಹಾಗೆ. ಹೋಳಿಗೆ ಹೊರಗಿನ ತೋರಣ ಕೆಟ್ಟರೂ ಒಳಗಿನ ಹೂರಣ ಕೆಡಬಾರದು. ನಮ್ಮ ಬುದ್ಧಿ, ಭಾವ, ಚಿತ್ತ ಶುದ್ಧವಾಗಿಟ್ಟುಕೊಳ್ಳಬೇಕು. ಮಾತು ನಮ್ಮನ್ನು ಬೆಳಗಬೇಕೇ ಹೊರತು ಕೊಲ್ಲಬಾರದು. ವಾಣಿ ಬಾಣವಾದರೆ ರಣರಂಗವಾಗುತ್ತದೆ. ಅದೇ ವಾಣಿ ವೀಣೆಯಾದರೆ ಬದುಕು ನಾದಮಯವಾಗಿರುತ್ತದೆ ಎಂದು ಹೇಳಿದರು.

ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿಯ ನೈತಿಕ ಮೌಲ್ಯ ಕೊಟ್ಟರೆ ಅಸಾಧ್ಯವಾದುದು ಯಾವುದೂ ಇಲ್ಲ. ಆದರೆ ನಾವು ಮಕ್ಕಳನ್ನು ಆಸೆಗಳಲ್ಲಿ ಬಂಧಿಸಿಟ್ಟಿದ್ದೇವೆ. ಗದ್ದಲದಲ್ಲಿ ಮುಳುಗಿಸಿದ್ದೇವೆ. ಮಾನವತ್ವದಿಂದ ದೈವತ್ವದೆಡೆಗೆ ಸಾಗುವುದೇ ಯೋಗ. ಆ ಯೋಗ ಜೀವನ ನಮ್ಮೆಲ್ಲರದ್ದಾದರೆ ಸ್ವಾಸ್ಥ್ಯ ಸಮಾಜ ಕಟ್ಟಬಹುದು ಎಂದು ಆಶಿಸಿದರು. ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ ಮಾತನಾಡಿ, ಕಳೆದ 20 ದಿನಗಳಿಂದ ನಡೆದ ವಸಂತ ಶಿಬಿರದಲ್ಲಿ ಪ್ರತಿದಿನ ಸಂಪನ್ಮೂಲ ವ್ಯಕ್ತಿಗಳು ಮಕ್ಕಳಿಗೆ ಅಗತ್ಯವಿರುವ ಮೌಲಿಕ ಮಾತುಗಳನ್ನು ಹೇಳಿಕೊಟ್ಟಿದ್ದಾರೆ. ಅದೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಸತ್ಪ್ರಜೆಗಳಾಗುವ ನಿಟ್ಟಿನಲ್ಲಿ ಮಕ್ಕಳು ಮುಂದಾಗಬೇಕು. ಹಾಗಾದರೆ ನಮ್ಮ ಪ್ರಯತ್ನ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ ಯೋಗ ಬಂಧುಗಳ ಮಕ್ಕಳನ್ನು ಸನ್ಮಾನಿಸಲಾಯಿತು. ಬಳಿಕ ಶಿಬಿರದ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ, ನಂಜನ ಗೂಡು ಯೋಗ ಫೌಂಡೇಶನ್ ಅಧ್ಯಕ್ಷ ಪ್ರಕಾಶ್, ಎಸ್‌ಪಿವೈ ಎಸ್‌ಎಸ್ ನರಸಿಂಹರಾಜ ಉಪನಗರ ಸಂಚಾಲಕ ಶ್ರೀಶೈಲ, ಹೈಕೋರ್ಟ್ ವಕೀಲ ಪಿ.ಮಹೇಶ ಉಪಸ್ಥಿತರಿದ್ದರು.

ವಯಸ್ಕರಿಗೆ ಯೋಗ, ಧ್ಯಾನ, ಆಧ್ಯಾತ್ಮ ಶಿಕ್ಷಣ ಸಿಕ್ಕರೆ ಸಾಲದು. ಭವಿಷ್ಯದ ಮಕ್ಕಳಿಗೆ ಸಂಸ್ಕಾರ, ಪರಂಪರೆಯ ಅರಿವು, ನೈತಿಕ ಮೌಲ್ಯವನ್ನು ಬಿತ್ತಿದರೆ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ ಎಂಬ ಸದಾಶಯದೊಂದಿಗೆ ಕಳೆದ 15 ವರ್ಷಗಳಿಂದ ಬೇಸಿಗೆಯಲ್ಲಿ ಉಚಿತ ಯೋಗ ಮತ್ತು ಬೌದ್ಧಿಕ್ ವಸಂತ ಶಿಬಿರವನ್ನು ಆಯೋಜಿಸುತ್ತಾ ಬರಲಾಗಿದೆ. ಇದಕ್ಕೆ ಅನೇಕ ಸಹೃದಯರು ಸೇವೆ ಸಲ್ಲಿಸುತ್ತಾ ಬೆನ್ನೆಲುಬಾಗಿ ನಿಂತಿದ್ದಾರೆ.

– ಎನ್.ಆರ್.ಗಣೇಶಮೂರ್ತಿ, ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಕಾರ್ಯದರ್ಶಿ.



ಶ್ರೀ ಎಲ್.ಚೌಡಪ್ಪ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
VISMAYA ADVERTISERS 8050302414
ಶುಭ ಕೋರುವವರು : ಎಲ್. ಚೌಡಪ್ಪ ಸ್ನೇಹ ಬಳಗ



ಚಾಮರಾಜ ಕ್ಷೇತ್ರದ ಜನಪ್ರಿಯ ಬಿ.ಜೆ.ಪಿ. ಮುಖಂಡರಾದ
ಶ್ರೀ ಎಲ್.ಚೌಡಪ್ಪ ರವರಿಗೆ ಹುಟ್ಟುಹಬ್ಬದ ಶುಭಾಶಯಗಳು
May 21st 2024
ಬಸವರಾಜು
ಸಿ.ಡಿ.ಕುಮಾರ್
ಜ್ಞಾನೇಶ್‌ಅರುಣ್
ನಾಗರಾಜು
ಎಲ್.ನಾಗೇಂದ್ರ
ಮಾಜಿ ಶಾಸಕರು
ಚಾಮರಾಜ ವಿಧಾನಸಭಾ ಕ್ಷೇತ್ರ
ಹಾಗೂ
ಬಿ.ಜೆ.ಪಿ. ನಗರಾಧ್ಯಕ್ಷರು
ಗಿರೀಶ
ಪ್ರ.ಕಾರ್ಯದರ್ಶಿ
ಎಸ್.ಸಿ.ಮೋರ್ಚಾ
ವಿನಯ್
ದೀಪಕ್‌ಗೌಡ
(DX)
ಕೀರ್ತಿ
ಶುಭಕೋರುವವರು
ಎಲ್.ಚೌಡಪ್ಪ ಸ್ನೇಹ ಬಳಗ
ಎಸ್.ಅರುಣ್‌ಕುಮಾರ್
ಚಂದ್ರು
ರಾಜಾಹುಲಿ
ದೀಪಕ್‌ಗೌಡ
ಪಡುವಾರಹಳ್ಳಿ
ಎಂ. ರಾಮಕೃಷ್ಣ
ಎಸ್.ಟಿ.ಮೋರ್ಚಾ
ನಗರಾಧ್ಯಕ್ಷರು